# ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 18-19 -20 ಏಪ್ರಿಲ್ 28–ಮೇ 11, 1997 ಬೆಲೆ ರೂ. 2.00

# ನಿರಂತರ ಬೆಲೆಯೇರಿಕೆಯ ಜತೆಗೆ ಇನ್ನಷ್ಟು ಹೊರೆಗಳು

## ಸಿಪಿಐ(ಎಂ) ಪೊಲಿಟ್‌ಬ್ಯೂರೋ ಆತಂಕ

## "ಜನಗಳಿಗೆ ನೀಡಿದ ಭರವಸೆಗಳ ಜ್ಯಾರಿಗೆ ಆದ್ಯತೆ ನೀಡಿ"

ಜನಸಾಮಾನ್ಯರು ನಿರಂತರ ಬೆಲೆಯೇರಿಕೆಗಳಿಂದ ತತ್ತರಿಸುತ್ತಿದ್ದರೂ ಅವರ ಮೇಲೆ ಇನ್ನಷ್ಟು ಹೊರೆಗಳನ್ನು ಹಾಕುವ ಕ್ರಮ ಮುಂದುವರೆಯುತ್ತಲೇ ಇದೆ. ಇತ್ತೀಚೆಗೆ ಪ್ರಧಾನಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳು ಪೆಟ್ರೋಲಿಯಂ ಪದಾರ್ಥಗಳ ಬೆಲೆಗಳನ್ನು ಇನ್ನಷ್ಟು ಏರಿಸುವ ಸೂಚನೆ ನೀಡಿದ್ದಾರೆ. ಇದು ಒಟ್ಟಾರೆಯಾಗಿ ಹಣದುಬ್ಬರವನ್ನು ಇನ್ನಷ್ಟು ಹೆಚ್ಚಿಸಿ ಜನಗಳ ಮೇಲೆ ಇನ್ನಷ್ಟು ಹೊರೆ ಹಾಕಲಿದೆ. ಹಲವಾರು ಸಬ್ಸಿಡಿಗಳನ್ನು ಕಡಿತ ಮಾಡಬೇಕೆಂಬ ಹಣಕಾಸು ಮಂತ್ರಿಗಳ ಇತ್ತೀಚಿನ ಪ್ರಸ್ತಾಪ ಜನಗಳ ಕಷ್ಟಕೋಟಲೆಗಳಿಗೆ ಮತ್ತಷ್ಟು ಸೇರಿಸುವ ಹವಣಿಕೆಯನ್ನು ತೋರುವಂತದ್ದು. ಒಂದೆಡೆ ಹೀಗೆ ಜನಸಾಮಾನ್ಯರ ಮೇಲಿನ ಹೊರೆಗಳನ್ನು ಹೆಚ್ಚಿಸುತ್ತಲೇ ಇದ್ದರೆ, ಇನ್ನೊಂದೆಡೆ ಸಂಯುಕ್ತ ರಂಗದ "ಸಮಾನ ಕನಿಷ್ಠ ಕಾರ್ಯಕ್ರಮ"ದಲ್ಲಿ ಜನರಿಗೆ ಪರಿಹಾರ ನೀಡುವ ಬಗ್ಗೆ ನೀಡಿದ ವಿವಿಧ ಭರವಸೆಗಳನ್ನು ಈಡೇರಿಸುವಲ್ಲಿ ಸಂಯುಕ್ತ ರಂಗ ಸರಕಾರ ವಿಫಲವಾಗಿದೆ. ಕಡು ಬಡವರಿಗೆ ಅರ್ಧ ಬೆಲೆಗಳಲ್ಲಿ ಆಹಾರ ಧಾನ್ಯ ಒದಗಿಸುವ ವ್ಯವಸ್ಥೆಯೂ ಇನ್ನೂ ಜಾರಿಗೆ ಬಂದಿಲ್ಲ.

ಇದು ಪ್ರಸ್ತುತ ಆರ್ಥಿಕ ಸನ್ನಿವೇಶಗಳ ಬಗ್ಗೆ ಸಿಪಿಐ(ಎಂ)ನ ಪೊಲಿಟ್‌ಬ್ಯೂರೋ ವ್ಯಕ್ತಪಡಿಸಿರುವ ಆತಂಕ. ನವದೆಹಲಿಯಲ್ಲಿ ಮೇ 3 ಹಾಗೂ 4 ರಂದು ಸಭೆ ಸೇರಿದ್ದ ಪೊಲಿಟ್ ಬ್ಯೂರೋ ಇತ್ತೀಚಿನ ರಾಜಕೀಯ ಬೆಳವಣಿಗೆಗಳ ಕುರಿತು ವಿಮರ್ಶೆ ನಡೆಸಿತು. ಸಿಪಿಐ(ಎಂ)ನ ಕೇಂದ್ರ ಸಮಿತಿ ಮೇ 12, 13 ಹಾಗೂ 14ರಂದು ಸಭೆ ಸೇರಿ ರಾಜಕೀಯ ಆಗು ಹೋಗುಗಳನ್ನು ಹಾಗೂ ದೇಶದ ಪ್ರಸ್ತುತ ಪರಿಸ್ಥಿತಿ ಹಾಗೂ ಜನಸಾಮಾನ್ಯರ ಸ್ಥಿತಿಗತಿಗಳ ಬಗ್ಗೆ ವಿವರವಾದ ಚರ್ಚೆ ನಡೆಸಲಿದೆ.

ಜನಗಳಿಗೆ ಆರ್ಥಿಕ ಪರಿಹಾರ ನೀಡುವ ಭರವಸೆಗಳು ಮಾತ್ರವೇ ಅಲ್ಲ, ಇನ್ನೂ ಹಲವು ಭರವಸೆಗಳನ್ನು ಸಂಯುಕ್ತ ರಂಗ ಸರಕಾರ ಈಡೇರಿಸಿಲ್ಲ ಎಂದು ಪೊಲಿಟ್‌ಬ್ಯೂರೋ ಆತಂಕ ವ್ಯಕ್ತಪಡಿಸಿದೆ. ಲೋಕಪಾಲ ಮಸೂದೆ, ಮಹಿಳೆಯರಿಗೆ ಮೀಸಲಾತಿಯ ಮಸೂದೆ, ಕೃಷಿ ಕಾರ್ಮಿಕರಿಗೆ ಸಮಗ್ರ ಕಾನೂನು ಮುಂತಾದ 'ಸಮಾನ ಕನಿಷ್ಠ ಕಾರ್ಯಕ್ರಮ'ದ ಹಲವು ಭರವಸೆಗಳು ಇನ್ನೂ ಕಾನೂನಿನ ರೂಪ ಪಡೆದಿಲ್ಲ. **ಸಂಯುಕ್ತ ರಂಗ ಸರಕಾರ ತನ್ನ ಆದ್ಯತೆಗಳನ್ನು ಗುರುತಿಸಿಕೊಂಡು ಜನಗಳಿಗೆ ನೀಡಿರುವ ಭರವಸೆಗಳನ್ನು ಈಡೇರಿಸಬೇಕು ಎಂದು ಸಿಪಿಐ (ಎಂ) ಪೊಲಿಟ್‌ಬ್ಯೂರೋ ಆಗ್ರಹಪಡಿಸಿದೆ.**

ಹಣಕಾಸು ಮಸೂದೆಯ ಬಗ್ಗೆ ಸಿಪಿಐ (ಎಂ) ಮತ್ತು ಇತರ ಮೂರು ಎಡಪಕ್ಷಗಳು ಪ್ರಧಾನಮಂತ್ರಿಗಳಿಗೆ ಒಂದು ಮನವಿಯನ್ನು ಅರ್ಪಿಸಿದ್ದು(ಪುಟ 2 ನೋಡಿ) ಪ್ರಧಾನಮಂತ್ರಿಗಳು ಈ ಬಗ್ಗೆ ಚರ್ಚೆ ನಡೆಸುವುದಾಗಿ ಭರವಸೆ ನೀಡಿದ್ದರು. ಈ ಕೊನೆಯ ಹಂತದಲ್ಲಾದರೂ ಎಡಪಕ್ಷಗಳ ಜನಪರ ಪ್ರಸ್ತಾವಗಳನ್ನು ಅಳವಡಿಸಿಕೊಳ್ಳಲಾಗುವುದೆಂದು ಪೊಲಿಟ್‌ಬ್ಯೂರೋ ಆಶಯ ವ್ಯಕ್ತಪಡಿಸಿದರು. ಸಬ್ಸಿಡಿಗಳನ್ನು ಕಡಿತ ಮಾಡಿದರೆ ಸರಕಾರದ ಬಳಿ ಹೆಚ್ಚು ಹಣ ಒದಗಿಸಲು ಸಾಧ್ಯ ಎಂಬ ಹಣಕಾಸು ಮಂತ್ರಿಗಳ ಭರವಸೆ ಹುಸಿ ಭರವಸೆ ಎಂದು ಸುರ್ಜಿತ್ ಈ ಬಗ್ಗೆ ಪತ್ರಿಕಾ ಸಮ್ಮೇಳನವೊಂದರಲ್ಲಿ ಅಭಿಪ್ರಾಯಪಟ್ಟಿದ್ದಾರೆ. 'ಸಮಾನ ಕನಿಷ್ಠ ಕಾರ್ಯಕ್ರಮ'ದಲ್ಲೂ ಈ 'ಲ್ಲಾ ಅಂಶಗಳು, ಭರವಸೆಗಳು ಇವೆ. ಆದರೆ ಅವನ್ನು ಜ್ಯಾರಿ ಮಾಡಲು ಯಾವುದೇ ಕ್ರಮ ಕೈಗೊಂಡಿಲ್ಲ. "ಚಿದಂಬರಂರವರಿಗೆ ಈ ಕ್ರಮಗಳ ಬಗ್ಗೆ ಎಳ್ಳಷ್ಟು ಕಾಳಜಿಯಿಲ್ಲ, ಅವರಿಗೆ ದೊಡ್ಡ ವ್ಯಾಪಾರಸ್ಥರಿಂದ, ವಿದೇಶೀ ಬಹುರಾಷ್ಟ್ರೀಯ ಕಂಪನಿಗಳಿಂದ ಹೊಗಳಿಕೆ ಗಿಟ್ಟಿಸುವುದರಲ್ಲೇ ಹೆಚ್ಚು ಆಸಕ್ತಿ" ಎಂದು ಸುರ್ಜಿತ್ ಟೀಕಿಸಿದರು.

'ಸಮಾನ ಕನಿಷ್ಠ ಕಾರ್ಯಕ್ರಮ'ದಲ್ಲಿ 'ಅವರ ಅಜೆಂಡಾ'(ಉದಾರೀಕರಣ-ಪರ ಅಂಶಗಳು) 'ನಮ್ಮ ಅಜೆಂಡಾ'(ರೈತರು, ಕಾರ್ಮಿಕರ ಪರವಾದ ಅಂಶಗಳು) ಇವೆ. ಸಂಯುಕ್ತ ರಂಗ ಸರಕಾರ ನಮ್ಮ ಅಜೆಂಡಾವನ್ನು ಕಾರ್ಯಗತಗೊಳಿಸಲು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಖೇದ ವ್ಯಕ್ತಪಡಿಸಿದರು.

ಈಗಿನ ಆರ್ಥಿಕ ನೀತಿಗಳ ನಕಾರಾತ್ಮಕ ಅಂಶಗಳ ವಿರುದ್ಧ ಸಾಮೂಹಿಕ ಹೋರಾಟಗಳನ್ನು ಬಲಪಡಿಸಿ ದೂರಕ್ಕೊಯ್ಯಲು ಪೊಲಿಟ್ ಬ್ಯೂರೋ ನಿರ್ಧರಿಸಿದೆ ಎಂದು ಸುರ್ಜಿತ್ ಹೇಳಿದರು.

ಹವಾಲಾ ಕೇಸಿನಲ್ಲಿ ದಿಲ್ಲಿ ಹೈಕೋರ್ಟಿನ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟಿನಲ್ಲಿ ಅಪೀಲು ಸಲ್ಲಿಸಬೇಕೆಂಬ ಸಿಬಿಐನ ಪ್ರಸ್ತಾವವನ್ನು ಸರಕಾರ ಕೂಡಲೇ ಅಂಗೀಕರಿಸಬೇಕು ಎಂದೂ ಪೊಲಿಟ್‌ಬ್ಯೂರೋ ಕರೆ ನೀಡಿದೆ. ಸಂಯುಕ್ತ ರಂಗ ಸರಕಾರ ಸುಪ್ರೀಂ ಕೋರ್ಟಿಗೆ ಅಪೀಲು ಹೋಗದಂತೆ ವಿವಿಧ ವಲಯಗಳಿಂದ ಒತ್ತಡ ಬರುತ್ತಿರುವುದು ದುರದೃಷ್ಟಕರ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಈ ಒತ್ತಡಗಳಿಗೆ ತಲೆಬಾಗುವುದೆಂದರೆ ವ್ಯವಸ್ಥೆಯಲ್ಲಿ ಹಾಸು ಹೊಕ್ಕಾಗಿಬಿಟ್ಟಿರುವ ಭ್ರಷ್ಟಾಚಾರವನ್ನು ತೊಡೆದು ಹಾಕಿ ವ್ಯವಸ್ಥೆಯನ್ನು ಶುದ್ಧಗೊಳಿಸಲಾಗುವುದೆಂಬ ಸಂಯುಕ್ತರಂಗದ ವಚನವನ್ನು ಭಂಗ ಮಾಡಿದಂತಾಗುತ್ತದೆ ಎಂದು ಅದು ಎಚ್ಚರಿಸಿದೆ.

ತಕ್ಷಣ ಇಂತಹ ಅಪೀಲಿಗೆ ಅನುಮತಿಯಿತ್ತು ತನ್ನ ವಿಶ್ವಾಸಾರ್ಹತೆಯನ್ನು, ವಚನವನ್ನು ಎತ್ತಿ ಹಿಡಿಯಬೇಕು ಎಂದು ಸಂಯುಕ್ತ ರಂಗ ಸರಕಾರಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಕರೆ ನೀಡಿದೆ.

ಆರೋಪ ಪತ್ರ ದಾಖಲಾದ ಕೂಡಲೇ ಬಿಹಾರದ ಮುಖ್ಯಮಂತ್ರಿಗಳೂ ಸೇರಿದಂತೆ ಅಧಿಕಾರದ ಸ್ಥಾನಗಳಲ್ಲಿರುವವರೆಲ್ಲಾ ರಾಜೀನಾಮೆ ನೀಡಬೇಕೆಂಬ ಎಡಪಕ್ಷಗಳ ಆಗ್ರಹವನ್ನು ಪುನರುಚ್ಚರಿಸಿರುವ ಪೊಲಿಟ್ ಬ್ಯೂರೋ ವಿಚಾರಣೆಯನ್ನು ಎದುರಿಸುವ ಬದಲು ವಿಚಾರಣೆಯ ಪ್ರಕ್ರಿಯೆಯನ್ನು ವಿಫಲಗೊಳಿಸುವ ಪ್ರಯತ್ನಗಳು ನಡೆಯುತ್ತವೆ ಎಂದು ಖೇದ ವ್ಯಕ್ತಪಡಿಸಿದೆ. **ಸಂಯುಕ್ತ ರಂಗ ಸರಕಾರ ಭ್ರಷ್ಟಾಚಾರದ ವಿರುದ್ಧ ಹೋರಾಟದಲ್ಲಿ ದೃಢವಾಗಿರಬೇಕು, ತಪ್ಪಿತಸ್ಥರೆಂದು ಕಂಡು ಬಂದವರ ವಿರುದ್ಧ ಬೇಗನೇ ಕ್ರಮ ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಕರೆ ನೀಡಿದೆ.**

### ಸಿಪಿಐ(ಎಂ) 16ನೇ ಮಹಾಧಿವೇಶನ

ಸಿಪಿಐ(ಎಂ)ನ 16ನೇ ಮಹಾಧಿವೇಶನವನ್ನು ಫೆಬ್ರವರಿ 1998ರಲ್ಲಿ ಕಲ್ಕತ್ತೆಯಲ್ಲಿ ನಡೆಸಬೇಕೆಂಬ ಪ್ರಸ್ತಾವವನ್ನು ಕೇಂದ್ರ ಸಮಿತಿಯ ಮುಂದಿಡಲು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಮೇ 3-4ರ ಸಭೆ ನಿರ್ಧರಿಸಿದೆ. ಶೋಷಣಾರಹಿತ ಸಮಾಜದ ನಿರ್ಮಾಣಕ್ಕಾಗಿ ಹೋರಾಟಕ್ಕೆ ವೈಜ್ಞಾನಿಕ ದಿಕ್ಕು ನೀಡಿದ "ಕಮ್ಯುನಿಸ್ಟ್ ಪ್ರಣಾಳಿಕೆ" ಕೃತಿಯ ಪ್ರಕಟಣೆಯ 150ನೇ ವಾರ್ಷಿಕೋತ್ಸವದ ವರ್ಷದಲ್ಲಿ ಈ ಮಹಾಧಿವೇಶನ ನಡೆಯಲಿದೆ. ಸ್ಥಳ, ದಿನಾಂಕಗಳು ಹಾಗೂ ಸಿದ್ಧತಾ ಕಾರ್ಯಗಳ ಬಗ್ಗೆ ಮೇ 12 ರಿಂದ 14ರವರೆಗೆ ನಡೆಯಲಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಸಭೆ ನಿರ್ಧರಿಸಲಿದೆ.

# ಮಂಗಳೂರು ಮಹಾಪಾಲಿಕೆ ಚುನಾವಣೆ- ಕಲಿಯತಕ್ಕದ್ದೇನು?

ಅಧಿಕೃತವಾಗಿ ಏಳು ವರ್ಷಗಳ ಹಿಂದೆಯೇ ನಡೆಯಬೇಕಾಗಿದ್ದ ಮಂಗಳೂರು ಮಹಾನಗರಪಾಲಿಕೆಯ ಚುನಾವಣೆ ೧೯೯೭ರ ಮಾರ್ಚ್ ೨೭ರಂದು ನಡೆಯಿತು. ಕರ್ನಾಟಕದ ರಾಜಕೀಯದಲ್ಲಿ ಬೆಂಗಳೂರು ಮತ್ತು ಮಂಗಳೂರು ಮಹಾ ನಗರ ಪಾಲಿಕೆಯ ಚುನಾವಣೆಗೆ ಮಹತ್ವ ಇದೆ. ವಿಧಾನಸೌಧದಲ್ಲಿ ಭಗವಾ ಝಂಡಾ ಹಾರಿಸಲಿಕ್ಕೆ ತರಾತುರಿಯಲ್ಲಿರುವ ಬಿಜೆಪಿ ಬಹಳ ದಿನಗಳಿಂದ ಕನಸು ಕಾಣುತ್ತಿತ್ತು, ಅದೇನು ಗೊತ್ತೆ? ರಾಜ್ಯದ ಆರು ಮಹಾ ನಗರಪಾಲಿಕೆಗಳಾದ-ಬೆಂಗಳೂರು, ಮಂಗಳೂರು, ಮೈಸೂರು, ಹುಬ್ಬಳ್ಳಿ- ಧಾರವಾಡ, ಗುಲ್ಬರ್ಗ-ಗಳ ಪೈಕಿ ಬೆಂಗಳೂರು ಮತ್ತು ಮಂಗಳೂರುಗಳನ್ನು ತಮ್ಮದಾಗಿಸಿ ಕೊಂಡು ರಾಜ್ಯದಲ್ಲಿ ತನ್ನ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುವ ಆಸೆ ಅದರದಾಗಿತ್ತು. ದಕ್ಷಿಣ ಕನ್ನಡ ಮತ್ತು ಬೆಂಗಳೂರು ನಗರಗಳಲ್ಲಿ ತಾನೇ ಅತ್ಯಂತ ಹೆಚ್ಚು ಪ್ರಭಾವಿತ ಶಕ್ತಿಯಾಗಿದ್ದೇನೆಂಬ ಭಾವನೆ ಬಿಜೆಪಿಗಿದೆ. ಯಾಕೆಂದರೆ ಹೋದ ಚುನಾವಣೆಯಲ್ಲಿ ಒಂದು ಲೋಕಸಭಾ ಸ್ಥಾನದಲ್ಲಿ ಹಾಗೂ ವಿಧಾನಸಭೆ ಚುನಾವಣೆಯಲ್ಲಿ ಎಂಟು ವಿಧಾನಸಭೆ ಸ್ಥಾನಗಳಲ್ಲಿ ಗೆಲುವು ಕಂಡಿರುವ ಬಿಜೆಪಿ ಇಡೀ ದಕ್ಷಿಣ ಕನ್ನಡ ಜಿಲ್ಲೆ ತನ್ನದಾಗಿದೆಂದು ಭಾವಿಸಿ ಮೊನ್ನೆ ನಡೆದ ಮಂಗಳೂರು ಮಹಾನಗರ ಪಾಲಿಕೆಯ ಆಡಳಿತೆಯ ಸೂತ್ರ ಹಿಡಿಯುವ ಉದ್ದೇಶದಿಂದ ತಾವು ಅಧಿಕಾರಕ್ಕೆ ಬಂದರೆ ಮುಂದಿನ ನಾಲ್ಕು ವರ್ಷ ಮನೆಗಳ ಮೇಲಿನ ತೆರಿಗೆ(ಹೌಸ್ ಟ್ಯಾಕ್ಸ್) ಹೆಚ್ಚಿಸುವುದಿಲ್ಲೆಂಬ ಘೋಷಣೆ ಮಾಡಿತ್ತು.


ಏಳು ವರ್ಷಗಳ ನಂತರ ನಡೆದ ಈ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಬಹುಮತ ಬಂದಿಲ್ಲ. ಒಟ್ಟು ೬೦ ಸ್ಥಾನಗಳ ಪೈಕಿ ಕಾಂಗ್ರೆಸ್ ಪಕ್ಷ ೨೮, ಬಿಜೆಪಿ ೨೪, ಜನತಾದಳ ೭, ಸಿಪಿಐ ೧ ಸ್ಥಾನ ಪಡೆದಿವೆ.

ದಕ್ಷಿಣ ಕನ್ನಡ ಜಿಲ್ಲೆ ಪ್ರಾರಂಭದಿಂದಲೂ ಕಾಂಗ್ರೆಸ್ಸಿನ ಭದ್ರಕೋಟೆಯಾಗಿಯೇ ಉಳಿದಿತ್ತು. ಹತ್ತು ವರ್ಷಗಳ ಹಿಂದೆ ರಾಜ್ಯದಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂದಾಗ ದ.ಕ. ಜಿಲ್ಲೆಯಲ್ಲಿ ಆ ಪಕ್ಷಕ್ಕೆ ತಕ್ಕಮಟ್ಟಿನ ಬೆಂಬಲ ದೊರಕಿತ್ತು. ಅಮರನಾಥ ಶೆಟ್ಟಿಯಂಥವರು ಹೆಗಡೆ ಸರಕಾರದಲ್ಲಿ ಮಂತ್ರಿ ಸ್ಥಾನದಲ್ಲಿದ್ದರು. ಅಖಿಲ ಭಾರತ ಮಟ್ಟದಲ್ಲಿ ಜನತಾ ಪಕ್ಷ ಜನತಾದಳವಾಗಿ ಪರಿವರ್ತನೆ ಆದಾಗ ಕರ್ನಾಟಕದಲ್ಲಿ ದೇವೇಗೌಡ ಮೊದಲಾದವರು ಜನತಾ ಪಕ್ಷವನ್ನು ಉಳಿಸಿಕೊಂಡಾಗ ದ.ಕ. ಜಿಲ್ಲೆಯ ಹೆಚ್ಚಿನವರು ಅದರಲ್ಲೇ ಉಳಿದಿದ್ದರು. ಆದರೆ ರಾಜ್ಯದ ಬಹುಭಾಗ ದಳದಲ್ಲಿ ಸೇರಿಕೊಂಡಿತ್ತು. ಸಾಹಿತ್ಯ ಸಂಸ್ಕೃತಿಗಳಲ್ಲಿ ಮಾತ್ರವಲ್ಲ ಸ್ವಾತಂತ್ರ್ಯ ಹೋರಾಟದ ಪ್ರಾರಂಭದ ದಿನಗಳಿಂದಲೂ ಪುರೋಗಾಮಿ ವಿಚಾರಧಾರೆಯ ರಾಜಕೀಯ ನಿಲುವು ಹೊಂದಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಜನ ಹಿಂದುತ್ವಕ್ಕೆ ಬಲಿಯಾಗುತ್ತಾ ಬಂದಿರುವುದರ ಪರಿಣಾಮ ಬಿಜೆಪಿಗೆ ಕುಮ್ಮಕ್ಕು ನೀಡಿ ಜಿಲ್ಲೆಯಲ್ಲಿ ಅದರ ಪ್ರಭಾವ ಬೆಳೆಯಲಿಕ್ಕೆ ಸಹಾಯವಾಗಿದೆ.

ಕಾಂಗ್ರೆಸ್ಸಿನಲ್ಲಿ ಜನಾರ್ಧನ ಪೂಜಾರಿ ಮತ್ತು ವೀರಪ್ಪ ಮೊಯಿಲಿಗಳ ಪ್ರಭಾವಿತ ಗುಂಪುಗಳೊಳಗೆ ವೈಮನಸ್ಸು ಮತಭೇದಗಳಿದ್ದಾಗಲೂ ಕಾಂಗ್ರೆಸ್ ೬೦ರಲ್ಲಿ ೨೮ ಸ್ಥಾನಗಳನ್ನು ಗೆದ್ದಿರುವುದನ್ನು ನೋಡುವಾಗ ಅಸೆಂಬ್ಲಿ- ಪಾರ್ಲಿಮೆಂಟ್ ಚುನಾವಣೆಗಳ ನಂತರ ಜಿಲ್ಲೆಯ ರಾಜಕೀಯದಲ್ಲಿ ಬದಲಾವಣೆಗಳಾಗುತ್ತಿದೆಯೇ ಎಂಬುದನ್ನು ಗಮನಿಸುವುದು ಅಗತ್ಯ.

ಹೀಗೆ ಕಾಂಗ್ರೆಸ್ ಮತ್ತು ಬಿಜೆಪಿಗಳ ಬಲಾಬಲಗಳನ್ನು ವೀಕ್ಷಿಸುತ್ತಿರುವಾಗ ನಾವು ಅತಿ ಮುಖ್ಯವಾಗಿ ಎರಡು ಅಂಶಗಳತ್ತ ಗಮನ ಹರಿಸಬೇಕಾಗಿದೆ. ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಜನತಾ ದಳದ ಸೋಲು, ಜನತಾದಳದ ನಕಾರಾತ್ಮಕ ಆಡಳಿತೆ, ಅದರೊಳಗಿನ ಆಂತರಿಕ ಜಗಳ, ಭಿನ್ನಾಭಿಪ್ರಾಯಗಳು, ನಿರ್ದಿಷ್ಟ ನಿಲುಮೆಗಳ ಅಭಾವ, ಜಾತಿ, ಉಪ ಜಾತಿಗಳನ್ನು ತಮ್ಮ ಮಿತ್ರ ಪಕ್ಷಗಳಾದ ಎಡಪಕ್ಷಗಳ ಬಗ್ಗೆ ಉಪೇಕ್ಷೆ ಇವೆಲ್ಲವುಗಳಿಂದ ಜನರಲ್ಲಿ ಜನತಾದಳದ ಕುರಿತು ಆತ್ಮೀಯ ಭಾವನೆ ಇಲ್ಲದಂತಾಗಿದೆ. ರಾಜ್ಯದ ಜನತಾದಳದ ಮುಖಂಡರು ಅನುಭವಗಳಿಂದ ಪಾಠ ಕಲಿಯುತ್ತಿಲ್ಲ. ಕಲಿಯುವ ಹವ್ಯಾಸಕ್ಕೆ ಹೋಗುವುದಿಲ್ಲ. ಹೋದ ಲೋಕಸಭೆ ಚುನಾವಣೆಯಿಂದೀಚೆಗೆ ಕೇಂದ್ರದಲ್ಲಿಯ ಘಟನೆಗಳು ರಾಜ್ಯ ಮುಖಂಡತ್ವದ ಮೇಲೆ ಏನೂ ಪರಿಣಾಮ ಬೀರಿದಂತೆ ಕಂಡುಬರುವುದಿಲ್ಲ.

ಪುಟ 7 ನೋಡಿ



ಬೃಹತ್ ಬಹಿರಂಗ ಸಭೆಯ ಒಂದು ದೃಶ್ಯ

ವಿವರಗಳು ಪುಟ 4ರಲ್ಲಿ



# ಬಜೆಟ್ ಹಣ ನೀಡಿಕೆಯಲ್ಲಿನ ಆದ್ಯತೆಗಳನ್ನು ಬಡ ಜನತೆಯ ಪರವಾಗಿ ಬದಲಿಸಿ

## - ಪ್ರಧಾನ ಮಂತ್ರಿಗಳಿಗೆ ಎಡಪಕ್ಷಗಳ ಮನವಿ

*ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹರ್ಕಿಶನ್ ಸಿಂಗ್ ಸುರ್ಜಿತ್, ಸೀತಾರಾಂ ಯೆಚೂರಿ ಹಾಗೂ ಸೋಮನಾಥ ಚಟರ್ಜಿ, ಸಿಪಿಐ ನ ಎಂ.ಫಾರುಕೆ ಹಾಗೂ ಶಮೀಂ ಫೈಜಿ, ಆರ್‌ಎಸ್‌ಪಿಯ ಅಬನಿ ರಾಯ್ ಮತ್ತು ಫಾರ್ವರ್ಡ್ ಬ್ಲಾಕ್ಸ್‌ನ ಡಿ.ಡಿ.ಶಾಸ್ತ್ರಿ ಏಪ್ರಿಲ್ 29 ರ ಸಂಜೆ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಬಜೆಟ್‌ನಲ್ಲಿ ಎಡ ಪಕ್ಷಗಳು ಬಯಸುವ ಬದಲಾವಣೆಗಳನ್ನು ಕುರಿತಂತೆ ಒಂದು ಜ್ಞಾಪಕ ಪತ್ರವನ್ನು ಸಲ್ಲಿಸಿದರು. ಇವು ಜನತೆ ಮತ್ತು ದೇಶದ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಸೂಚಿಸಿರುವ ಬದಲಾವಣೆಗಳು ಎಂದು ಪತ್ರದಲ್ಲಿ ಹೇಳಲಾಗಿತ್ತು. ವಿಮಾ ವಲಯವನ್ನು ಖಾಸಗಿಯವರಿಗೆ ತೆರೆಯಬಾರದು, ಲಾಭದಲ್ಲಿರುವ ಪ್ರಮುಖ ವಲಯಗಳಲ್ಲಿನ ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳ ಮಾರಾಟದ ಪ್ರಸ್ತಾಪವನ್ನು ಹಿಂತೆಗೆದುಕೊಳ್ಳಬೇಕು, ರೇಶನ್ ವ್ಯವಸ್ಥೆಗೆ ಹೆಚ್ಚಿನ ಹಣ ಒದಗಿಸಬೇಕು, ಸಿರಿವಂತ ವಿಭಾಗಗಳಿಗೆ ಕಂಪನಿ ವಲಯಕ್ಕೆ ನೀಡಿರುವ ರಿಯಾಯ್ತಿಗಳನ್ನು ಪರಿಷ್ಕರಿಸಬೇಕು, ದೇಶೀ ಉದ್ದಿಮೆಗಳನ್ನು ತಟ್ಟುವ ಸಣ್ಣ ಉದ್ದಿಮೆಗಳನ್ನು ತಟ್ಟುವ ಅನಗತ್ಯ ಆಮದುಗಳಿಗೆ ಪ್ರೋತ್ಸಾಹ ನೀಡುವ ತೆರಿಗೆ, ಸುಂಕ ಕಡಿತಗಳನ್ನು ಮರು ಪರಿಶೀಲಿಸಬೇಕು ಹಾಗೂ ಒಟ್ಟಾರೆ ಬಜೆಟ್ ಹಣ ನೀಡಿಕೆಯಲ್ಲಿ ಆದ್ಯತೆಗಳನ್ನು ಬದಲಿಸಿ ಗ್ರಾಮೀಣ ಅಭಿವೃದ್ಧಿ, ಕೃಷಿ ಹಾಗೂ ಸಾಮಾಜಿಕ ವಲಯಕ್ಕೆ ಹೆಚ್ಚಿನ ಹಣ ನೀಡಬೇಕು ಎಂದು ಎಡಪಕ್ಷಗಳು ಒತ್ತಾಯಿಸಿವೆ.*

*ಪ್ರಧಾನ ಮಂತ್ರಿಗಳಿಗೆ ನಾಲ್ಕು ಎಡ ಪಕ್ಷಗಳು ಸಲ್ಲಿಸಿದ ಜ್ಞಾಪನಾ ಪತ್ರದ ಒಕ್ಕಣೆ ಈ ಕೆಳಗಿನಂತಿದೆ.*

"ಎಡ ಪಕ್ಷಗಳು ಹಣಕಾಸು ಮಸೂದೆಗೆ ಬಯಸುವ ಕೆಲವು ತಿದ್ದುಪಡಿಗಳನ್ನು ನಿಮ್ಮ ಗಮನಕ್ಕೆ ತರಬಯಸುತ್ತೇವೆ. ಇವನ್ನು ಸರಕಾರ ಗಂಭೀರವಾಗಿ ಪರಿಗಣಿಸಬೇಕು ಎಂಬುದು ನಮ್ಮ ಭಾವನೆ.

ಫೆಬ್ರವರಿ ಅಂತ್ಯದಲ್ಲಿ ಬಜೆಟ್ ತಯಾರಿಸುವ ಕೆಲಸಗಳು ಆರಂಭವಾದಾಗ ಸಂಯುಕ್ತರಂಗ ಚಾಲನಾ ಸಮಿತಿ ಸಮಯದ ಅಭಾವದಿಂದಾಗಿ ರಂಗದ ಅಂಗಪಕ್ಷಗಳು ತರಬಯಸುವ ತಿದ್ದುಪಡಿಗಳನ್ನು ಹಣಕಾಸು ಮಸೂದೆಯ ಮೇಲಿನ ಚರ್ಚೆಯ ವೇಳೆಗೆ ಪರಿಶೀಲಿಸಬಹುದು ಎಂದು ನಿರ್ಧರಿಸಿತ್ತು ಎಂಬುದನ್ನು ನಿಮಗೆ ನೆನಪಿಸಬಯಸುತ್ತೇವೆ. ಈ ನಿರ್ಣಯದ ಆಧಾರದ ಮೇಲೆ ನಾವು ಈ ಕೆಳಗಿನ ಪ್ರಸ್ತಾಪಗಳನ್ನು ಮುಂದಿಡುತ್ತಿದ್ದೇವೆ.

ಎ. ಧೋರಣೆಗಳನ್ನು ಕುರಿತಂತೆ: ೧. ಲಾಭಕರವಾದ ಹಾಗೂ ಮೂಲ ವಲಯದಲ್ಲಿರುವ ಸಾರ್ವಜನಿಕ ವಲಯದ ಘಟಕಗಳ ಶೇರುಗಳ ಮಾರಾಟವನ್ನು ನಿಲ್ಲಿಸಬೇಕು. ೨. ವಿಮಾ ಮತ್ತು ಪೆನ್ಶನ್ ನಿಧಿ ಖಾಸಗೀಕರಣವನ್ನು ನಿಲ್ಲಿಸಬೇಕು. ೩. ಸಣ್ಣ ಪ್ರಮಾಣದ ವಲಯದ ಉತ್ಪಾದನೆಯ ಮೀಸಲಾತಿಯನ್ನು ಹಿಂತೆಗೆದುಕೊಳ್ಳುವ ಪ್ರಸ್ತಾಪವನ್ನು ರದ್ದು ಮಾಡಬೇಕು.

ಬಿ. ಹಣ ನೀಡಿಕೆ ಕುರಿತಂತೆ: ಕೃಷಿ, ಗ್ರಾಮೀಣ ಅಭಿವೃದ್ಧಿ ಮತ್ತು ಉದ್ಯೋಗಾವಕಾಶ ನಿರ್ಮಾಣಕ್ಕೆ ಹೆಚ್ಚಿನ ಹಣ ನೀಡಿಕೆ, ಸಾರ್ವಜನಿಕ ವಲಯದಲ್ಲಿ ಹಣ ಹೂಡಿಕೆಯಲ್ಲಿ ಹೆಚ್ಚಳ ಹಾಗೂ ಖಾದಿ ಮತ್ತು ಕೈ ಮಗ್ಗ ಕ್ಕೆ ಹೆಚ್ಚಿನ ಸಹಾಯಧನ, ರೈಲ್ವೆಗೆ ಹಣ ನೀಡಿಕೆಯನ್ನು ಹೆಚ್ಚಿಸಬೇಕು. ರಾಜ್ಯಗಳಿಗೆ ನೀಡುವ ಹಣದಲ್ಲಿ ನಿಜ ಮೌಲ್ಯದಲ್ಲಿ ಹೆಚ್ಚಳವಾಗಬೇಕು. ಇವನ್ನೆಲ್ಲಾ ಮಾಡಬೇಕಾದರೆ ರೆವಿನ್ಯೂ ಸಂಗ್ರಹಣೆ ಹಾಗೂ ಖರ್ಚಿನಲ್ಲಿ ಹೆಚ್ಚಿನ ದಕ್ಷತೆ ಅಗತ್ಯ

ಇ. ನೇರ ತೆರಿಗೆಗಳು : ೧. ೩,೫೦,೦೦೦ ರೂ. ಗಿಂತ ಹೆಚ್ಚಿನ ಆದಾಯದ ಮೇಲಿನ ತೆರಿಗೆಯನ್ನು ಕಡಿಮೆ ಮಾಡದೆ ಅದನ್ನು ೪೦% ಮಾಡಬೇಕು. ೨. ಕಂಪನಿ ತೆರಿಗೆ ಭಾರತೀಯ ಕಂಪನಿಗಳಿಗೆ ೪೦% ಹಾಗೂ ವಿದೇಶೀ ಕಂಪನಿಗಳಿಗೆ ಹಿಂದಿನ ವರ್ಷದಲ್ಲಿದ್ದಂತೆಯೇ ಇರಬೇಕು. ೩. ಡಿವಿಡೆಂಟ್ ತೆರಿಗೆ ಮುಂದುವರಿಯಬೇಕು ಆದರೆ ಆದಾಯ ತೆರಿಗೆ ಕಾನೂನಿನ ೮೮ ನೇ ಸೆಕ್ಷನ್ ಪ್ರಕಾರ ಡಿವಿಡೆಂಟ್ ಅನ್ನು ತೊಡಗಿಸಿದರೆ ಅದರ ಮಿತಿಯನ್ನು ೬೦,೦೦೦ ರೂ ನಿಂದ ೧ ಲಕ್ಷ ರೂ. ಗೆ ಏರಿಸಬೇಕು. ೪. ಕ್ಷಮಾದಾನ ಯೋಜನೆಯಲ್ಲಿ ತೆರಿಗೆಯನ್ನು ೩೦%ರ ಬದಲು ೬೦% ದರದಲ್ಲಿ ತೆರುವಂತಾಗಬೇಕು.

ಡಿ. ಪರೋಕ್ಷ ತೆರಿಗೆಗಳು, ಕಸ್ಟಮ್ಸ್, ಸುಂಕ, ಅಬಕಾರಿ ಸುಂಕ ಹಾಗೂ ಆಮದು ಸುಂಕಗಳು. ೧.ಅಬಕಾರಿ ಮತ್ತು ಕಸ್ಟಮ್ಸ್ ಸುಂಕಗಳನ್ನು ಹಳೆಯ ದರಗಳಲ್ಲೇ ವಿಧಿಸಬೇಕು. ತೆರಿಗೆ ದರ ಆಯೋಗ ಇದರ ಮರು ವಿಮರ್ಶೆ ಮಾಡುವವರೆಗೆ ಇದು ಮುಂದುವರಿಯಬೇಕು. ೨. ಐಷಾರಾಮದ ಸರಕುಗಳ ಮೇಲಿನ ಆಮದು ಸುಂಕಗಳ ಕಡಿತವನ್ನು ನಿಲ್ಲಿಸಬೇಕು. ಹಿಂದಿನ ದರಗಳೇ ಮುಂದುವರಿಯಬೇಕು. ೩. ಸಣ್ಣ ಪ್ರಮಾಣದ ವಲಯದಲ್ಲಿ ಉತ್ಪಾದಿಸಿದ ಸರಕುಗಳಿಗೆ ಆಮದು ಸುಂಕಗಳನ್ನು ಇಳಿಸಬೇಕು. ೫. ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ವಿನಾಯ್ತಿ ಮಿತಿ ಹಿಂದಿದ್ದ ೨೫ ಲಕ್ಷ ರೂ. ಮಟ್ಟದಲ್ಲೇ ಉಳಿಯಬೇಕು. ೫. ಸಾರಿಗೆಯ ಮೇಲೆ ಸೇವಾ ತೆರಿಗೆ ರದ್ದಾಗಬೇಕು. ೬. ಸೆಣಬು ಉತ್ಪನ್ನಗಳ ಮೇಲಿನ ಅಬಕಾರಿ ಸುಂಕವನ್ನು ರದ್ದು ಮಾಡಬೇಕು.

ಈ ಪ್ರಶ್ನೆಗಳನ್ನು ಗಂಭೀರವಾಗಿ ಪರಿಶೀಲಿಸಿ ಹಣಕಾಸು ಮಸೂದೆಯಲ್ಲಿ ಅಳವಡಿಸಲಾಗುವುದು ಎಂಬುದು ನಮ್ಮ ನಿರೀಕ್ಷೆ. ಸಂಯುಕ್ತ ರಂಗ ಕೇವಲ ದೊಡ್ಡ ವ್ಯಾಪಾರಸ್ಥರ ಹಾಗೂ ಭೂಮಾಲಿಕರ ಹಿತಾಸಕ್ತಿಗಳನ್ನಷ್ಟೇ ಗಮನಿಸುತ್ತದೆ ಎಂಬ ಭಾವನೆ ಜನರಲ್ಲಿ ಉಂಟಾಗದಂತೆ ಮಾಡಬಹುದು".

# "ಬಡವರಿಗೆ ಹೆಚ್ಚಿನ ಬಡತನ ಶ್ರೀಮಂತರಿಗೆ ಹೆಚ್ಚಿನ ಶ್ರೀಮಂತಿಕೆ"

**ವಾರದ ಆರ್ಥಿಕ ಟಿಪ್ಪಣಿಗಳು**

**ಜಿ.ಎಸ್.ಮಣಿ**

ಕೇಂದ್ರದಲ್ಲಿನ ಬಿಕ್ಕಟ್ಟು ಪರಿಹಾರವಾಗಿ ಶ್ರೀಐ.ಕೆ.ಗುಜ್ರಾಲ್ ನೇತೃತ್ವದಲ್ಲಿನ ಹೊಸ ಸಂಯುಕ್ತ ರಂಗ ಸರಕಾರ ಅಧಿಕಾರ ವಹಿಸಿ ಕೊಂಡಿದೆ. ಗುಜ್ರಾಲ್ ಮಹಾಶಯರು ಅಧಿಕಾರ ವಹಿಸಿಕೊಂಡ ಕೂಡಲೇ 'ಆರ್ಥಿಕ ಸುಧಾರಣೆಗಳು' ಇನ್ನೂ ವೇಗದಿಂದ ಮುಂದುವರಿಯಲಿವೆ ಎಂದು ಅಪ್ಪಣೆ ನೀಡಿಯಾಗಿದೆ. ಅದಕ್ಕಿಂತ ಹೆಚ್ಚಾಗಿ ಈ ಸರಕಾರ ಮಾಡಿರುವುದು ಇದು -

ಕೇಂದ್ರ ಮಂತ್ರಿ ಮಂಡಳದ ಮೊದಲ ಸಭೆಯಲ್ಲೇ ದೇವೇಗೌಡರ ಸರಕಾರದಲ್ಲಿ ಹಣಕಾಸು ಮಂತ್ರಿಗಳಾಗಿದ್ದ ಪಿ.ಚಿದಂಬರಂ ಅವರ ಶ್ರೀಮಂತರ ಬಜೆಟ್ಟನ್ನು ಚಾಚೂ ತಪ್ಪದೆ ಒಪ್ಪಿಕೊಂಡಿರುವುದು ಹಿಂದಿನ ಸರಕಾರದ ಬಜೆಟ್ಟೇ ತನ್ನ ಬಜೆಟ್ಟು ಎನ್ನುವಂತೆ ಈ ಬಜೆಟ್ಟನ್ನು ಅದು ಒಪ್ಪಿಕೊಂಡಿದೆ.

ಈ ಬಜೆಟ್ಟು ಅಂತಹ ಜನಪರವಾದ ಬಜೆಟ್ಟಾಗಿದ್ದರೆ ಈ ಒಪ್ಪಿಕೊಳ್ಳುವುದು ಸರಿಯೆನಿಸುತ್ತಿತ್ತು.

ಚಿದಂಬರಂ ಅವರ ಬಜೆಟ್ಟು ಶ್ರೀಮಂತರ ಬಜೆಟ್ಟು ಎಂಬುದು ಸ್ಪಷ್ಟ. ಹೀಗಿರುವಾಗ ಅಂತಹ ಬಜೆಟ್ಟನ್ನು ಅಕ್ಷರಶಃ ಒಪ್ಪಿಕೊಂಡರೆ ಅದೇ ಬಜೆಟ್ಟನ್ನು ದತ್ತು ತೆಗೆದುಕೊಂಡರೆ ಅದು ಏನೇನು ತೋರಿಸುತ್ತದೆ?

ಈ ಸರಕಾರವೂ ಶ್ರೀಮಂತರ ಪರ ಎಂಬುದನ್ನು ಅದು ತೋರಿಸುತ್ತದೆ. ಅಂದರೆ ಗುಜ್ರಾಲರ ಸರಕಾರದಿಂದ ಬಡವರು ಹೆಚ್ಚಿನ ಬಡತನ ಮತ್ತು ಶ್ರೀಮಂತರು ಹೆಚ್ಚಿನ ಶ್ರೀಮಂತಿಕೆಯನ್ನು ನಿರೀಕ್ಷಿಸಬಹುದು ಎಂಬುದು ಈ ಎಲ್ಲದರ ನೀತಿ ಪಾಠವಲ್ಲವೇ?

ಆದರೆ ಇಂತಹ ಸರಕಾರ ತನ್ನ ಕಾಲ ಮೇಲೆ ತಾನೇ ಕಲ್ಲು ಹಾಕಿಕೊಳ್ಳುತ್ತಿದೆಯಲ್ಲವೇ?

# 'ಸುಧಾರಣೆ'ಗಳನ್ನು ನಿಧಾನ ಮಾಡಿದರೆ ಜೋಕೆ! - ಐಎಂಎಫ್ ಬೆದರಿಕೆ

ದೇಶ ರಾಜಕೀಯ ಸಂಕಷ್ಟಗಳ ನಡುವೆ ಇರುವಾಗ ಐಎಂಎಫ್ ಎಂಬ ಸಾಲ ನೀಡುವ ಅಂತರ್ರಾಷ್ಟ್ರೀಯ ಲೇವಾದೇವಿಗಾರ ಭಾರತಕ್ಕೆ ಆರ್ಥಿಕ ಸುಧಾರಣೆಗಳ ಗತಿ ನಿಧಾನ ಮಾಡಿರಾ ಜೋಕೆ ಎಂದಿದ್ದಾನೆ. ನಮ್ಮ ಆರ್ಥಿಕವನ್ನು ನಾವು ಹೇಗೆ ನಡೆಸಬೇಕೆಂಬುದನ್ನು ಎಳೆ ಎಳೆಯಾಗಿ ಹೇಳುತ್ತಿರುವ ಈ ಸಾಲ ಧಣಿ ಐಎಂಎಫ್ ಹೆಚ್ಚಿನ ವೇಗದಲ್ಲಿ ಆರ್ಥಿಕ ಸುಧಾರಣೆಗಳು ಆಗಬೇಕೆಂದು ಹೇಳುತ್ತಲೆ ಬಂದಿದೆ.

ಈಗ 'ವರ್ಲ್ಡ್ ಎಕಾನಾಮಿಕ್ ಔಟ್‌ಲುಕ್' ಎನ್ನುವ ಪುಸ್ತಕದಲ್ಲಿ ಭಾರತ ತನ್ನ ಸುಧಾರಣಾ ಪೂರ್ವದ ಸ್ಥಿತಿಗೆ ಈಗ ಮರಳಿದರೆ ಮತ್ತೆ ಈಗಿನ ಬೆಳವಣಿಗೆ ದರ ಸಾಧಿಸಲು 154 ವರ್ಷಗಳು ಬೇಕಾಗುತ್ತವೆ ಎಂದಿದೆ ಅದು. ಈಗಿನ ಬೆಳವಣಿಗೆ ದರವಾದ ಶೇ 7 ... ಬೆಳವಣಿಗೆ ದರದಲ್ಲೂ ಭಾರತ ಅಭಿವೃದ್ಧಿ ಹೊಂದಿದ ದೇಶಗಳ ತಲಾ ಆದಾಯದ ಅರ್ಧದಷ್ಟು ಸಾಧಿಸಲು 70 ವರ್ಷಗಳು ಬೇಕಾಗುತ್ತವಂತೆ.

ಇದಕ್ಕೆಲ್ಲ ತನ್ನದೇ ಅಂಕಿ-ಅಂಶ ನೀಡಿ ಐಎಂಎಫ್ ಈಗ ನಿರಾಳವಾಗಿ ಕುಂತು ಬಿಡುವಂತಿಲ್ಲ. ಬದಲಿಗೆ ಹೆಚ್ಚಿನ ಉದಾರೀಕರಣ ಮಾಡಬೇಕು. ಹಾಗೆ ಉದಾರೀಕರಣ ಮಾಡುತ್ತಲೇ ಇರಬೇಕು ಎಂದಿದೆ ಅದು. ಉದಾರೀಕರಣ ಮಾಡುತ್ತಾ ಸಾಮ್ರಾಜ್ಯಶಾಹಿಗಳಿಗೆ ನಮ್ಮ ಶೋಷಣೆ ಮಾಡಲು ಅನುಕೂಲ ಮಾಡಿಕೊಡುತ್ತ ನಾವು ದಿವಾಳಿಯೆದ್ದು ಹೋಗಬೇಕೆ? ಐಎಂಎಫ್ ಅಂತೂ ತನ್ನ ಒಳಾಂತರಂಗದಲ್ಲಿ ಇದನ್ನೇ ಬಯಸುವಂತಿದೆ.

### ಉದಾರೀಕರಣದ ಕಾಫಿಯೂ ಕಹಿ

ಅದೂ ಆಯಿತು. ಕಾ... ಉದ್ಯಮವನ್ನೇ ಉದಾರೀಕ... ಸಬೇಕೆಂದರು ದೊಡ್ಡ ಕಾ... ಬೆಳೆಗಾರರು/ವ್ಯಾಪಾರಿಗಳ... ಕಾಫಿಯನ್ನು ರಫ್ತು ಮಾಡಿ ದೇಶ... ವಿದೇಶೀ ವಿನಿಮಯ ತಂದು ಕೊಡುತ್ತೇವೆ(ಜೊತೆಗೆ ನಾವು ನಾ... ಕಾಸು ಮಾಡಿಕೊಳ್ಳುತ್ತೇವೆ)... ಉದಾರೀಕರಣದಿಂದಾಗಿ ದೇಶದ ... ಕಾಫಿಗೆ ಹೆಚ್ಚು ಹಣ ತೆರುವಂತಾ... ವಿದೇಶೀ ವಿನಿಮಯ ದೇಶದೊಳ... [illegible]

# ಸ್ವಯಂಘೋಷಣೆ ಹಗರಣ!

ಈಗಿನ ದಿನಗಳಲ್ಲಿ ಹಗರಣಗಳು ಬಹಳ ಹೆಚ್ಚಾಗಿರುವುದರಿಂದ ಸರಕಾರಗಳಿಗೂ ಹಗರಣ ಯಾವುದು ಯೋಜನೆ ಯಾವುದೆಂಬ ಗೊಂದಲ ಹುಟ್ಟಿರಲೇಬೇಕು. ದೇವೇಗೌಡರ ಸರಕಾರದಲ್ಲಿನ ಹಣಕಾಸು ಮಂತ್ರಿ ಪಿ.ಚಿದಂಬರಂ ತಮ್ಮ ಬಜೆಟ್ ಭಾಷಣದಲ್ಲಿ ಒಂದು ನವೀನ ಯೋಜನೆ ಘೋಷಿಸಿದರು. ಅದರ ಬಗ್ಗೆ ನೀವು ಐಕ್ಯರಂಗದಲ್ಲಿ ಓದಿರುವಿರಿ.

ಈ ಯೋಜನೆಯ ಪ್ರಕಾರ ಕಪ್ಪು ಹಣ ಇರುವವರು ಸ್ವಯಂ ಈ ವಿಷಯವನ್ನು ಘೋಷಿಸಿ ಅದರ ಮೇಲೆ ಗರಿಷ್ಠ ದರ ಆದಾಯ ತೆರಿಗೆ ತೆತ್ತರಾಯಿತು. ವಿವರ ಬೇಕಿಲ್ಲ. ಬಡ್ಡಿ ತೆರಬೇಕಾದಿಲ್ಲ. ಶಿಕ್ಷೆಯಂತೂ ಇಲ್ಲವೇ ಇಲ್ಲ. ಆದರೆ ಇದರ ಕೆಲವು ಪರಿಣಾಮಗಳನ್ನುನೋಡಿ

- ಪ್ರಾಮಾಣಿಕವಾಗಿ ತೆರಿಗೆ ತೆರುವವರಿಗೆ ಪುರಸ್ಕಾರವಿಲ್ಲ. ಗೊತ್ತಿಲ್ಲದೆ ಒಂದು ತಪ್ಪು ಮಾಡಿದರೂ ಈತ ಬಡ್ಡಿ ತೆರಬೇಕು. ಶಿಕ್ಷೆ ಅನುಭವಿಸಬೇಕು.
- ಆದಾಯ ತೆರಿಗೆ ತಪ್ಪಿಸಿದಾತನಿಗೆ ಸಂಪತ್ತು ತೆರಿಯಿಂದಲೂ ವಿನಾಯಿತಿ. ಈತನ ಹೆಸರನ್ನೂ ಗುಟ್ಟಾಗಿಡಲಾಗುತ್ತದೆ.

ಹೀಗೆ ಈ ಯೋಜನೆ ಪ್ರಾಮಾಣಿಕವಾಗಿ ತೆರಿಗೆ ತೆರುವವರಿಗೆ ಅನ್ಯಾಯ ಮಾಡುವ ಯೋಜನೆ ಬೇರೆ ಮಾತುಗಳಲ್ಲಿ ಹೇಳುವುದಾದರೆ ಕಳ್ಳರಿಗೆ ಮಣೆ ಹಾಕುವ ಯೋಜನೆ.

ಈಗ ಹಲವರು(ಬೂರ್ಜ್ವಾ ಬುದ್ದಿಜೀವಿ ಗಳೂ ಸೇರಿದಂತೆ) ಈ ಯೋಜನೆಯ ನೈತಿಕ ಹಾಗೂ ಸಾಂವಿಧಾನಿಕ ಕ್ರಮ ಬದ್ಧತೆಯನ್ನು ಪ್ರಶ್ನಿಸತೊಡಗಿದ್ದಾರೆ.

ಹಿಂದೆ ಇಂತಹುದೇ ಯೋಜನೆಗಳು ಬಂದಾಗ ಸುಪ್ರಿಂಕೋರ್ಟು ಇಂತಹ ಯೋಜನೆಗಳು ಕೃತಿಮವಾಗಿರಬಾರದು, ತೆರಿಗೆ ತಪ್ಪಿಸುವಂತಹವಾಗಿರಬಾರದು ಎಂದು ಹೇಳಿದೆ.

ಹೀಗೆ ಈಗಿನ ಈ ಸ್ವಯಂ ಘೋಷಣಾ ಯೋಜನೆಯನ್ನು ಕೋರ್ಟಿನಲ್ಲಿ ಪ್ರಶ್ನಿಸಬಹುದು, ಕೋರ್ಟು ಕಾನೂನು ಸಂದರ್ಭ ನೋಡಿ ಏನೇ ನಿರ್ಧಾರ ನೀಡಬಹುದು. ಆದರೆ ನೈತಿಕವಾಗಿ ನೋಡುವುದಾದರೆ ಇದೊಂದು ಹಗರಣ ಎಂಬುದು ಸ್ಪಷ್ಟ. 'ಐತಿಹಾಸಿಕ ಬಜೆಟ್' ನ ಕೊಡುಗೆ ಇದು. ಕಾಳ ಹಣವಂತರಿಗೆ ನೀತಿ. ಸಾಧ್ಯವಿರುವಷ್ಟು ಕಪ್ಪುಹಣ ಮಾಡಿಕೊಳ್ಳಿ, ಮುಂದೊಂದು ದಿನ ಇದಕ್ಕೆ ಕಾನೂನು ಬಾಹಿರ ವಿನಾಯಿತಿ ದೊರತೇ ದೊರೆಯುತ್ತದೆ.

ಕಾಳಸಂತೆಕೋರರಿಗೆ ಎಂತಹ ಪ್ರೋತ್ಸಾಹ!! ಅಲ್ಲವೆ?

# ವಿದ್ಯುತ್ ಯೋಜನೆಗಳ ಬೇಟೆಯಲ್ಲಿ ಎನ್ರಾನ್

ಧಾಭೋಲ್‌ನ ವಿದ್ಯುತ್ ಯೋಜನೆಯನ್ನು ಬುಟ್ಟಿಗೆ ಹಾಕಿಕೊಂಡು ಅದರ ರುಚಿ ಕಂಡಿರುವ ಎನ್ರಾನ್ ಎಂಬ ಬಹುರಾಷ್ಟ್ರೀಯ ಕಂಪನಿ ಮತ್ತೆ ಮಹಾರಾಷ್ಟ್ರದಲ್ಲಿ ರೂಪುಗೊಳ್ಳುವ ಏಳು ಮಧ್ಯಮ ಗಾತ್ರದ ವಿದ್ಯುತ್ ಯೋಜನೆಗಳ ಪೈಕಿ ನಾಲ್ಕರ ಬೇಟೆಗೆ ಇಳಿದಿದೆ. ಎನ್ರಾನ್‌ಗೆ ಇವು ಬೇಟೆಗಳು ಎಂದರೆ ತಪ್ಪೇನಿಲ್ಲ. ಯಾಕೆಂದರೆ ಈ ಯೋಜನೆಯ ಹೆಸರಿನಲ್ಲಿ ಯಾವ್ಯಾವ ರೀತಿಯಲ್ಲಿ ಲಾಭ ಮಾಡಿಕೊಳ್ಳಲು ಸಾಧ್ಯವೋ ಆ ರೀತಿಗಳಲೆಲ್ಲ ಅದು ಲಾಭ ಹೊಡೆಯುತ್ತದೆ. ದಾಭೋಲ್ ಯೋಜನೆಯ ವಿಷಯದಲ್ಲಿ ಅದು ನಡೆದುಕೊಂಡ ರೀತಿ ನೋಡಿದವರಿಗೆ ಈ ವಿಷಯದಲ್ಲಿ ಯಾವುದೇ ಸಂದೇಹವೇ ಬರುವುದಿಲ್ಲ.

ಈ ಯೋಜನೆಗಳೆಂದರೆ ವಾಲ್ವೇಜ್ ಮಹಾಡ್, ಶೋಲಾಪುರದ ಹತ್ತಿರದ ಚಿಂಚೋಳಿ ಕಟೆ, ಸತಾರಾದ ಹತ್ತಿರದ ವಾಯಿ ಮತ್ತು ಪುಣೆಯ ಹತ್ತಿರದ ರಂಜಾಗಾಂವ್.

ಈ ಎಲ್ಲ ಯೋಜನೆಗಳಲ್ಲೂ ಪ್ರತಿ ಯೋಜನೆಯ ಸಾಮರ್ಥ್ಯ 150 ರಿಂದ 180 ಮೇ.ವ್ಯಾ. ಇದ್ದು ಇದು ದ್ರವರೂಪದ ಇಂಧನದ ಮೇಲೆ ನಡೆಯುತ್ತದೆ.

ಹದಿನೈದು ವರ್ಷಗಳ ಕಾಂಟ್ರಾಕ್ಟ್ ಬಿಡ್‌ನಲ್ಲಿ ಯಶಸ್ವಿಯಾಗುವ ಕಂಪನಿಗೆ ದೊರೆಯುತ್ತದೆ.

ಎನ್ರಾನ್ ಹಗರಣದ ಮತ್ತೊಂದು ಅಧ್ಯಾಯವನ್ನು ನಿರೀಕ್ಷಿಸೋಣವೇ?

## ಕೋಲಾರದ ಚಿನ್ನದ ಗಣಿ ಮುಚ್ಚಿಕೆ

# ಚಿನ್ನಕ್ಕೆ ಮಣ್ಣು ಹಾಕುವ ಕ್ರಮ

**ಕೋಲಾರದ ಚಿನ್ನದ ಗಣಿಯನ್ನು ಮೇ 31ರಿಂದ ಮುಚ್ಚಲು ಭಾರತ ಸರ್ಕಾರದ ಕಾರ್ಯದರ್ಶಿ ಸಮಿತಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಪ್ರಸ್ತುತ 8 ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿರುವ 50 ವರ್ಷಕ್ಕೂ ಹಳೆಯದಾದ ಈ ಗಣಿಯಲ್ಲಿ ಕಾರ್ಮಿಕರಿಗೆ ತಮ್ಮ ಹಕ್ಕುಗಳನ್ನು ಪಡೆಯಲು ಹೋರಾಟವನ್ನು ರೂಪಿಸಿದ್ದಾರೆ. ಸುಮಾರು 1940 ನೇ ಇಸ್ವಿಯಿಂದಲೂ ಇಲ್ಲಿಯ ಗಣಿ ಕಾರ್ಮಿಕರಿಗಾಗಿ ದುಡಿಯುತ್ತಿದ್ದ, ನೇತೃತ್ವ ನೀಡಿರುವ, ಮತ್ತೆ ನಿರ್ಣಾಯಕ ಶಕ್ತಿಯಾಗಿರುವ ಸಿಐಟಿಯು ರಾಜ್ಯಕಾರ್ಯದರ್ಶಿಗಳಾದ ಕಾಂ.ವಿ.ಜೆ.ಕೆ.ನಾಯರ್‌ರೊಡನೆ ಈ ಸಂದರ್ಭದಲ್ಲಿ ಕರ್ನಾಟಕದ ದುಡಿಯುವ ಜನರ ಧ್ವನಿ 'ಐಕ್ಯರಂಗ' ನಡೆಸಿದ ಒಂದು ಸಂದರ್ಶನ ಇಲ್ಲಿದೆ.**

ಐಕ್ಯರಂಗ : ಕೋಲಾರದ ಚಿನ್ನದ ಗಣಿಯನ್ನು ಮುಚ್ಚಲು ಭಾರತ ಸರ್ಕಾರದ ಕಾರ್ಯದರ್ಶಿಗಳ ಸಮಿತಿ ಶಿಫಾರಸ್ಸಿನ ಬಗ್ಗೆ ನಿಮ್ಮ ಅಭಿಪ್ರಾಯವೇನು?

ವಿಜೆಕೆ: ಕೆ.ಜಿ.ಎಫ್‌ನ ಚಿನ್ನದ ಗಣಿಯನ್ನು ಮುಚ್ಚಲು ನಮ್ಮ ಹಾಗೂ ಅಲ್ಲಿ ದುಡಿಯುವ ಕಾರ್ಮಿಕರ ತೀವ್ರ ವಿರೋಧವಿದೆ. ಚಿನ್ನದ ಗಣಿಯು ಲಾಭಯುತವಾಗಿ ನಡೆಯಬೇಕು ಎಂಬುದು ನಮ್ಮೆಲ್ಲರ ಅಭಿಲಾಷೆಯೂ ಆಗಿದೆ. ಕೈಗಾರಿಕಾ ಹಣಕಾಸು ಮತ್ತು ಪುನರ್ರಚನಾ ಮಂಡಳಿಯ ಪರಿಶೀಲನೆಗೆ ಇದನ್ನು ಒಪ್ಪಿಸಿತ್ತು. ಈ ಮಂಡಳಿ ಬಿಜಿಎಂಎಲ್‌ನ ಪುನರುಜ್ಜೀವನಕ್ಕೆ ಶಿಫಾರಸ್ಸು ಮಾಡಿತು. ಹಾಗೂ ಸಂಸದೀಯ ಸಮಿತಿಯೂ ಕೂಡಾ ಇದೇ ಶಿಫಾರಸ್ಸು ಮಾಡಿತ್ತು. ಇದನ್ನು ಕಾರ್ಯದರ್ಶಿಗಳ ಸಮಿತಿ ಕಡೆಗಣಿಸಿ ಗಣಿಯನ್ನು ಮುಚ್ಚಲು ಶಿಫಾರಸ್ಸು ಮಾಡಿರುವುದುಖಂಡನಾರ್ಹವಾಗಿದೆ.

ಚಿನ್ನದ ಗಣಿಯನ್ನು ಮುಚ್ಚುವ ಅಥವಾ ವಿಸರ್ಜನೆ ಮಾಡುವ ಹಕ್ಕು ಹೈಕೋರ್ಟಿಗೆ ಮಾತ್ರ ಇದೆ.

ಐಕ್ಯರಂಗ: ಕೆ.ಜಿ.ಎಫ್.ನ ಗಣಿಯಲ್ಲಿ ಚಿನ್ನ ಖಾಲಿಯಾಗಿದೆಯಂತೆ ಹೌದೆ?

ವಿ.ಜೆ.ಕೆ.: ನೋಡಿ ಚಿನ್ನ ಖಾಲಿಯಾಗಿದೆ ಎಂಬುದು ಸಕಾರಣವಲ್ಲ. ಅಲ್ಲಿ ಚಿನ್ನ ಸಿಗುವ ಪ್ರಮಾಣ ಸ್ವಲ್ಪ ಕಡಿಮೆಯಾಗಿರಬಹುದು. ಆದರೆ ಗಣಿಯನ್ನು ಮುಚ್ಚುವ ರೀತಿಯಲ್ಲಿ ಚಿನ್ನ ಖಾಲಿಯಾಗಿಲ್ಲ. ಅದರಲ್ಲೇ ಒಂದಾದ ನಂದಿದುರ್ಗ ಮತ್ತು ಚಿಗರಿಗುಂಟೆ ಗಣಿಗಳಲ್ಲಿ ಇನ್ನೂ ಹತ್ತು ವರ್ಷಗಳಾಗುವಷ್ಟು ಚಿನ್ನದ ಅದಿರಿದೆ.

47 ಕೋಟಿ ಬಂಡವಾಳವನ್ನು ವಿನಿಯೋಗಿಸಿದರೆ ಟೈಲಿಂಗ್ಸ್‌ನಿಂದ ಪ್ರತಿ ವರ್ಷ 700 ರಿಂದ 800 ಕೆ.ಜಿ. ಚಿನ್ನ ಉತ್ಪತ್ತಿ ಮಾಡಬಹುದಾಗಿದೆ. ಇದನ್ನು ತಜ್ಞರ ಸಮಿತಿ ಕೂಡಾ ತಿಳಿಸಿದೆ.

ಐಕ್ಯರಂಗ: ಕಂಪನಿ ಎಷ್ಟು ವರ್ಷಗಳಿಂದ ನಷ್ಟ ಅನುಭವಿಸುತ್ತಿದೆ.?ಇದಕ್ಕೆ ಪ್ರಮುಖ ಕಾರಣಗಳೇನು?

ವಿಜೆಕೆ: ಸುಮಾರು ಹತ್ತು ವರ್ಷಗಳಿಂದ ನಷ್ಟ ಅನುಭವಿಸುತ್ತಿದೆ. ನಷ್ಟಕ್ಕೆ ಬೇಕಾದಷ್ಟು ಕಾರಣಗಳಿವೆ.

ಇಲ್ಲಿ ಉತ್ಪತ್ತಿಯಾದ ಚಿನ್ನವನ್ನು ಸರಕಾರವೇ ಖರ್ಚಿನ ಮೇಲೆ ಶೇ 15 ರಷ್ಟು ನೀಡಿ ಕೊಳ್ಳುತ್ತಿತ್ತು. ಉತ್ಪಾದನೆ ಖರ್ಚು ಹೆಚ್ಚಾದಾಗ ಮಾರುಕಟ್ಟೆ ಬೆಲೆ ನೀಡಿ ಖರೀದಿಸುವುದು, ಶಿವನ ಸಮುದ್ರದಲ್ಲಿ ಕಡಿಮೆ ಖರ್ಚಿಗೆ ಉತ್ಪತ್ತಿಯಾದ ವಿದ್ಯುತ್‌ಚ್ಛಕ್ತಿಗೆ ಹೆಚ್ಚಿನ ದರ ವಿಧಿಸುವುದು, ಚಿನ್ನಕ್ಕೆ ಹೆಚ್ಚಿನ ರಾಯಧನ ನೀಡಬೇಕಾಗಿರುವುದು. ಸ್ವಯಂ ನಿವೃತ್ತಿ ಯೋಜನೆಯಿಂದಾಗಿ ಅನುಭವಿ ಹಾಗೂ ಕೌಶಲ್ಯ ಪೂರ್ಣ ಗಣಿಗಳ ಒಳಗೆ ಕೆಲಸ ಮಾಡುವ ಕಾರ್ಮಿಕರನ್ನು ಕಳೆದುಕೊಂಡು ಚಿನ್ನದ ಉತ್ಪಾದನೆ ಕಡಿಮೆಯಾಗಿರುವುದು ಕೂಡಾ ಕಾರಣ.

ಸರಕಾರದ ಸಮರ್ಥ ಆಡಳಿತ ನಿರ್ವಹಣೆಯು ಕೊರತೆ ಹಾಗೂ ಬಿಜಿಎಂಎಲ್ ಸ್ವತಃ ಯೋಜನೆಗಳನ್ನು ರೂಪಿಸಿ ಅಭಿವೃದ್ಧಿ ಪಡಿಸಲು ಸಾಧ್ಯವಾಗದೆ ಇರುವುದು ಕೂಡ ಪ್ರಮುಖ ಕಾರಣವಾಗಿದೆ.

ಐಕ್ಯರಂಗ: ರಾಷ್ಟ್ರೀಯ ನವೀಕರಣ ನಿಧಿ ಎನ್‌ಆರ್‌ಎಫ್ 24.95 ಕೋಟಿ ರೂ. ಸಾಲನೀಡಿಕೆಯಿಂದಉಪಯೋಗವೇನು?

ವಿಜೆಕೆ: ಎನ್.ಆರ್.ಎಫ್. ನಿಂದ ಸಾಲ ಪಡೆಯುವುದು ಎಂದರೆ ಕಾರ್ಮಿಕ ಸ್ವಯಂ ನಿವೃತ್ತಿಗೆ ಉತ್ತೇಜನವಲ್ಲದೆ ಬೇರೇನು ಅಲ್ಲ.

ಐಕ್ಯರಂಗ: ಸದ್ಯದ ಪರಿಸ್ಥಿತಿಯಲ್ಲಿ ಎಷ್ಟು ಹಣ ತೊಡಗಿಸಿದರೆ ಗಣಿಗಾರಿಕೆ ನಡೆಸಲು ಸಾಧ್ಯ?

ವಿಜೆಕೆ: ರೂ 70ಕೋಟಿ ಹಣ ತೊಡಗಿಸಿದರೆ ಗಣಿಯನ್ನು ನಡೆಸಬಹುದಾಗಿದೆ. ಸರಕಾರ ಇಲ್ಲಿಯ ಚಿನ್ನಕೊಳ್ಳುವ ನೀತಿಯಿಂದಾಗಿ ಬಿಜಿಎಂಎಲ್ 500 ಕೋಟಿ ನಷ್ಟವನ್ನು ಅನುಭವಿಸಿತ್ತು. ಹಣ ವಿದ್ದರೆ ಬೇರೆ ಬೇರೆ ಯೋಜನೆ ರೂಪಿಸಿ ಗಣಿಯನ್ನು ವಿಸ್ತಾರಗೊಳಿಸಬಹುದಿತ್ತು

ಐಕ್ಯರಂಗ: ಸಾರ್ವಜನಿಕ ಉದ್ದಿಮೆಗಳನ್ನು ರೋಗಗ್ರಸ್ತಗೊಳಿಸುವ ಉದ್ದೇಶವೇನು?

ವಿಜೆಕೆ: ಸಾರ್ವಜನಿಕ ಉದ್ದಿಮೆಗಳನ್ನು ಬಲವಂತವಾಗಿ ರೋಗಗ್ರಸ್ತಗೊಳಿಸಿ, ಅವುಗಳನ್ನು ಖಾಸಗಿಯವರಿಗೆ ಕೊಡುವುದೇ ಇದರ ಹಿಂದಿರುವ ಬಹುಮುಖ್ಯ ಉದ್ದೇಶವಾಗಿದೆ.

ಐಕ್ಯರಂಗ: ಸರಕಾರ ಕಾರ್ಮಿಕರಿಗೆ ಪರ್ಯಾಯ ಯೋಜನೆಯನ್ನು ರೂಪಿಸಿದೆಯೆ?

ವಿಜೆಕೆ: ಇಲ್ಲಿಯುವರೆಗೆ ಸರಕಾರ ಅಂತಹ ಯಾವುದೇ ಪರ್ಯಾಯವನ್ನು ಸೂಚಿಸಿಲ್ಲ.

ಐಕ್ಯರಂಗ: ಕೋಲಾರದ ಚಿನ್ನದ ಗಣಿಯನ್ನು ಮುಚ್ಚುವುದರ ವಿರುದ್ಧ ಸಿಐಟಿಯುವಿನ ಮುಂದಿನ ಯೋಜನೆ ಏನು?

ವಿಜೆಕೆ: ಬಿಜಿಎಂಎಲ್ ಮುಚ್ಚುವಿಕೆಯ ವಿರುದ್ಧ ಮೇ 1 ರಿಂದ 15 ರ ವರೆಗೆ ಪ್ರಚಾರಾಂದೋಲನ ನಡೆಸಲು ಹಾಗೂ ಮೇ 22 ರಂದು ಸಾಂಕೇತಿಕ ಮುಷ್ಕರ ನಡೆಸಲು ಸಿಐಟಿಯು ತೀರ್ಮಾನಿಸಿದೆ.

## ಹೊನ್ನಾವರ

# ಕೆಲಸಕ್ಕಾಗಿ ಬಂದ ಕಾರ್ಮಿಕರಿಗೆ ಲಾಟಿಪೆಟ್ಟು ಕಲ್ಲಿನ ಏಟು

ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಗಡಿಯಲ್ಲಿರುವ ಅನಂತವಾಡಿ ಪ್ರದೇಶದಲ್ಲಿರುವ ಪೃಥ್ವೀಶ ಟೈಲ್ಸ್ ವರ್ಕ್ಸ್‌ನಲ್ಲಿ ಕೆಲಸ ಮಾಡುವ ಕಾರ್ಮಿಕರು ಸಂಘಟಿತರಾಗಿ ಕನಿಷ್ಟ ಕೂಲಿ ಕೇಳಿದ್ದಕ್ಕಾಗಿ ಆಡಳಿತ ವರ್ಗ ಎಲ್ಲಾ ಕಾರ್ಮಿಕರಿಗೆ ಕೆಲಸ ನಿರಾಕರಣೆ, ಕೆಲಸ ಕೇಳಿ ಬಂದ ಕಾರ್ಮಿಕರಿಗೆ ಪೋಲೀಸರಿಂದ ಲಾಟಿ ಪೆಟ್ಟು ಹಾಗೂ ಕಲ್ಲಿನ ಏಟು ಮತ್ತು ಅಶ್ರುವಾಯು ಪ್ರಯೋಗ. ಹೆಚ್ಚಿನ "ಕಾರ್ಮಿಕರು ಪೋಲೀಸರಿಂದ" ಬಂಧನವಾಯಿತು. ಆಡಳಿತ ವರ್ಗ ಪೋಲೀಸರ ಸಹಕಾರದಿಂದ ಗೂಂಡಾಗಳಿಂದ ಕೆಲಸ ಹಿಡಿಸುವ ಪ್ರಯತ್ನ ಮಾಡಿದರು. ಕಾರ್ಮಿಕ ಅಧಿಕಾರಿಗಳಿಂದ ಹಾಗೂ ಇತರ ಅಧಿಕಾರಿಗಳಿಂದ ಸಮಸ್ಯೆಯನ್ನು ಇತ್ಯರ್ಥಗೊಳಿಸುವ ಬದಲು ಆಡಳಿತ ವರ್ಗಕ್ಕೆ ಬೆಂಬಲ.

ಬಡ ಕಾರ್ಮಿಕರಿಗೆ ಕೆಲಸ ಮತ್ತು ನ್ಯಾಯ ಒದಗಿಸುವ ಬದಲು ಪೋಲೀಸ್ ಅಧಿಕಾರಿಗಳು ಮಾಲಿಕರಿಗೆ ಸಹಾಯ ಮಾಡಿದ್ದನ್ನು ಸಿಐಟಿಯುವಿನ ಉತ್ತರ ಕನ್ನಡ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಹಾಗೂ ಹಂಚು ಕಾರ್ಮಿಕರ ಸಂಘದ ಅಧ್ಯಕ್ಷರಾದ ಶ್ರೀಯುತ ಟಿ.ಎಸ್.ನಾಯುಕ್‌ರು ಖಂಡಿಸಿದರು. ಮಾಲೀಕರು ಕಾರ್ಮಿಕ ವಿರೋಧಿ ಕ್ರಮ ಹಾಗೂ ಪೋಲೀಸ್ ದೌರ್ಜನ್ಯವನ್ನು ಖಂಡಿಸಿ ನ್ಯಾಯಾಂಗ ತನಿಖೆ ನಡೆಸಲು ಸರಕಾರವನ್ನು ಒತ್ತಾಯಿಸಿದರು.

ಮಹಿಳೆಯರೂ ಸೇರಿದಂತೆ ಅನೇಕ ಸಿಐಟಿಯು ಕಾರ್ಯಕರ್ತರಿಗೆ ಗಾಯಗಳಾಗಿದ್ದು ಹೊನ್ನಾವರ ಸರಕಾರಿ ಆಸ್ಪತ್ರೆಗೆ ಸೇರಿಸಲಾಗಿದೆ. 144ನೇ ಕಲಂ ಜಾರಿ ಮಾಡಲಾಗಿ ಮೆರವಣಿಗೆಯನ್ನು ರಾಷ್ಟ್ರೀಯ ಹೆದ್ದಾರಿ ನಂ. 17ರಲ್ಲಿ ತಡೆಯಲಾಗಿ ರಸ್ತೆಯ ಎರಡೂ ಬದಿಗಳಲ್ಲಿ ಕಾರ್ಮಿಕರು ರಸ್ತೆ ತಡೆ ನಡೆಸಿದರು. ಪ್ರಮುಖ ರಾಷ್ಟ್ರೀಯ ಹೆದ್ದಾರಿ ಆದ್ದರಿಂದ ಸಾವಿರಾರು ಜನರು ಈ ದೃಶ್ಯ ವೀಕ್ಷಿಸಿದರು. ಬಿಜೆಪಿ ಶಾಸಕ ಶಿವಾನಂದ ಚೇಲಾಗಳು ಈ ಮಧ್ಯದಲ್ಲಿ ಬಂದು ಕಲ್ಲು ತೂರಾಟ ನಡೆಸಲಾಗಿ ಪೋಲೀಸರು ಏಕಾಏಕಿ ಲಾಠಿ ಚಾರ್ಜ್ ಮಾಡಿದ್ದಲ್ಲದೇ ಕೊನೆಯಲ್ಲಿ ಗಾಳಿಯಲ್ಲಿ ಗುಂಡು ಹಾರಿಸಿದರು. ನಂತರ ಪ್ರಮುಖ ಮುಖಂಡರನ್ನು ಲಾಕಪ್‌ನಲ್ಲಿ ಹಾಕಿರುವ ಸುದ್ದಿ ತಿಳಿದ ಕೂಡಲೇ ಪರಿಸ್ಥಿತಿ ಮತ್ತೆ ಉದ್ರೇಕಗೊಂಡು ಸಾವಿರಾರು ಕಾರ್ಮಿಕರು ಪೋಲೀಸ್ ಠಾಣೆಗೆ ಮುತ್ತಿಗೆ ಹಾಕಿ ಘೇರಾವ್ ಮಾಡಿದರು. ನಂತರ ಬಂಧಿತರನ್ನು ಕೂಡಲೇ ಬಿಡುಗಡೆ ಮಾಡಿದರು. ನಂತರ ಹೊನ್ನಾವರ ನಗರದಲ್ಲಿ ಭಾರೀ ಮೆರವಣಿಗೆ ನಡೆಸಿ "ಬಿಜೆಪಿ ಎಂಎಲ್‌ಎಗೆ ಧಿಕ್ಕಾರ", "ರಾಜ್ಯ ಸರಕಾರದ ಕಾರ್ಮಿಕ ವಿರೋಧಿ ನೀತಿಗೆ ಧಿಕ್ಕಾರ" ಮುಂತಾದ ಘೋಷಣೆ ಕೂಗುತ್ತಾ ಟಪ್ಪರ್ ಹಾಲ್‌ನಲ್ಲಿ ಬಹಿರಂಗ ಸಭೆ ನಡೆಸಲಾಯಿತು. ಸಭೆಯನ್ನುದ್ದೇಶಿಸಿ ಸಿಐಟಿಯು ಜಿಲ್ಲಾಧ್ಯಕ್ಷ ಕಾಂ. ಎಂ.ಬಿ. ನಾಯಕ, ಹಂಚು ಕಾರ್ಮಿಕ ಧುರೀಣ ಸುಭಾಶ್ ಕೊಪ್ಪೀಕರ, ಸಿಪಿಐ(ಎಂ) ಜಿಲ್ಲಾ ಮುಖಂಡ ಮಂಜುನಾಥ ಫುಲಕರ ಸಂಘದ ಅಧ್ಯಕ್ಷರಾದ ಟಿ.ಎಸ್.ನಾಯುಕ್ ಕಾರ್ಯದರ್ಶಿ ತಿಲಕಗೌಡ ಮಾತನಾಡಿದರು.

ಚಳುವಳಿಯ ನೇತೃತ್ವವನ್ನು ವಿವಿಧ ಹೆಂಚು ಕಾರ್ಖಾನೆ ಕಾರ್ಮಿಕ ಮುಖಂಡರಾದ ಈಶ್ವರನಾಯ್ಕ, ಶಂಕರ ದೇವಾಡಿಗ, ಹರಿಶ್ಚಂದ್ರ ದೇವಾಡಿಗ, ಗಣಪತಿ ದೇವಾಡಿಗ, ಚಂದ್ರು ನಾಯ್ಕ, ಮಂಜುನಾಥ ನಾಯ್ಕ, ವೆಂಕಟೇಶ ದೇವಾಡಿಗ, ನಾಗಪ್ಪ ದೇವಾಡಿಗ, ರವೀಂದ್ರ.ಡಿ.,ರಮೇಶನಾಯ್ಕ, ಸೀತಾರಾಮ ಗೌಡ, ನಾರಾಯಣಗೌಡ, ಗೌರಿನಾಯ್ಕ, ಸರೋಜನಾಯ್ಕ ಮುಂತಾದವರು ವಹಿಸಿದ್ದರು.

ಈ ಚಳುವಳಿ ಒಂದು ರಾಜಕೀಯ ಚಳುವಳಿಯಾಗಿ ಮಾರ್ಪಾಟಾಗಿ ಇಡೀ ಭಟ್ಕಳ ಹೊನ್ನಾವರ ಕ್ಷೇತ್ರಗಳಲ್ಲಿ ಮನೆ ಮಾತಾಗಿ ಎಲ್ಲಾ ಕಡೆ ಚರ್ಚೆಗೊಳಗಾಗಿದೆ.

# ದೇವದಾಸಿ ಮಹಿಳಾ ಸಮಾವೇಶ

ಹಗರಿಬೊಮ್ಮನಹಳ್ಳಿ: ಬದಲಾಗುತ್ತಿರುವ ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲಾ ರೀತಿಯಲ್ಲೂ ಮಹಿಳೆಯರು ಸಂಘಟಿತರಾಗುತ್ತಿರುವ ಕಾಲಘಟ್ಟದಲ್ಲಿ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನ ಹಳ್ಳಿ ತಾಲ್ಲೂಕಿನ ದೇವದಾಸಿ ಮಹಿಳೆಯರ ಸಮಾವೇಶವು ಜನವಾದಿ ಮಹಿಳಾ ಸಂಘಟನೆಯ ಮುತುವರ್ಜಿಯಲ್ಲಿ ಏಪ್ರಿಲ್ 22 ರಂದು ನಡೆಯಿತು.

ದೇವದಾಸಿ ಪದ್ಧತಿಯು ಜಮೀನುದಾರಿ ವರ್ಗವು ಪಾಳೇಗಾರಿ ಮೌಲ್ಯಗಳನ್ನು ದಲಿತ, ಬಡ ಮಹಿಳೆಯರ ಮೇಲೆ ಹೇರಿರುವ ಕ್ರೂರ ಅಮಾನವೀಯ ಶೋಷಣೆಯಾದ ಉಳ್ಳವರ ಈ ಕುತಂತ್ರವನ್ನು ದೇವದಾಸಿ ಮಹಿಳೆಯರು ಸಂಘಟಿತರಾಗುವ ಮೂಲಕ ಹೊರಹಾಕಬೇಕೆಂದು ಸಮಾವೇಶದ ಉದ್ಘಾಟನಾ ಭಾಷಣ ಮಾಡಿದ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕೆ.ನೀಲಾ ಕರೆ ನೀಡಿದರು.

ಹಿರಿಯ ದೇವದಾಸಿ ಪಾಳೆಮ್ಮನವರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾವೇಶಕ್ಕೆ ಯುವ ಸಂಘಟನೆಯ ಗಣೇಶ್, ಜಗನ್ನಾಥ್ ಪಾಲ್ಗೊಂಡಿದ್ದರು. 150 ಕ್ಕೂ ಹೆಚ್ಚಿನ ಮಹಿಳೆಯರು ಸಮಾವೇಶಗೊಂಡಿದ್ದರು.

# ಡಿವೈಎಫ್ಐನಿಂದ ಅಂಬೇಡ್ಕರ್ ಕುರಿತು ಸಂವಾದ

ಮಳವಳ್ಳಿ: ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಮತ್ತು ಸಾಮಾಜಿಕ ನ್ಯಾಯದಡಿಯಲ್ಲಿ ಡಾ।। ಬಿ.ಆರ್.ಅಂಬೇಡ್ಕರ್ ಎಂಬ ವಿಷಯ ಕುರಿತು ಡಿವೈಎಫ್ಐ ಮಳವಳ್ಳಿತಾಲ್ಲೂಕುಸಮಿತಿಏಪ್ರಿಲ್25ರಂದು ಸಂವಾದ ಕಾರ್ಯಕ್ರಮ ಏರ್ಪಡಿಸಿತ್ತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಎಸ್‌ಎಫ್ಐನ ರಾಜ್ಯ ಕಾರ್ಯದರ್ಶಿ ಮಾತನಾಡುತ್ತಾ, ಕೋಮುವಾದವನ್ನು ಕಟುವಾಗಿ ಖಂಡಿಸುತ್ತಿದ್ದ ಅಂಬೇಡ್ಕರ್‌ರವರನ್ನು ಇಂದು ಕೋಮುವಾದಿಗಳು ಬಳಸಿಕೊಳ್ಳುತ್ತಿರುವುದನ್ನು ಖಂಡಿಸಿದರು.

ಎಲ್ಲರಿಗೂ ಶಿಕ್ಷಣ ಸಿಗಬೇಕು, ವ್ಯಕ್ತಿ ಸಾಯುವಾಗ ಆತ ಅಕ್ಷರಸ್ಥನಾಗಿರಬೇಕು ಎಂಬುದು ಅಂಬೇಡ್ಕರ್ ಅಭಿಲಾಷೆಯಾಗಿತ್ತು, ಆದರೆ ದೇಶ ಸ್ವಾತಂತ್ರ್ಯ ಪಡೆದು 50 ವರ್ಷಗಳಾದರೂ ಪ್ರಪಂಚದ ಮೂರನೇ ಒಂದು ಭಾಗ ಅನಕ್ಷರಸ್ಥರು ದೇಶದಲ್ಲಿದ್ದಾರೆ. ಅಂಬೇಡ್ಕರ್ ಶಿಕ್ಷಣದ ವಾಣಿಜ್ಯೀಕರಣಕ್ಕೆ ತೀವ್ರ ವಿರೋಧಿಸಿದ್ದರು. ಆದರೆ ಇಂದು ಎಲ್ಲವೂ ವ್ಯಾಪಾರೀಕರಣಗೊಂಡಿದೆ ಎಂಬುದು ಖೇದದ ಸಂಗತಿ ಎಂದರು.

ಅಂಬೇಡ್ಕರ್‌ರ ಮೀಸಲಾತಿಯ ಕಲ್ಪನೆಯನ್ನು ಓಟಿನ ರಾಜಕೀಯವಾಗಿ ಬಳಸಿಕೊಳ್ಳುತ್ತಿದ್ದಾರೆ. ಮೀಸಲಾತಿ ಅಂಬೇಡ್ಕರ್ ಕಲ್ಪನೆಗಳಾದ ಮೀಸಲಾತಿಯಾಗಲಿ, ಸಹಕಾರಿ ಕೃಷಿಯಾಗಲಿ ಯಶಸ್ವಿಯಾಗಬೇಕಾದರೆ ಭೂ ಸುಧಾರಣೆ ಅತ್ಯಗತ್ಯ ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಮೈಸೂರು ವಿ.ವಿ.ಯ ಅರ್ಥಶಾಸ್ತ್ರದ ರೀಡರ್ ಆದ ಕೆ.ವಿ.ಶ್ರೀರಾಮಪ್ಪ ಮಾತನಾಡಿ ಅಂಬೇಡ್ಕರ್ ಶೋಷಣೆ ಮುಕ್ತ ಸಮಾಜ ನಿರ್ಮಾಣಕ್ಕೆ ಯುವ ಜನರು ಪಣ ತೊಡಬೇಕೆಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಿವೈಎಫ್ಐ ರಾಜ್ಯಖಜಾಂಚಿ ಕೆ.ಎಂ. ಪುಟ್ಟಸ್ವಾಮಿ ವಹಿಸಿದ್ದರು. ಸಂವಾದದಲ್ಲಿ ಶಿಕ್ಷಕರಾದ ಮಂಚಯ್ಯ, ನಾಗರಾಜು, ಎಸ್.ರೇವಣ್ಣ, ದೊಡ್ಡಲಿಂಗೇಗೌಡ, ಪುಟ್ಟರಾಜು, ಟಿ.ಎಲ್.ಕೃಷ್ಣೇಗೌಡ ಭಾಗವಹಿಸಿದ್ದರು.

# ಡಿವೈಎಫ್ಐ ಜಿಲ್ಲಾ ಕಾರ್ಯಾಗಾರ

ಸಿಂಧನೂರು: ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ ರಾಯಚೂರು ಜಿಲ್ಲಾ ಮಟ್ಟದ 2 ದಿನಗಳ ಕಾರ್ಯಾಗಾರವು ಸಿಂಧನೂರು ತಾಲ್ಲೂಕಿನ ದಡೇಸೂಗೂರ ಕೃಷಿ ಶಾಲೆಯಲ್ಲಿ ಇತ್ತೀಚೆಗೆ ನಡೆಯಿತು.

ಇಂದಿನ ಯುವ ಜನತೆಯ ಜ್ವಲಂತ ಸಮಸ್ಯೆಗಳ ವಿರುದ್ಧ ರಚನಾತ್ಮಕ ಹೋರಾಟವನ್ನು, ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಾಣಾರ್ಪಣೆ ಮಾಡಿದ ಭಗತ್ ಸಿಂಗ್, ಸುಖದೇವ್, ರಾಜಗುರುರಂತಹವರ ಸ್ಮರಣೆಯೊಂದಿಗೆ ಮಾಡಬೇಕಾಗಿದೆ. ಇಂದು ಕೆಲ ಯುವಕರು ಕೋಮುವಾದಿಗಳ ಪ್ರಭಾವಕ್ಕೆ ಒಳಗಾಗುತ್ತಿರುವುದು ವಿಷಾಧನೀಯ ಎಂದು ರಾಜ್ಯ ಕಾರ್ಯದರ್ಶಿ ಎಸ್.ವೈ.ಗುರುಶಾಂತ್ ತಿಳಿಸಿ, ಯುವಜನತೆಯ ಶತ್ರುಗಳಾದ ನಿರುದ್ಯೋಗ, ಕೋಮುವಾದದ ವಿರುದ್ಧ ಸಕ್ರಿಯ ಹೋರಾಟದ ಮಹತ್ವವನ್ನು ಕಾರ್ಯಾಗಾರದಲ್ಲಿ ತಿಳಿಸಿದರು.

ಕಾರ್ಯಾಗಾರದಲ್ಲಿ ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಶರಬಣ್ಣ ನಾಗಲಾಪೂರ, ಕೃಷಿಕೂಲಿಕಾರರ ಸಂಘದ ರಾಜ್ಯ ಮುಖಂಡರಾದ ಜಿ.ಎನ್. ನಾಗರಾಜ್, ಎಚ್.ಶರಫುದ್ದೀನ್, ಬಿ.ಲಿಂಗಪ್ಪ ಪಾಲ್ಗೊಂಡಿದ್ದರು.

# ಕಾರ್ಮಿಕನ ಸಾವು; ಪರಿಹಾರಕ್ಕೆ ಒತ್ತಾಯ

ಬೆಂಗಳೂರು: ಏಪ್ರಿಲ್ 16 ರಂದು ಕಬ್ಬನ್‌ಪೇಟೆಯ ಚೌಳಗಲ್ಲಿಯಲ್ಲಿರುವ ಚೌಮಿ ಎಂಬುವವರ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ವಾಸು ಎಂಬ ಕಾರ್ಮಿಕನಿಗೆ 'ಕೈಗಾರಿಕಾ ಅಪಘಾತ'ವಾಗಿ ಏಪ್ರಿಲ್ 20 ರಂದು ಕಾರ್ಮಿಕನು ಮೃತನಾಗಿದ್ದಾನೆ.

ಏಪ್ರಿಲ್ 25ರಂದು ಕಬ್ಬನ್ ಪೇಟೆಯ ಬನ್ನಪ್ಪ ಪಾರ್ಕಿನಲ್ಲಿ ಮೃತನಾದ ಕಾರ್ಮಿಕನಿಗೆ ಬೆಂಗಳೂರು ಜಿಲ್ಲಾ ಪವರ್‌ಲೂಂ ಅಂಡ್ ಹ್ಯಾಂಡ್‌ಲೂಂ ವರ್ಕರ್ಸ್ ಯೂನಿಯನ್ ವತಿಯಿಂದ ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸಿತ್ತು. ಸಂಘದ ಉಪಾಧ್ಯಕ್ಷರಾದ ಕಾಂ।। ಗೋಪಾಲಕೃಷ್ಣರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಿಪಿಐ(ಎಂ)ನ ಹಿರಿಯ ಮುಖಂಡರಾದ ಕಾ.ಎನ್.ಕೆ.ಉಪಾಧ್ಯಾಯ ಹಾಗೂ ಎಸ್‌ಎಫ್ಐನ ರಾಜ್ಯಾಧ್ಯಕ್ಷರಾದ ಕೆ.ಎನ್. ಉಮೇಶ್‌ರವರು ಮಾತನಾಡಿದರು.

ಇಲ್ಲಿಯವರೆಗೆ ಕಾರ್ಖಾನೆಯ ಮಾಲೀಕರು ಮೃತ ಕಾರ್ಮಿಕನ ಕುಟುಂಬಕ್ಕೆ ಯಾವುದೇಪರಿಹಾರ ನೀಡದೆ ಇರುವುದನ್ನುಸಭೆಯು ಖಂಡಿಸಿ, ಕಾರ್ಮಿಕನ ಕುಟುಂಬಕ್ಕೆ 3 ಲಕ್ಷ ಪರಿಹಾರ ಕೊಡಬೇಕೆಂದು ಆಗ್ರಹಿಸಿದೆ.

ಬೆಂಗಳೂರುನಗರದಲ್ಲಿಸುಮಾರುಒಂದು ಲಕ್ಷಕ್ಕೂ ಮೇಲ್ಪಟ್ಟು ಹಾಗೂ ಇಂತಹ ಸಂಕಷ್ಟಕ್ಕೊಳಗಾದ ಪವರ್‌ಲೂಂ ಕಾರ್ಮಿಕರನ್ನು ಕಾರ್ಖಾನೆ ಕಾಯಿದೆಯಲ್ಲಿ ತರಬೇಕೆಂದು ಬೆಂಗಳೂರು ಜಿಲ್ಲಾ ಹಾಗೂ ಪವರ್‌ಲೂಂ ಅಂಡ್ ಹ್ಯಾಂಡ್‌ಲೂಂ ವರ್ಕರ್ಸ್ ಯೂನಿಯನ್ ಎರಡು ವರ್ಷಗಳಿಂದ ನಿರಂತರವಾಗಿ ಹೋರಾಟ ಮಾಡುತ್ತಿರುವುದನ್ನು ಸ್ಮರಿಸಿ ಕೊಳ್ಳಬಹುದು.

# ಭಾಸ್ಕರ ಕುಂಬ್ಳೆ ಹತ್ಯೆಗೆ ಖಂಡನೆ

ರಾಯಚೂರು: ಕಾಸರಗೋಡಿನ ಮಂಜೇಶ್ವರದ ಡಿವೈಎಫ್ಐ ಮುಖಂಡರಾದ ಭಾಸ್ಕರ ಕುಂಬ್ಳೆಯವರ ಹತ್ಯೆಯನ್ನು ಖಂಡಿಸಿರುವ ರಾಯಚೂರು ಜಿಲ್ಲಾ ಎಸ್‌ಎಫ್ಐ, ಡಿವೈಎಫ್ಐ, ಅಂಗನವಾಡಿ ನೌಕರರ ಸಂಘ, ಜನವಾದಿ ಮಹಿಳಾ ಸಂಘಟನೆ ಹಾಗೂ ಸಿಐಟಿಯು ಸಂಘಟನೆಗಳು ಕೊಲೆಗಡುಕರಾದ ಆರ್.ಎಸ್.ಎಸ್ ಗೂಂಡಾಗಳನ್ನು ಬಂಧಿಸಿ ಉಗ್ರ ಶಿಕ್ಷೆಗೊಳಪಡಿಸಬೇಕೆಂದು ಆಗ್ರಹಿಸಿವೆ.

**ಪ್ರತಿಭಟನಾ ರ್‍ಯಾಲಿ**

**ಕುಂದಾಪುರ:** ಭಾಸ್ಕರ ಕುಂಬ್ಳೆಯವರ ಹತ್ಯೆಯನ್ನು ಖಂಡಿಸಿ ಕುಂದಾಪುರ ತಾಲ್ಲೂಕು ಡಿವೈಎಫ್ಐ ಸಮಿತಿಯು ಏಪ್ರಿಲ್ 24 ರಂದು ಒಂದು ಪ್ರತಿಭಟನಾ ರ್‍ಯಾಲಿ ನಡೆಸಿ, ಕೂಡಲೇ ಹಂತಕರನ್ನು ಬಂಧಿಸಿ ಕ್ರಮ ಕೈಗೊಳ್ಳಬೇಕೆಂದು ತಹಸೀಲ್ದಾರರ ಮೂಲಕ ಜಿಲ್ಲಾಧಿಕಾರಿಗಳನ್ನು ಕೋರಿವೆ.

ಉಡುಪಿ: ಡಿವೈಎಫ್ಐ ತಾಲ್ಲೂಕು ಸಮಿತಿಯು ಕುಂಬ್ಳೆಯವರ ಹತ್ಯೆಯನ್ನು ಖಂಡಿಸಿವೆ.

CITU IXth ALL INDIA CONFERENCE COCHIN 97 APRIL 21-26
UNITY AND STRUGGLE

# ಕಾರ್ಮಿಕ ವರ್ಗದ ಐಕ್ಯತೆ ಮತ್ತು ಪ್ರಜಾಸತ್ತಾತ್ಮಕ ನಿರ್ವಹಣೆ

## ಸಿಐಟಿಯು ಸಮ್ಮೇಳನದ ಸಂದೇಶ

**"ಭಾರತದ ಕಾರ್ಮಿಕ ವರ್ಗ ಈಗ ಎದುರಿಸುತ್ತಿರುವ ಬಹುಮುಖೀ ಧಾಳಿಯನ್ನು ಹಿಮ್ಮೆಟ್ಟಿಸಲು ಕಾರ್ಮಿಕ ವರ್ಗದ ಹಾಗೂ ಕಾರ್ಮಿಕ ಆಂದೋಲನದ ಸರ್ವವ್ಯಾಪಿ ಐಕ್ಯತೆ ಹಾಗೂ ಸಿಐಟಿಯುನಲ್ಲಿ ಪೂರ್ಣ ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಗೆ ಹಾಗೂ ಸಿಐಟಿಯುವಿನ ಸ್ವತಂತ್ರ ಅಸ್ತಿತ್ವವನ್ನು ಬೆಳೆಸಲು ಇಡೀ ಸಿಐಟಿಯು ನಾಯಕತ್ವಕ್ಕೆ ಮತ್ತು ಕಾರ್ಯಕರ್ತರಿಗೆ ಕರೆ - ಇದು ಕೊಚ್ಚಿಯಲ್ಲಿ ಇತ್ತೀಚೆಗೆ ಮುಕ್ತಾಯವಾದ ಸಿಐಟಿಯು ಸಮ್ಮೇಳನದ ಕೇಂದ್ರ ಸಂದೇಶ" ಎಂದಿದ್ದಾರೆ ಕಾಂ.। ಆರ್.ಉಮಾನಾಥ್. ಸಿಐಟಿಯು 9ನೇ ಸಮ್ಮೇಳನದ ಆರಂಭದ ಬಗ್ಗೆ ಕಳೆದ ಸಂಚಿಕೆಯಲ್ಲಿ ಓದಿರುವಿರಿ. ಈ ಸಮ್ಮೇಳನದ ಕಲಾಪಗಳ ಬಗ್ಗೆ ಒಂದು ವರದಿ.**

ಸರಕಾರ ಅನುಸರಿಸುತ್ತಿರುವ ಸಂರಚನಾ ಸುಧಾರಣಾ ಧೋರಣೆಗಳನ್ನು ಎದುರಿಸಲು ಒಂದು ಬೃಹತ್ ದೇಶವ್ಯಾಪಿ ಕಾರ್ಯಾಚರಣೆ ನಡೆಸಬೇಕು ಎಂದು ಏಪ್ರಿಲ್ 25 ರಂದು ಕೊಚ್ಚಿಯಲ್ಲಿ ಕೊನೆಗೊಂಡ ಸಿಐಟಿಯು 9ನೇ ಅಖಿಲ ಭಾರತ ಸಮ್ಮೇಳನ ಕರೆ ನೀಡಿದೆ. ಸರಕಾರದ ನೀತಿಗಳನ್ನು ಎದುರಿಸಲು ಒಂದು ತೀವ್ರ ಕಾರ್ಯತಂತ್ರ ಅನುಸರಿಸಬೇಕು ಎಂಬ ಬಲವಾದ ಆಕಾಂಕ್ಷೆಯನ್ನು ಸಮ್ಮೇಳನದ ಕಲಾಪಗಳಲ್ಲಿ ಹಲವಾರು ಪ್ರತಿನಿಧಿಗಳು ಅಭಿವ್ಯಕ್ತಗೊಳಿಸಿದರು. ಪ್ರತಿನಿಧಿಗಳ ಈ ಆಕಾಂಕ್ಷೆಗಳಿಗನುಗುಣವಾಗಿ ಬೃಹತ್ ಕಾರ್ಯಾಚರಣೆಯ ಕರೆ ನೀಡಲಾಯಿತು. ಪ್ರಧಾನ ಕಾರ್ಯದರ್ಶಿ ಯವರ ವರದಿಯ ಮೇಲಿನ ಚರ್ಚೆಗಳಿಗೆ ಉತ್ತರ ಕೊಡುತ್ತಾ ಎಂ.ಕೆ.ಪಂಧೆಯವರು ಮುಂಬರುವ ಅವಧಿಯಲ್ಲಿ ಸಿಐಟಿಯು ಮುಂದಿರುವ ಆದ್ಯತೆಗಳ ಬಗ್ಗೆ ವಿವರವಾಗಿ ತಿಳಿಸಿದರು. ಈ ಬಗ್ಗೆ ಮಧ್ಯ ಪ್ರವೇಶಿಸಿ ಮಾತನಾಡಿದ ಸಿಐಟಿಯು ಉಪಾಧ್ಯಕ್ಷ ಆರ್.ಉಮಾನಾಥ್ ಸಮ್ಮೇಳನದ ಸಾರಾಂಶವನ್ನು ಈ ಮೇಲೆ ಹೇಳಿದಂತೆ ವರ್ಣಿಸಿದರು.

**ಮೂರು ಅಂಶಗಳು**

ಈ ಕರೆ ಕೇವಲ ಹಿಂದಿನ ಕರೆಗಳ ಪುನರುಚ್ಚಾರವಲ್ಲ ಎಂದು ಅವರು ಒತ್ತಿ ಹೇಳಿದರು. ಈ ಕರೆಗೊಂದು ವಿಶೇಷ ಮಹತ್ವವಿದೆ. ಏಕೆಂದರೆ ಈಗಿನ ಸನ್ನಿವೇಶದಲ್ಲಿ ಮೂರು ಮುಖ್ಯ ಅಂಶಗಳಿವೆ.

**ಮೊದಲನೆಯದಾಗಿ**, ಆರ್ಥಿಕ ಧಾಳಿಗಳು ಯಾವ ಮಟ್ಟ ತಲುಪಿವೆಯೆಂದರೆ ಕಾರ್ಮಿಕ ವರ್ಗದ ಅಸ್ತಿತ್ವವೇ ಕಾರ್ಮಿಕ ಆಂದೋಲನದ ಭವಿಷ್ಯವೇ ಅಪಾಯದಲ್ಲಿದೆ. ಆದ್ದರಿಂದ ಕಾರ್ಮಿಕ ವರ್ಗದ ಐಕ್ಯತೆ ಅತ್ಯಗತ್ಯ.

**ಎರಡನೆಯದಾಗಿ**, ಇಂದು ವರ್ಗ ಐಕ್ಯತೆಯ ಮೇಲೆ ಒಂದು ಹೊಸ ಹಾಗೂ ಹೆಚ್ಚು ಗಂಭೀರವಾದ ಧಾಳಿ ಬಂದಿದೆ. ಈ ಹಿಂದೆ ಧಾಳಿ ಮಾಲಕರಿಂದ, ಅದರ ಬೆನ್ನ ಹಿಂದೆ ಬಂಡವಾಳಶಾಹಿ ಪಕ್ಷಗಳಿಂದ ಬರುತ್ತಿತ್ತು. ಈಗ ಹೊಸ ದಿಕ್ಕುಗಳಿಂದ ಹೊಸ ಸ್ವರೂಪದಲ್ಲಿ ಬರುತ್ತಿವೆ. ಕಾರ್ಮಿಕ ವರ್ಗದ ಐಕ್ಯತೆಯ ಆಧಾರಕ್ಕೇ ಸಂಚಕಾರ ತರುತ್ತಿರುವ ಕೋಮುವಾದಿ, ಜಾತಿವಾದಿ ಶಕ್ತಿಗಳಿಂದ ಆಗುತ್ತಿವೆ. ದಲಿತರ ಪುನರುಜ್ಜೀವನ ಒಂದು ಹೊಸ ವಿದ್ಯಮಾನವೇನೂ ಅಲ್ಲ, ಆದರೆ ಜಾತಿ ಬಂಧನಗಳ ಆಧಾರದ ಮೇಲೆ ಕಾರ್ಮಿಕ ವರ್ಗದ ಐಕ್ಯತೆಯನ್ನು ನಾಶ ಮಾಡುವ ಪ್ರಯತ್ನ ಒಂದು ಗಂಭೀರ ಬೆದರಿಕೆ ಎಂದು ಉಮಾನಾಥ್ ಹೇಳಿದರು.

**ಮೂರನೆಯ ಅಂಶವೆಂದರೆ** : ಕೋಮು ವಾದಿ ಶಕ್ತಿಗಳು ಅಧಿಕಾರ ಗ್ರಹಣ ಮಾಡದಂತೆ ತಡೆಯಲು ದೇಶದ ಎಲ್ಲಾ ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಒಗ್ಗೂಡಿಸುವ ತುರ್ತು ರಾಜಕೀಯ ಕರ್ತವ್ಯ. ಕಾಂಗ್ರೆಸ್(ಐ) ನ ಹ್ರಾಸದ ಪ್ರಯೋಜನವನ್ನು ದೇಶದ ಹಲವು ಪ್ರದೇಶಗಳಲ್ಲಿ ಬಿಜೆಪಿ ಪಡೆಯುತ್ತಿದೆ ಎಂದು ಉಮಾನಾಥ್ ಅಭಿಪ್ರಾಯಪಟ್ಟರು. 'ಆರ್‌ಎಸ್‌ಎಸ್' ಒಂದು ಫ್ಯಾಸಿಸ್ಟ್ ಸಿದ್ಧಾಂತದ ಫ್ಯಾಸಿಸ್ಟ್ ಶಕ್ತಿ" ಎಂದರು. ಬಿಜೆಪಿಯನ್ನು ಅಧಿಕಾರದಿಂದ ಹೊರಗಿರಿಸುವ ಪ್ರಸ್ತುತ ಪ್ರಯತ್ನಗಳನ್ನು ಪ್ರಸ್ತಾಪಿಸುತ್ತಾ ಅವರು ಕೇವಲ ಸಂಸದೀಯ ಪ್ರಯತ್ನಗಳಿಂದ ಅದನ್ನು ತಡೆಯಲು ಸಾಧ್ಯವೇ ಎಂದು ಪ್ರಶ್ನಿಸಿದರು. ಇಲ್ಲ, ಕೇವಲ ಒಂದು ಸಾಮೂಹಿಕ ತಡೆಯೊಡ್ಡಿದರೆ ಮಾತ್ರವೇ ಅದು ಸಾಧ್ಯ ಎಂದರು. ಈ ಸಂದರ್ಭದಲ್ಲಿ ಉಮಾನಾಥ್ ಇತ್ತೀಚಿಗಿನ ತಿರುಪುರ ಹಾಗೂ ಕೊಯಮತ್ತೂರಿನ ಅನುಭವಗಳನ್ನು ಉದಾಹರಿಸಿದರು. ಸಮ್ಮೇಳನದಲ್ಲಿ ತಮಿಳುನಾಡು ಪ್ರತಿನಿಧಿಯೊಬ್ಬರು ಕೂಡಾ ಈ ಅನುಭವದ ಬಗ್ಗೆ ಹೇಳಿದ್ದರು. ಈ ಎರಡು ಪಟ್ಟಣಗಳನ್ನು ಒಂದು ವಾರದ ಕಾಲ ಕೋಮು ದಂಗೆಗಳು ಅಲುಗಾಡಿಸಿ ಬಿಟ್ಟಿದ್ದವು. ಆಗ ಸಿಐಟಿಯು ಒಂದು ಶಾಂತಿ ಯಾತ್ರೆ ಸಂಘಟಿಸಲು ಮುಂದೆ ಬಂತು. ಎಲ್ಲಾ ಜಾತ್ಯಾತೀತ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳು ಇದರಲ್ಲಿ ಪಾಲ್ಗೊಳ್ಳುವಂತೆ ಅದು ವಿನಂತಿಸಿತು. ಆದರೆ ಸಿಪಿಐ(ಎಂ) ಬಿಟ್ಟು ಬೇರೆಲ್ಲಾ ಪಕ್ಷಗಳು ಹಿಂಜರಿಕೆ ತೋರಿದವು. ಆದರೆ ಸಿಐಟಿಯು ಎಲ್ಲಾ ಕಾರ್ಮಿಕ ಸಂಘಗಳನ್ನು ಸಂಪರ್ಕಿಸಿತು. ಅವೆಲ್ಲಾ ಕಲೆಕ್ಟರ್‌ನ ಆದೇಶವನ್ನು ಉಲ್ಲಂಘಿಸಿ ಒಂದು ಶಾಂತಿ ಯಾತ್ರೆ ನಡೆಸಲು ಒಪ್ಪಿದವು. ಆಗ ಮೊದಲು ಹಿಂಜರಿದಿದ್ದ ರಾಜಕೀಯ ಪಕ್ಷಗಳೂ ಮುಂದೆ ಬಂದವು. ಈ ಶಾಂತಿಯಾತ್ರೆ ಶಾಂತಿಯನ್ನು ಮತ್ತೆ ನೆಲೆಗೊಳಿಸಿತು. ಎಲ್ಲ ಜನರಲ್ಲಿ ಹಾಗೂ ಅಲ್ಪಸಂಖ್ಯಾತರಲ್ಲಿ ವಿಶ್ವಾಸ ಮೂಡಿಸುವಲ್ಲಿ ಸಾಕಷ್ಟು ಯಶಸ್ವಿಯಾಯಿತು. "ಕಾರ್ಮಿಕ ವರ್ಗದ ಐಕ್ಯತೆಯ ಶಕ್ತಿ ಹೀಗಿದೆ" ಎಂದ ಉಮಾ ನಾಥ್ "ನಿಮ್ಮ-ನಿಮ್ಮ ಊರುಗಳಿಗೆ ಪಟ್ಟಣ ಗಳಿಗೆ ಹಿಂದಿರುಗಿ ಕಾರ್ಮಿಕ ವರ್ಗದ ಐಕ್ಯತೆಯನ್ನು ಕಟ್ಟಲು ಪ್ರಾಮಾಣಿಕತೆಯಿಂದ ಪ್ರಯತ್ನಿಸಿ" ಎಂದು ಪ್ರತಿನಿಧಿಗಳಿಗೆ ಕರೆ ನೀಡಿದರು.

**ಚೈತನ್ಯ ಶೀಲತೆ ಅಗತ್ಯ**

ನಂತರ ಸಮ್ಮೇಳನದ ಕೇಂದ್ರ ಸಂದೇಶದ ಎರಡನೇ ಭಾಗದ ಬಗ್ಗೆ ಅಂದರೆ ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಯ ಬಗ್ಗೆ ಹೇಳುತ್ತಾ ಉಮಾನಾಥ್‌ರವರು ಸಿಐಟಿಯುನ ಚೈತನ್ಯಶೀಲತೆಗೆ ಇದು ಅತ್ಯಗತ್ಯ ಎಂದರು. ಈ ಪರಿಕಲ್ಪನೆಯ ಉಲ್ಲಂಘನೆಯಿಂದಾಗಿ ಕಾರ್ಮಿಕ ಆಂದೋಲನದ ಹೊರಗಿರುವ ಅಸಂಖ್ಯ ಕಾರ್ಮಿಕರು ಹಾಗೂ ಸಿಐಟಿಯುನ ಹೊರಗಿರುವ ಸಂಘಟಿತ ಕಾರ್ಮಿಕರನೇಕರ ಪ್ರವೇಶಕ್ಕೆ ದೊಡ್ಡ ಅಡ್ಡಿಯುಂಟಾಗಿದೆ. ಸಿಐಟಿಯು ಯಾವುದೇ ಒಂದು ಪಕ್ಷದ ಬಾಲಂಗೋಚಿಯಲ್ಲ ಎಂದು ಪ್ರಧಾನ ಕಾರ್ಯದರ್ಶಿ ಪಂಧೆಯವರು ಹೇಳಿದ ಮಾತನ್ನು ಸಮರ್ಥಿಸುತ್ತಾ ಈ ಮಾತು

ಸಮ್ಮೇಳನದ ವೇದಿಕೆಯ ಮೇಲೆ ಸಿಐಟಿಯು ಮುಖಂಡರು



**ವಿಚಾರ ಸಂಕಿರಣ-1**

*"ಕಾರ್ಮಿಕ ವರ್ಗದ ಮೇಲೆ ಆರ್ಥಿಕ ಪ್ರಹಾರಗಳ ವಿರುದ್ಧ ಇನ್ನೂ ದೊಡ್ಡ ಹೋರಾಟಗಳನ್ನು ಮಾಡೋಣ. ಸರ್ವ ಸಮಾನ ಕಾರ್ಯಾಚರಣೆಗಳಲ್ಲಿ, ಹೋರಾಟಗಳಲ್ಲಿ ಒಗ್ಗಟ್ಟಾಗೋಣ-ಹೇಗೆ ಒಟ್ಟಿಗೇ ಹೋರಾಡುವುದು ಎಂದು ನಿರ್ಧರಿಸೋಣ-ಐಕ್ಯತೆ ಬರುವುದು ಹೋರಾಟಗಳ ಮೂಲಕವೇ'*- ಹೀಗೆಂದವರು ಸಿಐಟಿಯು ಪ್ರಧಾನ ಕಾರ್ಯದರ್ಶಿ ಡಾ॥ ಎಂಕೆ.ಪಂಧೆ. ಸಂದರ್ಭ- ಕಾರ್ಮಿಕ ಐಕ್ಯತೆ ಕುರಿತಾದ ವಿಚಾರ ಸಂಕಿರಣ. ಸಿಐಟಿಯುವಿನ 9ನೇ ಸಮ್ಮೇಳನದ ಸಂದರ್ಭದಲ್ಲಿ ಇದನ್ನು ಏಪ್ರಿಲ್ 22 ರಂದು ಏರ್ಪಡಿಸಲಾಗಿತ್ತು. "ಕಾರ್ಮಿಕ ವರ್ಗದ ಎಲ್ಲರನ್ನೂ ಒಳಗೊಂಡ ಐಕ್ಯತೆ ಈಗಿನ ತುರ್ತು ಅವಶ್ಯಕತೆ" ಎಂಬ ಬಗ್ಗೆ ಸರ್ವಸಮ್ಮತಿ ಈ ವಿಚಾರ ಸಂಕಿರಣದಲ್ಲಿ ಎದ್ದು ಕಾಣುತ್ತಿತ್ತು. ನಿಜ, ಈ ಐಕ್ಯತೆಯನ್ನು ಸಾಧಿಸುವುದು ಹೇಗೆ ಎಂಬ ಬಗ್ಗೆ ಕಣ್ಣೋಟದಲ್ಲಿ ಭಿನ್ನತೆಗಳಿದ್ದವು. ಕೇಂದ್ರ ಕಾರ್ಮಿಕ ಸಂಘಟನೆಗಳ ಮುಖಂಡರ ನಡುವೆ ಈ ಕುರಿತು ವಿಚಾರ ವಿಮರ್ಶೆ ನಡೆದು ಹೋರಾಟಗಳ, ಕಾರ್ಯಾಚರಣೆಗಳ ಸರ್ವಸಾಮಾನ್ಯ ಅಂಶಗಳನ್ನು ರೂಪಿಸಬೇಕು, ಅಂತಿಮವಾಗಿ ಇದು ಭಾರತದ. ಎಲ್ಲಾ ಕಾರ್ಮಿಕ ಸಂಘಗಳ ಐಕ್ಯತೆಗೆ ಹಾದಿ ಮಾಡಿಕೊಡುತ್ತದೆ ಎಂಬುದು ಈ ವಿಚಾರ ಸಂಕಿರಣದಲ್ಲಿ ಮೂಡಿ ಬಂದ ಒಮ್ಮತ ಅಭಿಪ್ರಾಯ.

ಕಾರ್ಮಿಕ ಸಂಘಗಳ ಐಕ್ಯತೆಯ ತುರ್ತು ಪ್ರಶ್ನೆಯ ಮೇಲೆ ಕೇಂದ್ರ ಕಾರ್ಮಿಕ ಸಂಘಟನೆಗಳ ಉನ್ನತ ಮುಖಂಡರ ವಿಚಾರಪೂರಿತ ಪ್ರಬಂಧಗಳು ಇಲ್ಲಿ ಮಂಡಿತವಾದವು. ಸಿಐಟಿಯು ಸಮ್ಮೇಳನಕ್ಕೆ ಬಂದಿದ್ದ ಎಲ್ಲಾ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು. ವಿಚಾರ ಸಂಕಿರಣದಲ್ಲಿ ಮಾತನಾಡಿದವರೆಂದರೆ ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಎ.ಬಿ.ಬರ್ಧನ್, ಹಿಂದ್ ಮಜ್ದೂರ್ ಸಭಾದ ಕಾರ್ಯದರ್ಶಿ ಥಂಪನ್ ಥಾಮಸ್ ಹಾಗು ಇಂಟಕ್‌ನ ಕಾರ್ಯದರ್ಶಿ ವಿ.ಪಿ.

# "ಕಾರ್ಮಿಕ ರಂಗದ ಐಕ್ಯತೆ ಅತ್ಯಗತ್ಯ - ಐಕ್ಯತೆ ಬರುವುದು ಹೋರಾಟದ ಮೂಲಕವೇ"

ಮರಕ್ಕರ್, ಸಿಐಟಿಯು ಅಧ್ಯಕ್ಷ ಇ.ಬಾಲಾನಂದನ್ ಸಂಕಿರಣದ ಅಧ್ಯಕ್ಷತೆ ವಹಿಸಿದ್ದರು.

ಭಾರತದಲ್ಲಿ ಮಾತ್ರವಲ್ಲ ವಿಶ್ವಾದ್ಯಂತ ಉದಾರೀಕರಣ, ಜಾಗತೀಕರಣದ ಶಕ್ತಿಗಳು ಕಾರ್ಮಿಕ ವರ್ಗದ ಮೇಲೆ ಅಭೂತಪೂರ್ವ ಪ್ರಹಾರಗಳನ್ನು ಮಾಡುತ್ತಿರುವಾಗ ಕಾರ್ಮಿಕ ಆಂದೋಲನ ಐಕ್ಯ ಹೋರಾಟಗಳನ್ನು ನಡೆಸಲೇ ಬೇಕಾದ್ದು ಅತ್ಯಂತ ಅನಿವಾರ್ಯ ಎಂಬ ಬಗ್ಗೆ ಎರಡು ಮಾತಿರಲಿಲ್ಲ. 'ಸಂರಚನಾ ಹೊಂದಾಣಿಕೆ' ಎಂಬ ಹೆಸರಿನ ನೀತಿಗಳ ವಿರುದ್ಧ ಹೋರಾಟದ ಅಗತ್ಯದ ಬಗ್ಗೆ ಎಲ್ಲಾ ಕಾರ್ಮಿಕ ಸಂಘಟನೆಗಳದ್ದು ಸಮಾನ ಅಭಿಪ್ರಾಯ ಎಂದರು ಪಂಧೆಯವರು - *"ಖಾಸಗೀಕರಣವನ್ನು ಬೆಂಬಲಿಸುವ ಒಂದಾದರೂ ಕಾರ್ಮಿಕ ಸಂಘಟನೆ ದೇಶದಲ್ಲಿಲ್ಲ. ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶವನ್ನು ಅನುಮೋದಿಸುವ, ಎಕ್ಸಿಟ್ ಪಾಲಿಸಿಯನ್ನು ಒಪ್ಪುವ ಒಂದಾದರೂ ಕಾರ್ಮಿಕ ಸಂಘ ಕಾಣಸಿಗದು"*. ಆದರೆ ಈ ಸಮಾನ ಅಭಿಪ್ರಾಯವಿದ್ದರೂ ಈ ಧೋರಣೆಗಳ ವಿರುದ್ಧ ಪ್ರತಿರೋಧ ದುರ್ಬಲವಾಗಿದೆ ಎಂದು ಅವರು ಖೇದ ವ್ಯಕ್ತಪಡಿಸಿದರು.

ಜವಳಿ ಗಿರಣಿಗಳು ಮತ್ತು ಇತರ ಉದ್ದಿಮೆಗಳ ಬಗ್ಗೆ ವಿವಿಧ ಮಂತ್ರಿಗಳಿಗೆ ಅಸಂಖ್ಯಾತ ಮನವಿ ಪತ್ರಗಳನ್ನು ಸಲ್ಲಿಸಿದರೂ ಸರಕಾರ ಉದ್ದಿಮೆಗಳನ್ನು ಮುಚ್ಚುತ್ತಲೇ ಇದೆ. ಲಕ್ಷಾಂತರ ಕಾರ್ಮಿಕರ ಬದುಕಿಗೆ ಬೆದರಿಕೆ ಹಾಕುತ್ತಲೇ ಇದೆ ಎಂದರು ಬಾಲಾನಂದನ್. *"ಇದು ಚರ್ಚೆಗಷ್ಟೇ ಯೋಗ್ಯವಾದ ಅಮೂರ್ತ ಸಿದ್ಧಾಂತವೇನಲ್ಲ, ಕಾರ್ಮಿಕರ ಜೀವನ್ಮರಣ ಪ್ರಶ್ನೆಯಿದು"* ಎಂದು ಹೇಳಿದ ಅವರು ಇನ್ನು ಸಮಯ ಕಳೆಯಬಾರದು, ಐಕ್ಯ ಹೋರಾಟಗಳು ಈಗ ನಿರ್ಣಾಯಕ ಎಂದು ಒತ್ತಿ ಹೇಳಿದರು. ದಕ್ಷಿಣ ಕೊರಿಯಾ, ಫ್ರಾನ್ಸ್‌ನ ಕಾರ್ಮಿಕರು ತಮ್ಮ ಅವ್ಯಾಹತ ಹಾಗೂ ಐಕ್ಯ ಹೋರಾಟಗಳ ಮೂಲಕ ತಂತಮ್ಮ ಸರಕಾರಗಳು ಕಾರ್ಮಿಕ-ವಿರೋಧಿ ನೀತಿಗಳನ್ನು ಕೈ ಬಿಡುವಂತೆ ಮಾಡಿದ್ದಾರೆ. ಆದರೆ ಭಾರತದಲ್ಲಿ ಸರಕಾರ ಕಾರ್ಮಿಕ ವರ್ಗವನ್ನು ಲೆಕ್ಕಕ್ಕೇ ತಗೊಳ್ಳುತ್ತಿಲ್ಲ. ವ್ಯಾಪಕ ಸಾಮೂಹಿಕ ಕಾರ್ಯಾಚರಣೆಗಳು ಮತ್ತು ಕಾರ್ಮಿಕ ವರ್ಗದ ಹೋರಾಟಗಳ ಮೂಲಕವಷ್ಟೇ ಸರಕಾರ ತನ್ನ ವಿನಾಶಕಾರಿ ಆರ್ಥಿಕ ನೀತಿಗಳನ್ನು ಬದಲಿಸುವಂತೆ ಮಾಡಲು ಸಾಧ್ಯ ಎಂದು ಬಾಲಾನಂದನ್ ಹೇಳಿದರು.

ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಎ.ಬಿ.ಬರ್ಧನ್ ತನ್ನ ಶಕ್ತಿಶಾಲಿ ಭಾಷಣದಲ್ಲಿ ಅನೈಕ್ಯತೆ ಇಡೀ ಕಾರ್ಮಿಕ ಆಂದೋಲನಕ್ಕೆ ತೊಂದರೆ ಉಂಟು ಮಾಡಿರುವುದರಿಂದ ಇತ್ತೀಚಿಗೆ ಬಹಳ ಸಮಯದಿಂದ ಐಕ್ಯತೆಯ ಮಾತನಾಡುತ್ತಿದ್ದಾರೆ ಎಂದರು. ಕಾರ್ಮಿಕ ಸಂಘಗಳ ಪ್ರಯೋಜಕ ಸಮಿತಿ, ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ಮತ್ತಿತರ ಇಂತಹ ಜಂಟಿ ವೇದಿಕೆಗಳ ಮೂಲಕ ವಿವಿಧ ಕಾರ್ಮಿಕ ಸಂಘಗಳು ಕಾರ್ಮಿಕ ವರ್ಗವನ್ನು ತಟ್ಟುವ ಪ್ರಶ್ನೆಗಳ ಮೇಲೆ ಒಟ್ಟುಗೂಡಿವೆ. ಆದರೆ ಕಾರ್ಮಿಕ ಸಂಘಟನೆಯ ಐಕ್ಯತೆಯ ಆಕಾಂಕ್ಷೆಯನ್ನು ಮುಂದೊಯ್ದು ಹೆಚ್ಚು ಸಂಘಟನಾ ಸಾಮರಸ್ಯ ಬರುವಂತಾಗಬೇಕು ಎಂದರು. ಪ್ರಸಿದ್ಧ ಸಿಐಟಿಯು ಮುಖಂಡಾಳು ಬಿ.ಟಿ.ರಣದಿವೆ ಒಂದು ದಶಕದ ಹಿಂದೆಯೇ ಕಾರ್ಮಿಕ ಸಂಘಗಳ ಮಹಾ ಒಕ್ಕೂಟದ ವಿಚಾರ ಇಟ್ಟಿದ್ದರೆ ಎಐಟಿಯುಸಿ ಕಾರ್ಮಿಕ ಸಂಘಗಳ ವಿಲೀನದ ಮಾತನಾಡಿತು. ಈ ಆಹ್ವಾನಕ್ಕೆ ಹೆಚ್.ಎಂ.ಎಸ್ ಮಾತ್ರ ಓಗೊಟ್ಟಿತು. ಈ ಬಗ್ಗೆ ಎಐಟಿಯುಸಿ ಮತ್ತು ಹೆಚ್.ಎಂ.ಎಸ್. ನಡುವೆ ಮಾತುಕತೆಗಳು ಕಳೆದ ಕೆಲವು ವರ್ಷಗಳಿಂದ ನಡೆಯುತ್ತಿವೆ ಎಂದು ಅವರು ಹೇಳಿದರು. ವಿಲೀನಗೊಳ್ಳುವುದರಲ್ಲಿ ಸಮಸ್ಯೆಗಳೇನಿಲ್ಲ, ಆದರೆ ಈ ಪ್ರಕ್ರಿಯೆಯಲ್ಲಿ ಇತರ ಕಾರ್ಮಿಕ ಸಂಘಟನೆಗಳೂ ಸೇರಿಕೊಳ್ಳಲಿ ಎಂಬುದು ಈ ಎರಡೂ ಸಂಘಗಳ ಆಶಯವಾದ್ದರಿಂದ ಮಾತ್ರವೇ ವಿಲೀನದಲ್ಲಿ ವಿಳಂಬವಾಗುತ್ತಿದೆ ಎಂದರು. ತಮ್ಮ ಅಲ್ಪ ಭಿನ್ನಾಭಿಪ್ರಾಯಗಳನ್ನು ಹಿಂದೆ ಬಿಟ್ಟು ಕಾರ್ಮಿಕ ಆಂದೋಲನ ಹಾಗೂ ಕಾರ್ಮಿಕ ವರ್ಗದ ಹಿತಾಸಕ್ತಿಗಳ ರಕ್ಷಣೆಗೆ ಒಂದಾಗಬೇಕಾದ ಸಮಯವಿದು ಎಂದ ಅವರು *"1997 ನಿರ್ಧಾರದ ವರ್ಷವಾಗಲಿ"* ಎಂದರು. ಇದರ ಆಧಾರ ಹಾಗೂ ನೀತಿಗಳನ್ನು ರೂಪಿಸಲು ನಾಲ್ಕು ಅಥವಾ ಐದು ಕೇಂದ್ರ ಕಾರ್ಮಿಕ ಸಂಘಟನೆಗಳ ಮುಖಂಡರ ಕಾರ್ಯಾಗಾರ ನಡೆಯಲಿ, ಕೆಲವು ನಿರ್ದಿಷ್ಟ ಪ್ರಸ್ತಾಪಗಳನ್ನು ರೂಪಿಸುವಂತಾಗಲಿ ಎಂದು ಅವರು ಸೂಚಿಸಿದರು.

ಹೆಚ್.ಎಂ.ಎಸ್.ನ ಥಂಪನ್ ಥಾಮಸ್ ಎಲ್ಲಾ ಕಾರ್ಮಿಕರ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಏಕೈಕ ಅಖಿಲ ಭಾರತ ಕಾರ್ಮಿಕ ಕೇಂದ್ರ ಸಂಘಟನೆಯನ್ನು ರಚಿಸಬೇಕೆಂದು ಕರೆ ನೀಡಿದರು. ಇದು ಹೆಚ್ಚಿನ ದೇಶಗಳಲ್ಲಿ ಸಾಮಾನ್ಯ ಸಂಗತಿ. ಅಂತರ್ರಾಷ್ಟ್ರೀಯ ವೇದಿಕೆಗಳಲ್ಲಿ ಬಹಳಷ್ಟು ದೇಶಗಳನ್ನು ಏಕೈಕ ಕಾರ್ಮಿಕ ಕೇಂದ್ರಗಳು ಪ್ರತಿನಿಧಿಸುತ್ತಿವೆ ಎಂದು ಅವರು ಹೇಳಿದರು.

ಇಂಟಕ್‌ನ ವಿ.ಪಿ.ಮರಕ್ಕರ್ ಕಾರ್ಮಿಕ ಸಂಘಗಳ ಐಕ್ಯತೆ ಸಮಯೋಚಿತ, ಸೂಕ್ತ ವಿಷಯ ಎನ್ನುತ್ತಾ ಕಾರ್ಮಿಕ ಸಂಘಗಳು ಸಮಗ್ರ ಕಾರ್ಯಾಚರಣೆಗಳೊಳಗೆ ಇಳಿಯಬೇಕಾದ

ಪುಟ 8 ನೋಡಿ

**ಹಿಂದಿನ ಸಂಚಿಕೆಗಳಲ್ಲಿ ಪ್ರಕಟವಾದ ಜ್ಯೋತಿ ಬಸುರವರ ಲೇಖನದ ಉಳಿದ ಭಾಗವನ್ನು ಮುಂದಿನ ವಾರ ಪ್ರಕಟಿಸಲಾಗುವುದು.**

ಕ್ರಿಯೆಯಲ್ಲಿ ಕಂಡುಬರಬೇಕು, ಇಲ್ಲವಾದರೆ ಸಹಸ್ರಾರು ಕಾರ್ಮಿಕರು ಸಿಐಟಿಯುವಿನ ಪ್ರಭಾವದಿಂದ ಹೊರಗೇ ಉಳಿಯುತ್ತಾರೆ ಎಂದು ಅವರು ಹೇಳಿದರು.

ಪಂಥೆಯವರು ಐಕ್ಯತೆ ಬಗ್ಗೆ ತಮ್ಮ ಉತ್ತರದಲ್ಲಿ ಪ್ರಸ್ತಾಪಿಸುತ್ತಾ ಇದು ಮೇಲಿನಿಂದ ಬರಲು ಸಾಧ್ಯವಿಲ್ಲ. ಇದು ಬುಡಮಟ್ಟದಲ್ಲೇ ಜಂಟಿ ಹೋರಾಟಗಳಿಂದ ಮಾತ್ರವೇ ಆಗಲು ಸಾಧ್ಯ ಎಂದು ಮತ್ತೆ ಒತ್ತಿ ಹೇಳಿದರು. ಕಾರ್ಮಿಕ ವರ್ಗದ ಐಕ್ಯತೆ ತರುವಲ್ಲಿ ಸಿಐಟಿಯುಗೆ ಒಂದು ವಿಶಿಷ್ಟ ಪಾತ್ರವಿದೆ ಎನ್ನುತ್ತಾ ಅವರು ಬುಡಮಟ್ಟದಲ್ಲಿ ಕಾರ್ಮಿಕ ಪ್ರಶ್ನೆಗಳನ್ನು ಇತರರೊಂದಿಗೆ ಜಂಟಿಯಾಗಿ ಕೈಗೆತ್ತಿಕೊಂಡು, ಜಂಟಿ ಪ್ರಯತ್ನಗಳನ್ನು ಜನಜನಿತಗೊಳಿಸಿ, ನಿರ್ದಿಷ್ಟ ಉದಾಹರಣೆಗಳೊಂದಿಗೆ ಪರ್ಯಾಯ ಧೋರಣೆಗಳ ಬಗ್ಗೆ ಕಾರ್ಮಿಕರ ನಡುವೆ ಪ್ರಚಾರ ನಡೆಸಿ ನಿಜವಾದ ಐಕ್ಯತೆಯನ್ನು ಕಟ್ಟಲು ಮುಂದಾಗಬೇಕು ಎಂದು ಸಿಐಟಿಯು ಗೆ ಸೇರಿದ ಸಂಘಗಳಿಗೆ ಕರೆ ನೀಡಿದರು.

**ಸಮರಧೀರ ಕಾರ್ಯಾಚರಣೆ**

ಒಂದು ಸಮರಶೀಲ ಕಾರ್ಯಾಚರಣೆಯ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಬೇಕೆಂಬ ಹಲವಾರು ಪ್ರತಿನಿಧಿಗಳ ಭಾವನೆಗಳಿಗೆ ಸ್ಪಂದಿಸುತ್ತಾ ಪಂಥೆಯವರು ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ಈಗಾಗಲೇ ಒಂದು ರಾಷ್ಟ್ರವ್ಯಾಪಿ ಮುಷ್ಕರ ಕಾರ್ಯಾಚರಣೆಯನ್ನು ರೂಪಿಸಿದೆ ಎಂದರು. ಮುಂದಿನ ಹಂತಗಳಲ್ಲಿ ಎಷ್ಟು ಸಾಧ್ಯವೋ ಅಷ್ಟು ಸಂಘಟನೆಗಳನ್ನು, ಈಗ ವೇದಿಕೆಯಲ್ಲಿ ಭಾಗವಹಿಸದ ಸಂಘಟನೆಗಳನ್ನು ತೊಡಗಿಸಲು ಸಿಐಟಿಯು ಕಾತುರವಾಗಿದೆ ಎಂದು ಅವರು ಹೇಳಿದರು. ಅಸ್ಥಿರ ರಾಜಕೀಯ ಸನ್ನಿವೇಶದಿಂದಾಗಿ ಮುಂದೂಡಿದ್ದ ಮುಷ್ಕರವನ್ನು ನಡೆಸಲು ಸಾರ್ವಜನಿಕ ವಲಯದ ಕಾರ್ಮಿಕ ಸಂಘಗಳ ಸಮಿತಿ ನಿರ್ಧರಿಸಿದೆ. ಕಾರ್ಯಾಚರಣೆಗಿಳಿಯಬೇಕೆಂಬ ಬಲವಾದ ಆಕಾಂಕ್ಷೆ ಕಾರ್ಯಕರ್ತರಲ್ಲಿ ಇದೆಯಾದ್ದರಿಂದ ಒಂದು ಸಂಯೋಜಿತ ಹಾಗೂ ವ್ಯಾಪಕ ಕಾರ್ಯಾಚರಣೆಯ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗುವುದು ಈ ಸಮ್ಮೇಳನ ಮುಗಿದ ಕೂಡಲೇ ಒಂದು ಬೃಹತ್ ದೇಶವ್ಯಾಪಿ ಕಾರ್ಯಾಚರಣೆಗೆ ನಾವು ಸಿದ್ಧತೆ ನಡೆಸಬೇಕು" ಎಂದರು ಪಂಥೆಯವರು.

ಪೆನ್ಷನ್ ಯೋಜನೆಯ ಎದುರಾದ ಹೋರಾಟವನ್ನು ಸಡಿಲಗೊಳಿಸಿದ ಬಗ್ಗೆ ಹಲವು ಪ್ರತಿನಿಧಿಗಳು ಟೀಕಿಸಿದರು. ಫೆಬ್ರವರಿ 23, 1996ರ ಅಪಾರ ಯಶಸ್ಸುಗಳಿಸಿದ ಮುಷ್ಕರದ ನಂತರ ನಡೆದ ಸಹಿ ಸಂಗ್ರಹ ಚಳುವಳಿ ಆ ಹೋರಾಟವನ್ನು ತಣ್ಣಗೊಳಿಸಿತು ಎಂಬ ಟೀಕೆಗೆ ಸ್ಪಂದಿಸುತ್ತಾ ಪಂಥೆಯವರು ಸಂಸತ್ತಿನಲ್ಲಿ ಪೆನ್ಷನ್ ಮಸೂದೆ ಪಾಸಾಗದಂತೆ ಮಾಡಲು ಹೇಗೆ ಸಿಐಟಿಯು ಸರ್ವ ಪ್ರಯತ್ನ ನಡೆಸಿತು. ಹೇಗೆ ಇತರ ಕೇಂದ್ರ ಕಾರ್ಮಿಕ ಸಂಘಟನೆಗಳು ಅದನ್ನು ಪಾಸು ಮಾಡುವಂತೆ ಸರಕಾರದ ಮೇಲೆ ಒತ್ತಡ ತಂದವು ಎಂಬುದನ್ನು ವಿವರಿಸಿದರು. ಆದರೆ ಮಸೂದೆ ಅಂಗೀಕಾರವಾದುದರ ಅರ್ಥ ಹೋರಾಟ ಮುಗಿಯಿತೆಂದಲ್ಲ, ಕಾರ್ಮಿಕ ವರ್ಗ ಐಕ್ಯತೆಯಿಂದ ವಿರೋಧಿಸಿದರೆ ಅದನ್ನು ಅನುಷ್ಠಾನಕ್ಕೆ ತರಲು ಸಾಧ್ಯವಿಲ್ಲ ಎಂದು ಅವರು ಒತ್ತಿ ಹೇಳಿದರು. ಆದ್ದರಿಂದ ಈ ಪೆನ್ಷನ್ ಯೋಜನೆಯ ವಿರುದ್ಧ ಬೃಹತ್ ರೀತಿಯಲ್ಲಿ ಪ್ರಚಾರಾಂದೋಲನವನ್ನು ಕೈಗೆತ್ತಿಕೊಳ್ಳಲು ಸಿಐಟಿಯು ಸಿದ್ಧವಿದೆ. ಸಂಸತ್ತಿನ ಎದುರು ಒಂದು ಬೃಹತ್ ಮತಪ್ರದರ್ಶನದಲ್ಲಿ ಒಂದು ರಾಷ್ಟ್ರವ್ಯಾಪಿ ಮುಷ್ಕರದ ದಿನಾಂಕವನ್ನು ಪ್ರಕಟಿಸಲಾಗುವುದು. ಈ ಕಾರ್ಯಕ್ರಮವನ್ನು ಚರ್ಚಿಸಿ ಶೀಘ್ರದಲ್ಲೇ ಅಂತಿಮಗೊಳಿಸಲಾಗುವುದು ಎಂದು ಅವರು ತಿಳಿಸಿದರು.

ರಾಜ್ಯಗಳ ಸರಕಾರಗಳಡಿ ಇರುವ ರೋಗಗ್ರಸ್ತ ಘಟಕಗಳು, ಕಾಂಟ್ರಾಕ್ಟ್ ಕಾರ್ಮಿಕರ ಸಮಸ್ಯೆ, ಪಾರಂಪರಿಕ ವಲಯದಲ್ಲಿನ ಕಾರ್ಮಿಕರ ಸಮಸ್ಯೆಗಳು, ಇಎಸ್ಐ, ಪಿಎಫ್ ಇತ್ಯಾದಿ ಕುರಿತಂತೆ ಕಾರ್ಮಿಕರಲ್ಲಿರುವ ಅಸಂತೃಪ್ತಿ ಇತ್ಯಾದಿಗಳ ಬಗ್ಗೆ ಹಲವಾರು ಪ್ರತಿನಿಧಿಗಳು ಸಮ್ಮೇಳನದಲ್ಲಿ ಮಾತನಾಡಿದರು. ಸಮ್ಮೇಳನದ ವರದಿಯಲ್ಲಿ ಈ ಅಂಶಗಳನ್ನು ವಿವರಿಸಲಾಗುವುದು ಎಂದು ಪಂಥೆಯವರು ಪ್ರತಿನಿಧಿಗಳಿಗೆ ಆಶ್ವಾಸನೆಯಿತ್ತರು.

**ಹಿಂದಿ ಭಾಷಿಕ ಪ್ರದೇಶಗಳಲ್ಲಿ**

ಹಿಂದೀ ಭಾಷಿಕ ಪ್ರದೇಶಗಳಲ್ಲಿ ಸಿಐಟಿಯುನ ಮಂದಗತಿಯ ಬೆಳವಣಿಗೆಯ ಕುರಿತು ಹೇಳುತ್ತಾ ಇದು ಮತ್ತೆ-ಮತ್ತೆ ಏಳುತ್ತಿರುವ ಪ್ರಶ್ನೆ ಎಂದರು. ಅಲ್ಲಿಯೂ ಸದಸ್ಯರ ಸಂಖ್ಯೆ ಬೆಳೆಯುತ್ತಿದೆ. ಸಿಐಟಿಯು ಕೇಂದ್ರ ಈ ಬಗ್ಗೆ ಹೆಚ್ಚು ಗಮನ ಹರಿಸಬೇಕು - ಅದೇ ವೇಳೆಗೆ ರಾಜ್ಯ ಸಮಿತಿಗಳು ಕೂಡಾ ಅಲ್ಲಿಯ ಪ್ರಶ್ನೆಗಳಿಗೆ, ಬೆಳವಣಿಗೆಗಳಿಗೆ ಸ್ಪಂದಿಸುವಲ್ಲಿ ಚುರುಕಾಗಿರಬೇಕು, ತಮ್ಮ ಕಾರ್ಯನಿರ್ವಹಣೆಯನ್ನು ಸುಧಾರಿಸಿಕೊಳ್ಳಬೇಕು ಎಂದು ಪಂಥೆ ಹೇಳಿದರು. ಬಲಿಷ್ಟ ಸಾಮೂಹಿಕ ಸಂಘಟನೆಯಿರುವ ರಾಜ್ಯಗಳು ದುರ್ಬಲ ರಾಜ್ಯಗಳನ್ನು ದತ್ತು ತೆಗೆದುಕೊಳ್ಳಬೇಕು ಎಂದು ಪ್ರತಿನಿಧಿಯೋರ್ವರ ಸಲಹೆಯನ್ನು ತಿರಸ್ಕರಿಸಲಾಯಿತು. 'ಸಿಐಟಿಯುಗೆ ದತ್ತು ತಗೊಳ್ಳುವಿಕೆಯಲ್ಲಿ ನಂಬಿಕೆಯಿಲ್ಲ' ಎಂದರು ಪಂಥೆಯವರು. ಬಲಿಷ್ಟ ರಾಜ್ಯಗಳು ಖಂಡಿತಾ ನೆರವಾಗಬಹುದು, ಆದರೆ ದುರ್ಬಲ ರಾಜ್ಯಗಳಲ್ಲಿ ಬಲಿಷ್ಟ ಸಿಐಟಿಯು ಸಂಘಟನೆಯನ್ನು ಬೆಳೆಸಲು ಬೇಕಾದ ಸಾಧ್ಯತೆ, ಕಾರ್ಯಕರ್ತರು ಹಾಗೂ ಪ್ರಶ್ನೆಗಳು ಇವೆ ಎಂದು ಅವರು ಹೇಳಿದರು. ಬಿಹಾರದಲ್ಲಿ ದೇಶದಲ್ಲೇ ಅತಿ ಹೆಚ್ಚು ಸಾರ್ವಜನಿಕ ವಲಯದ ಕಾರ್ಮಿಕರಿದ್ದಾರೆ ಎಂದು ಅವರು ಈ ಸಂದರ್ಭದಲ್ಲಿ ಹೇಳಿದರು.

ಸಿಐಟಿಯು ಕೇಂದ್ರದ ಕಾರ್ಯಾಚರಣೆಯ ಬಗ್ಗೆ ಟೀಕೆಗಳನ್ನು ಒಪ್ಪಿದ ಪಂಥೆಯವರು ಯೋಜನೆ ಮತ್ತು ಆದ್ಯತೆಗಳನ್ನು ರೂಪಿಸುವಲ್ಲಿ ಹೆಚ್ಚಿನ ಸುಧಾರಣೆ ಅಗತ್ಯ ಎಂದರು. ಕೇಂದ್ರದಲ್ಲಿ ಹೆಚ್ಚೆಚ್ಚು ಕಾರ್ಯಕರ್ತರು ಸಿಗುತ್ತಿಲ್ಲ. ಬಲಿಷ್ಟ ರಾಜ್ಯಗಳು ಹಿರಿಯ ಮುಖಂಡರನ್ನು ಕೇಂದ್ರಕ್ಕೆ ಬಿಡಬೇಕು ಎಂದು ಪಂಥೆಯವರು ಮನವಿಮಾಡಿದರು.

ಕೋಮುವಾದ, ಜಾತಿವಾದ ವಿರುದ್ಧ ಪ್ರಚಾರ ನಡೆಸಿದರೂ ಕಾರ್ಮಿಕ ವರ್ಗದ ಮೇಲೆ ಅದರ ಪ್ರಭಾವ ಹೆಚ್ಚುತ್ತಲೇ ಇದೆ ಎಂಬ ಅಭಿಪ್ರಾಯವನ್ನು ಅವರೂ ಒಪ್ಪಿದರು. "ನಾವು ಆತ್ಮ ಪರಿಶೋಧನೆ ಮಾಡಿಕೊಳ್ಳಬೇಕಾಗಿದೆ. ಕೋಮುವಾದದ ವಿರುದ್ಧ ನಮ್ಮ ಪ್ರಚಾರ ಜನಗಳ ಹೃದಯವನ್ನು ತಟ್ಟುತ್ತಿದೆಯೋ ಎಂಬ ಬಗ್ಗೆ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು" ಎಂದ ಅವರು ಸಿಐಟಿಯು ಕಾರ್ಯಕರ್ತರಲ್ಲೂ ಜಾತೀವಾದ ಉಳಿದಿದೆ ಎಂದು ಉದಾಹರಣೆ ನೀಡಿದರು. ಈ ಬಗ್ಗೆ ಸಾಮಾನ್ಯ ಕಾರ್ಮಿಕರಿಗೆ ಶಿಕ್ಷಣ ನೀಡಲು ಅವರಿಗೆ ಅರ್ಥವಾಗುವ ಭಾಷೆಯಲ್ಲಿ ಸಾಹಿತ್ಯವನ್ನು ಪ್ರಕಟಿಸಬೇಕು ಎಂದು ಅವರು ಅಭಿಪ್ರಾಯಪಟ್ಟರು.

**ಚೈತನ್ಯ ಶೀಲ ಶ್ರಮಜೀವಿ ಸಂಸ್ಕೃತಿ ಬೆಳೆಸಬೇಕು**

ಸಮ್ಮೇಳನದಲ್ಲಿ ಹಲವು ಪ್ರತಿನಿಧಿಗಳು ಎತ್ತಿದ ಇನ್ನೊಂದು ಅಂಶವೆಂದರೆ ಸಾಮ್ರಾಜ್ಯಶಾಹಿಗಳ ಬೃಹತ್ ಸಾಂಸ್ಕೃತಿಕ ಧಾಳಿ. ಭಾರತದ ಸಂಘಟಿತ ಕಾರ್ಮಿಕ ವರ್ಗ ಇದಕ್ಕೆ ಸ್ಪಂದಿಸಿದ ರೀತಿ ತುಂಬಾ ದುರ್ಬಲ. ಮಾಧ್ಯಮಗಳ ಮೂಲಕ ನಡೆಯುತ್ತಿರುವ ಈ ಸಾಂಸ್ಕೃತಿಕ ಧಾಳಿಯನ್ನು ಎದುರಿಸಬೇಕು, ಕಾರ್ಮಿಕರ ಪ್ರತಿಭೆಗಳನ್ನು ಬೆಳೆಸಲು ಪ್ರೋತ್ಸಾಹ ನೀಡಿ ಒಂದು ಚೈತನ್ಯ ಶೀಲ ಶ್ರಮಜೀವಿ ಸಂಸ್ಕೃತಿಯನ್ನು ಬೆಳೆಸಲು ಕಾರ್ಮಿಕ ಆಂದೋಲನ ಆದ್ಯತೆ ನೀಡಬೇಕು ಎಂದು ಪಂಥೆ ಹೇಳಿದರು.

ದುಡಿಯುವ ಮಹಿಳೆಯರ ನಡುವೆ ಕೆಲಸವನ್ನು ಹೆಚ್ಚಿಸಿ ಅವರನ್ನು ನಾಯಕತ್ವದ ಸ್ಥಾನಗಳಿಗೆ ತರುವ ಅಗತ್ಯದ ಬಗ್ಗೆ ಹಾಗೂ ಕಾರ್ಮಿಕ-ರೈತ ಸಖ್ಯತೆಯನ್ನು ಪಂಥೆಯವರು ತಮ್ಮ ಉತ್ತರದಲ್ಲಿ ಒತ್ತಿ ಹೇಳಿದರು.

ಜಾಗತೀಕರಣದ ಧಾಳಿಯ ಹಿನ್ನೆಲೆಯಲ್ಲಿ ಸಿಐಟಿಯು ಅಂತರ್ರಾಷ್ಟ್ರೀಯ ಸಂಬಂಧಗಳನ್ನು ಬಲಪಡಿಸಲು ಗಮನ ಕೇಂದ್ರೀಕರಿಸಬೇಕು. ಈ ಹೋರಾಟ ಕೇವಲ ಭಾರತಕ್ಕೇ ಸೀಮಿತವಾಗಿಲ್ಲವಾದ್ದರಿಂದ ವಿಶ್ವಾದ್ಯಂತ ನಡೆಯುತ್ತಿರುವುದರಿಂದ ಅಂತರ್ರಾಷ್ಟ್ರೀಯ ಸೌಹಾರ್ದತೆಯ ಬಗ್ಗೆಯೂ ಗಮನ ಕೇಂದ್ರೀಕರಿಸಬೇಕು. ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಹೋರಾಡಲು ಸಿದ್ಧವಿರುವ, ಜಾಗತೀಕರಣದ ವಿರುದ್ಧ ಹೋರಾಡಲು ಸಿದ್ಧವಿರುವ, ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಲು ಸಿದ್ಧವಿರುವ ಯಾವುದೇ ಕಾರ್ಮಿಕ ಸಂಘಟನೆ ವಿಶ್ವದ ಯಾವುದೇ ಭಾಗದಲ್ಲಿದ್ದರೂ ಅದರೊಡನೆ ಸಿಐಟಿಯು ಸಂಪರ್ಕ ಬೆಳೆಸಿ ಕೊಳ್ಳಬೇಕು" ಎಂದು ಪಂಥೆ ಹೇಳಿದರು.

(ಐಎನ್ಎಸ್)

## ಸಿಐಟಿಯು ಸಮ್ಮೇಳನ ಅಧಿವೇಶನದ ಭವ್ಯವಾದ ಪೆಂಡಲ್

*ಕೊಚ್ಚಿನ್‌ನ ನೆಹರೂ ಕಪ್ ಫುಟ್ಬಾಲ್ ಪಂದ್ಯಾಟವು ಸಮ್ಮೇಳನಕ್ಕೆ ಮೂರು ದಿವಸಕ್ಕಿಂತ ಮುಂಚೆ ಮುಕ್ತಾಯವಾದುದರಿಂದ ಕ್ರೀಡಾಂಗಣ ಸಿಗದೇ ಇದ್ದರೂ ಕೇವಲ ಮೂರು ದಿನದಲ್ಲಿಯೇ ಕಾರ್ಯಕರ್ತರು ದ್ವಾರ ಇತ್ಯಾದಿ ಮಾಡಿ ಮುಗಿಸಿರುತ್ತಾರೆ.*

*ತೆಂಗಿನ ಗರಿಗಳಿಂದಲೇ ಮಾಡಿರುವ ಭವ್ಯವಾದ ಪೆಂಡಲ್ ದೇಶದ ವಿವಿಧ ರಾಜ್ಯಗಳಿಂದ ಬಂದಿರುವ 2500 ಪ್ರತಿನಿಧಿಗಳ ಅಧಿವೇಶನದ ಕಲಾಪ ಸೇರುವ ಸಭಾ ಭವನವಾಗಿ ಮಾರ್ಪಡಿಸಲಾಗಿತು.*

*30 ಡಿಗ್ರಿ ಸೆಕೆ ಇದ್ದರೂ ಸಾಧ್ಯವಾದಷ್ಟು ಫ್ಯಾನ್ ಸೌಕರ್ಯವನ್ನು ಸಭಾಂಗಣದಲ್ಲಿ ವ್ಯವಸ್ಥೆ ಮಾಡಲಾಗಿತ್ತು. ನೀರಿನ ಅಭಾವವಿದ್ದರೂ ಪ್ರತಿನಿಧಿ ಸಂಗಾತಿಗಳಿಗೆ ತೊಂದರೆಯಾಗದಂತೆ ಶುದ್ಧವಾದ ನೀರನ್ನು ಒದಗಿಸಲಾಗಿತ್ತು.*

*ಜವಹಾರ್‌ಲಾಲ್ ನೆಹರೂ ಕ್ರೀಡಾಂಗಣದ ಅತಿಥಿ ಗೃಹಗಳೆಲ್ಲವೂ ಪ್ರತಿನಿಧಿಗಳಿಗೆ ಉಳಿದುಕೊಳ್ಳಲು ವ್ಯವಸ್ಥೆಯಾಗಿತ್ತು.*



## ಹೊಸ ಜನರಲ್ ಕೌನ್ಸಿಲ್ ಆಯ್ಕೆ

ಸಿಐಟಿಯು 9ನೇ ಅಖಿಲ ಭಾರತ ಸಮ್ಮೇಳನ 500 ಸದಸ್ಯರಿರುವ ಹೊಸ ಮಹಾ ಮಂಡಳಿ(ಜನರಲ್ ಕೌನ್ಸಿಲ್) ಯನ್ನು ಆಯ್ಕೆಮಾಡಿತು. ಇವರಲ್ಲಿ 37 ಸದಸ್ಯರನ್ನು ಪದಾಧಿಕಾರಿಗಳನ್ನಾಗಿ ಚುನಾಯಿಸಲಾಯಿತು. ಇ. ಬಾಲಾನಂದನ್ ಅಧ್ಯಕ್ಷರಾಗಿ ಹಾಗೂ ಎಂ.ಕೆ.ಪಂಥೆ ಪ್ರಧಾನ ಕಾರ್ಯದರ್ಶಿಗಳಾಗಿ ಮರು ಆಯ್ಕೆಯಾದರು. ರಣಜಿತ್ ಬಸು ಹೊಸ ಕೋಶಾಧಿಕಾರಿಯಾಗಿರುತ್ತಾರೆ. ಇತರ ಪದಾಧಿಕಾರಿಗಳೆಂದರೆ ಕರ್ನಾಟಕ ಸಿಐಟಿಯು ಅಧ್ಯಕ್ಷ ಎಸ್.ಸೂರ್ಯನಾರಾಯಣ ರಾವ್ ಸೇರಿದಂತೆ ಒಟ್ಟು 15 ಉಪಾಧ್ಯಕ್ಷರುಗಳು ಹಾಗೂ 19 ಕಾರ್ಯದರ್ಶಿಗಳು. ಮಹಾಮಂಡಳಿಗೆ ಕರ್ನಾಟಕದಿಂದ ಉಪಾಧ್ಯಕ್ಷ ಹುದ್ದೆಗೆ ಸೂರ್ಯನಾರಾಯಣರಾವ್ ಸೇರಿದಂತೆ ಒಟ್ಟು 15 ಮುಖಂಡರು ಆಯ್ಕೆಯಾಗಿದ್ದಾರೆ.

**ಕಾರ್ಯಕಾರಿ ಸಮಿತಿ ಸದಸ್ಯರು**

ವಿ.ಜೆ.ಕೆ.ನಾಯರ್, ನಿತ್ಯಾನಂದ ಸ್ವಾಮಿ ಹಾಗೂ ಬಿ.ಮಾಧವ

**ಮಹಾ ಮಂಡಳಿಯ ಇತರ ಸದಸ್ಯರು**

ಕೆ.ಶಂಕರ್, ಕೆ.ಮೂಸಬ್ಬ, ಪದ್ಮಾವತಿ, ರೋನಾಲ್ಡ್ ವಾಜ್, ಇ.ಕೆ.ಎನ್.ರಾಜನ್, ಆರ್. ಶ್ರೀನಿವಾಸ್, ಮೀನಾಕ್ಷಿ ಸುಂದರಂ, ಮೋಹನ್ ಕುಮಾರ್, ಎ.ಬಿ.ದಾಸ್, ವಿ.ಸುಕುಮಾರ್‌ಮತ್ತು ವರಲಕ್ಷ್ಮಿ

## ಉತ್ಸವದ ಹುರುಪು ಸೂಸಿದ ಬೃಹತ್ ರ್‍ಯಾಲಿ

ಸಿಐಟಿಯುನ ಒಂಭತ್ತನೇ ಸಮ್ಮೇಳನದ ಕೊನೆಯಲ್ಲಿ ಏಪ್ರಿಲ್ 26 ರಂದು ನಡೆದ ರ್‍ಯಾಲಿ ಒಂದು ಬೃಹತ್ ಸ್ವರೂಪದ ಉತ್ಸವವೇ ಆಗಿತ್ತು. ಅತ್ತ ಅರಬ್ಬಿ ಸಾಗರದಲ್ಲಿ ಸೂರ್ಯಾಸ್ತದ ಹೊಂಬಣ್ಣ - ಇತ್ತ ಕೊಚ್ಚಿಯ ಸುಂದರ ಸಾಗರ ತೀರ ಮರೀನ್ ಡ್ರೈವ್ ಅಲೆಅಲೆಯಾಗಿ ಬಂದ ಕೆಂಬಾವುಟಗಳಿಂದ ಕೆಂಪಾಗಿತ್ತು. ಕೇವಲ ಎರ್ನಾಕುಲಂ ಜಿಲ್ಲೆಯಿಂದಲೇ ಬಂದ ಕೈಗಾರಿಕಾ ಕಾರ್ಮಿಕರಿಂದ ಇಡೀ ಮರಿನ್‌ಡ್ರೈವ್ ಸಾಗರ ತೀರ ಸಂಪೂರ್ಣ ತುಂಬಿಹೋಯಿತು. ಮಧ್ಯಾಹ್ನದಿಂದಲೇ ಕಾರ್ಮಿಕರು ಮೆರವಣಿಗೆಯಲ್ಲಿ ಬರಲಾರಂಭಿಸಿದ್ದರು. ಇಡೀ ನಗರದಲ್ಲಿ ಬೇರೆ ಚಟುವಟಿಕೆಗಳೆಲ್ಲಾ ಸ್ತಬ್ಧಗೊಂಡವು. ರ್‍ಯಾಲಿಯಲ್ಲಿ ಭಾಗವಹಿಸಿದ ಕಾರ್ಮಿಕರು ರ್‍ಯಾಲಿಯನ್ನು ಒಂದು ಉತ್ಸವವನ್ನಾಗಿ ಮಾಡಿ ಬಿಟ್ಟಿದ್ದರು. ಪತಾಕೆಗಳು, ಬಾವುಟಗಳು, ಬ್ಯಾನರುಗಳು, ಕಟೌಟ್‌ಗಳು, ಜತೆಗೆ ಕೇರಳದ ದುಡಿಯುವ ಜನಗಳ ಜೀವನ, ಹೋರಾಟಗಳನ್ನು ಬಿಂಬಿಸುವ ಸ್ತಬ್ಧ ಚಿತ್ರಗಳು. ಕೇರಳದ ಪ್ರತಿಯೊಂದು ಯೂನಿಯನ್ ತನ್ನದೇ ಸಾಂಸ್ಕೃತಿಕ ತಂಡವನ್ನು ಹೊಂದಿರುತ್ತದೆ. ಸಂಗೀತ, ನಾಟಕ, ನೃತ್ಯ ಈ ತಂಡದ ಸಾಮಾನ್ಯ ಚಟುವಟಿಕೆಗಳು. ರ್‍ಯಾಲಿಯಲ್ಲಿ ಇದರ ಒಂದು ಚಿತ್ರ ಬಿಂಬಿತವಾಗಿತ್ತು.

ಸಿಐಟಿಯುನ ಪುನರಾಯ್ಕೆಗೊಂಡ ಅಧ್ಯಕ್ಷ ಬಾಲಾನಂದನ್ ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಿಐಟಿಯು ಮುಖಂಡರಾದ ಕೆ.ಎನ್. ರವೀಂದ್ರನಾಥ್ ಸ್ವಾಗತ ಭಾಷಣ ಮಾಡಿದರು. ವಿ.ಬಿ.ಚೆರಿಯನ್ ವಿದೇಶಿ ಅತಿಥಿಗಳನ್ನು ಪರಿಚಯ ಮಾಡಿಸಿದಾಗ "ಕಾರ್ಮಿಕ ವರ್ಗದ ಐಕ್ಯತೆ ಚಿರಾಯುವಾಗಲಿ" ಘೋಷಣೆ ಮುಗಿಲು ಮುಟ್ಟಿತು. ಇ.ಬಾಲಾನಂದನ್ ಮತ್ತು ಪ್ರಧಾನ ಕಾರ್ಯದರ್ಶಿ ಎಂ.ಕೆ.ಪಂಥೆಯವರು ಕಾರ್ಮಿಕ ವರ್ಗದ ಐಕ್ಯತೆಯನ್ನು ಬಲಿಷ್ಟಗೊಳಿಸಲು ಹಾಗೂ ಉದಾರೀಕರಣದ ನೀತಿಗಳ ವಿರುದ್ಧ ಐಕ್ಯ ಹೋರಾಟ ನಡೆಸಲು ಕರೆ ನೀಡಿದರು. "ಕೊಚ್ಚಿ ಹಡಗುಕಟ್ಟೆಯಲ್ಲಿ ಈಗ ಹಡಗುಗಳನ್ನು ಕಟ್ಟುತ್ತಿಲ್ಲ. ಉಕ್ಕಿನ ಕಾರ್ಖಾನೆಗಳಲ್ಲಿ ಉಕ್ಕು ತಯಾರಾಗುತ್ತಿಲ್ಲ. ಭಾರತದ ಉದ್ದಿಮೆಗಳನ್ನು ನಾಶ ಮಾಡಿ ವಿದೇಶೀ ಬಹುರಾಷ್ಟ್ರೀಯ ಕಂಪನಿಗಳಿಗೆ ಉಪ್ಪಿನಕಾಯಿ, ಹಪ್ಪಳ ತಯಾರಿಸಲು ಕೂಡಾ ಲೈಸೆನ್ಸ್ ನೀಡಲಾಗುತ್ತಿದೆ. ಸರಕಾರದ ಈ ನೀತಿಗಳು ಸಿಐಟಿಯು ಕಾರ್ಮಿಕರನ್ನಷ್ಟೇ ಅಲ್ಲ ಇಂಟಕ್, ಎಐಟಿಯುಸಿ, ಬಿಎಂಎಸ್, ನೌಕರರನ್ನೂ, ಯಾವುದೇ ಕೇಂದ್ರ ಸಂಘಟನೆಗಳಿಗೆ ಸೇರಿರದ ಕಾರ್ಮಿಕರನ್ನು ತಟ್ಟುತ್ತಿದೆ. ಆದ್ದರಿಂದ ನಾವೆಲ್ಲ ಒಟ್ಟು ಸೇರಿದಾಗ ಮಾತ್ರವೇ ನಮ್ಮ ಶಕ್ತಿಯನ್ನು ಪ್ರದರ್ಶಿಸಿ ಸರಕಾರ ತನ್ನ ದಾರಿ ಬದಲಿಸುವಂತೆ ಮಾಡಬಹುದು" ಎಂದು ಹೇಳಿದರು.

ಮುಖ್ಯಭಾಷಣಕಾರ ಹಾಗೂ ಕೇರಳದ ಮುಖ್ಯಮಂತ್ರಿ ಇ.ಕೆ. ನಾಯನಾರ್ ಕಾಂಗ್ರೆಸ್, ಬಿಜೆಪಿಯನ್ನು ಗುರಿಯಿಟ್ಟು ಹಾರಿಸಿದ ಚಟಾಕಿಗಳು ಸಭಿಕರನ್ನು ನಗೆಗಡಲಲ್ಲಿ ತೇಲಿಸಿದವು.

(ಐಎನ್ಎಸ್)

# ಹರ್ಯಾಣ ರೈತರ ರ್‍ಯಾಲಿ ಧರಣಿ

ಹರ್ಯಾಣದ ಸಾವಿರಾರು ರೈತರು ಈಚೆಗೆ ಬೃಹತ್ ರ್‍ಯಾಲಿ ಹಾಗೂ ವಿಧಾನಸಭೆ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು.

ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಅಬಾದ್ಕರ್ ಪದ್ಧತಿಯನ್ವಯ ಕೃಷಿ ನಡೆಸುತ್ತಿರುವ ರೈತರ ಬೇಡಿಕೆಗಳನ್ನು ಮುಂದಿಟ್ಟು ಈ ಚಳುವಳಿಯನ್ನು ನಡೆಸಲಾಯಿತು. ಉಭಯ ಕಿಸಾನ್ ಸಭಾಗಳು ಹೋರಾಟಕ್ಕೆ ಕರೆ ನೀಡಿದ್ದವು.

ಜನವರಿಯಲ್ಲಿ ಫವಾದಲ್ಲಿ ನಡೆದ ಕಿಸಾನ್ ಪಂಚಾಯತ್ ಅಬಾದ್ಕರ್ ಕೃಷಿಕರ ತೀಕ್ಷ್ಣ ಹೋರಾಟವನ್ನು ರೂಪಿಸಲು ನಿರ್ಧಾರವನ್ನು ತೆಗೆದುಕೊಂಡಿತ್ತು.

ಫವಾ ಮತ್ತು ಗುಹ್ಲಾದ ಅಬಾದ್ಕರ್ ರೈತರಿಗೆ ಅವರು ಕೃಷಿ ಮಾಡುತ್ತಿರುವ ಜಮೀನಿನ ಆಸ್ತಿ ಹಕ್ಕನ್ನು ನೀಡಬೇಕುಎಂಬಪ್ರಮುಖ ಬೇಡಿಕೆಯನ್ನಿಟ್ಟು ಹೋರಾಟವನ್ನು ಸಂಘಟಿಸಲಾಗಿತ್ತು.

ಕುರುಕ್ಷೇತ್ರ ಜಿಲ್ಲೆಯ ಫವಾ ಮತ್ತು ಕೈತಾಲ್ ಜಿಲ್ಲೆಯ ಗುಹ್ಲಾದ ಈ ರೈತರನ್ನ ಅವರ ಜಮೀನಿನಿಂದ ಒಕ್ಕಲೆಬ್ಬಿಸಲು ರಾಜ್ಯ ಸರಕಾರ ಪ್ರಯತ್ನಿಸುತ್ತಿದೆ. 45 ವರ್ಷಗಳ ಹಿಂದೆ ಆಗಿನ ಸಂಯುಕ್ತ ಪಂಜಾಬ್ ಸರಕಾರ ಅರಣ್ಯ ಹಾಗೂ ಬಂಜರು ಭೂಮಿಯಲ್ಲಿ ಕೃಷಿ ಮಾಡಲು ಈ ರೈತರನ್ನು ಕರೆ ತಂದಿತ್ತು ಎನ್ನುವುದನ್ನು ಮರೆಯಲಾಗದು.

ಐದು ಎಕರೆವರೆಗಿನ ಜಮೀನು ಹೊಂದಿರುವ ರೈತರಿಗೆ ಆಸ್ತಿ ಹಕ್ಕು ನೀಡಬೇಕು ಹಾಗೂ 10 ಎಕರೆವರೆಗಿನ ಜಮೀನುಳ್ಳವರಿಗೆ ಪಟ್ಟಾ ನೀಡಬೇಕು ಎಂಬ ಪ್ರಮುಖ ಬೇಡಿಕೆಯನ್ನು ರ್‍ಯಾಲಿ ಮುಂದಿಟ್ಟಿತು. ರ್‍ಯಾಲಿಯಲ್ಲಿ ಮಂಡಿಸಲಾದ ಬೇಡಿಕೆಗಳುಳ್ಳ ಮನವಿಪತ್ರದ ಪ್ರತಿಗಳನ್ನು ಮುಖ್ಯಮಂತ್ರಿ, ಅಸೆಂಬ್ಲಿ ಸ್ಪೀಕರ್ ಮತ್ತು ಶಾಸಕರಿಗೆ ಸಲ್ಲಿಸಲಾಗಿದೆ.

**ಖಂಡನೆ:** ಪಂಜಾಬ್ ಮತ್ತು ಹರ್ಯಾಣದ ಬಂಡವಾಳಶಾಹಿ ಭೂಮಾಲಿಕ ನಿಯಂತ್ರಿತ ಸರಕಾರಗಳು ಸಂಕುಚಿತ ಘೋಷಣೆಗಳನ್ನು ಮುಂದೊಡ್ಡಿ ಉಭಯ ರಾಜ್ಯಗಳ ಜನರ ಮಧ್ಯೆ ಅಸಹನೆ, ವೈರತ್ವ ಹುಟ್ಟಿಸಲು ಯತ್ನಿಸುತ್ತಿರುವುದನ್ನು ರೈತರ ರ್‍ಯಾಲಿ ಬಲವಾಗಿ ಖಂಡಿಸಿತು.

ಎರಡೂ ರಾಜ್ಯಗಳ ನಡುವಿನ ವಿವಾದಗಳನ್ನು ಬಗೆಹರಿಸುವ ನಿಟ್ಟಿನಲ್ಲಿ 1985ರ ರಾಜೀವ್-ಲೋಂಗೋವಾಲ್ ಒಪ್ಪಂದವನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸುವಂತೆ ರ್‍ಯಾಲಿ ಒತ್ತಾಯಿಸಿತು.

ಹರ್ಯಾಣದ ರೈತರ ಪೈರಿಗೆ ಹೆಚ್ಚು ನೀರು ಸಿಗುವಂತಾಗಲು ಸಟ್ಲೇಜ್-ಯಮುನಾ ಸಂಪರ್ಕ ಕಾಲುವೆಯನ್ನು ಶೀಘ್ರದಲ್ಲಿ ಪೂರ್ಣಗೊಳಿಸುವಂತೆಯೂ ರೈತರು ಒತ್ತಾಯಿಸಿದರು.




ವಿದ್ಯಾರ್ಥಿ ನಾಯಕನ ಹತ್ಯೆ ಪ್ರಕರಣ

# ಜನತಾದಳದಿಂದ ಸಂಸದನ ವಜಾಕ್ಕೆ ಆಗ್ರಹ

ವಿದ್ಯಾರ್ಥಿ ಮುಖಂಡ ಚಂದ್ರಶೇಖರ ಅವರ ಹತ್ಯೆ-ಪ್ರಕರಣದಲ್ಲಿ ಒಳಗೊಂಡಿರುವ ರೆನ್ನಲಾದ ಜನತಾದಳ ಸಂಸತ್ ಸದಸ್ಯ ಮಹಮದ್ ಷಹಾಬುದ್ದಿನ್‌ರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ತೆಗೆದು ಹಾಕುವಂತೆ ಬುದ್ಧಿಜೀವಿಗಳ ಸತ್ಯಶೋಧನೆ ತಂಡವೊಂದು ಒತ್ತಾಯಿಸಿದೆ.

2 ಬಾರಿ ಜವಾಹರಲಾಲ್ ನೆಹರೂ ವಿ.ವಿ. ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿದ್ದ ಚಂದ್ರಶೇಖರರನ್ನು ಬಿಹಾರದ ಸಿವಾನ್‌ನಲ್ಲಿ ಮಾರ್ಚ್ 30 ರಂದು ದುಷ್ಕರ್ಮಿಗಳು ಕೊಂದು ಹಾಕಿದ್ದರು. ಈ ಹತ್ಯೆಗೆ ವ್ಯಾಪಕ ಪ್ರತಿಭಟನೆ ವ್ಯಕ್ತವಾಗಿತ್ತು.

ಷಹಾಬುದ್ದಿನ್ ಈ ಕೊಲೆ ಪ್ರಕರಣವಲ್ಲದೆ ಇನ್ನು ಹಲವು ಕ್ರಿಮಿನಲ್ ಪ್ರಕರಣಗಳ ಆರೋಪಿಯಾಗಿದ್ದಾರೆ. 23 ಕ್ರಿಮಿನಲ್ ಮೊಕದ್ದಮೆಗಳನ್ನು ಎದುರಿಸುತ್ತಿರುವ ಈ ಸಂಸತ್ ಸದಸ್ಯ ಈಗ ಸಿವಾನ್ ಸೆರೆಮನೆಯಲ್ಲಿಬಂಧಿ.

ಸ್ವತಂತ್ರವಾದ ಈ ಸತ್ಯಶೋಧನೆ ತಂಡ ಏಪ್ರಿಲ್ 18 ರಿಂದ 21 ರ ವರೆಗೆ ಸಿವಾನ್‌ಗೆ ಭೇಟಿಕೊಟ್ಟು ಅಧ್ಯಯನ ನಡೆಸಿತು.

ಜೆಎನ್‌ಯುನ ಪ್ರೊ. ಅಶ್ವಿನಿ ರಾಯ್, ಲೋಕಾಯುತದ ಸ್ಮಿತು ಕೊಠಾರಿ, ಸಾಮಾಜಿಕ ಕಾರ್ಯಕರ್ತೆ ಹಾಗೂ ಲೇಖಕಿ ಪ್ರಮಿಳಾ ಲೂವಿಸ್, ಇನ್ಸಾಫ್‌ನ ಮೆಹ್ದಿ ಅರ್ಸ್ಲಾನ್ ಮತ್ತು ಜಾಮಿಯಾ ಮಿಲಿಯಾದ ಸಂದರ್ಶಕ ಪ್ರೊಫೆಸರ್ ಅಚಿನ್ ವನಾಯಕ್ ತಂಡದಲ್ಲಿ ಇದ್ದರು.

**ಅನುಮಾನ:** ಭಾರೀ ಪ್ರತಿಭಟನೆ ವ್ಯಕ್ತವಾದ ಹಿನ್ನೆಲೆಯಲ್ಲಿ, ಚಂದ್ರಶೇಖರ ಹತ್ಯೆ ಪ್ರಕರಣದ ಬಗ್ಗೆ ಸಿಬಿಐ ತನಿಖೆ ನಡೆಸುವುದಾಗಿ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ ಏಪ್ರಿಲ್ 2 ರಂದು ಪ್ರಕಟಿಸಿದ್ದರು. ಆದರೆ ರಾಜ್ಯ ಸರಕಾರ ಈ ಸಂಬಂಧ ಸಿಬಿಐಗೆ ಇನ್ನೂ ಅಧಿಕೃತವಾಗಿ ಮನವಿ ಮಾಡಿಕೊಂಡಿಲ್ಲ.

ಈ ಬಗ್ಗೆ ಸತ್ಯಶೋಧನೆ ತಂಡ ಅನುಮಾನ ವ್ಯಕ್ತಪಡಿಸಿದೆ.

ಈವಿಚಾರವಾಗಿ ಮುಖ್ಯಮಂತ್ರಿಯವರ ಗಂಭೀರತೆ ಹಾಗೂ ವಿಶ್ವಾಸಾರ್ಹತೆ ಅನುಮಾನಕ್ಕೆ ಎಡೆ ಮಾಡಿಕೊಟ್ಟಿರುವಂತಿದೆ ಎಂದು ಅಧ್ಯಯನ ವರದಿ ತಿಳಿಸಿದೆ.

ಷಹಾಬುದ್ದಿನ್ ಈಗ ಜೈಲಿನಲ್ಲಿದ್ದರೂ ಸಿವಾನ್ ನಿವಾಸಿಗಳಲ್ಲಿ ಆತ ಭಯದ ವಾತಾವರಣವನ್ನು ಸೃಷ್ಟಿಸುತ್ತಲೇ ಇರುವ ಬಗ್ಗೆ ತಂಡ ಕಳವಳ ವ್ಯಕ್ತಪಡಿಸಿದೆ.

# ಎನ್ರಾನ್: ಮತ್ತೆ ಒಪ್ಪಂದ ಪ್ರಶ್ನಿತ ಅರ್ಜಿ ವಿಚಾರಣೆ ನಿರ್ಧಾರ

ಆರಂಭದಲ್ಲಿ ಎನ್ರಾನ್ ವಿದ್ಯುತ್ ಯೋಜನೆಯನ್ನು ಕೈ ಬಿಡಲು ನಿರ್ಧರಿಸಿದ್ದ ಮಹಾರಾಷ್ಟ್ರ ಸರಕಾರವು ಧಿಡೀರನೆ ತನ್ನ ನಿಲುವನ್ನು ಬದಲಿಸಿ ಮತ್ತೆ ಒಪ್ಪಂದ ಮಾಡಿಕೊಂಡಿರುವ ಬಗ್ಗೆ ಸಾರ್ವಜನಿಕ ಹಿತಾಸಕ್ತಿಯ ಹಿನ್ನೆಲೆಯಲ್ಲಿ ವಿಚಾರಣೆ ನಡೆಸಲು ಸುಪ್ರೀಂಕೋರ್ಟ್ ಮೇ2 ರಂದು ತೀರ್ಮಾನಿಸಿತು.

ತೀವ್ರ ವಿವಾದಕ್ಕೆ ಎಡೆಮಾಡಿಕೊಟ್ಟಿದ್ದ ಎನ್ರಾನ್ ಯೋಜನೆ ಕುರಿತು ಸುಪ್ರೀಂ ಕೋರ್ಟ್ ತೆಗೆದುಕೊಂಡ ಈ ನಿರ್ಧಾರ ಒಂದು ಮಹತ್ವದ ವಿದ್ಯಮಾನವಾಗಿದೆ.

ಸಿಐಟಿಯು ಸಲ್ಲಿಸಿದ್ದ ಮನವಿಯನ್ನು ಪರಿಶೀಲಿಸಿದ ಮುಖ್ಯ ನ್ಯಾಯಾಧೀಶರಾದ ಜೆ.ಎಸ್.ಶರ್ಮಾ, ಸುಜಾತ ವಿ.ಮನೋಹರ್ ಮತ್ತು ಜಗನ್ನಾಥ್ ರಾವ್ ಅವರನ್ನೊಳಗೊಂಡ ತ್ರಿಸದಸ್ಯ ಪೀಠವು ಈ ಮಹತ್ತರ ನಿರ್ಧಾರವನ್ನು ಕೈಗೊಂಡಿದೆ.

ಬೃಹತ್ ಮೊತ್ತದ ದಾಭೋಲ್ ವಿದ್ಯುತ್ ಯೋಜನೆಯನ್ನು ವಿದೇಶಿ ಮೂಲದ ಎನ್ರಾನ್ ಎಂಬ ಏಕೈಕ ಕಂಪನಿಗೆ ನೀಡಿ ವಿದ್ಯುತ್ ವಿನಿಮಯ ಒಪ್ಪಂದ ಮಾಡಿಕೊಂಡಿರುವ ಕ್ರಮದ ಬಗ್ಗೆ ವಿಚಾರಣೆ ನಡೆಸಬೇಕೆಂದು ಸಿಐಟಿಯು ಸಂಘಟನೆ ಸಲ್ಲಿಸಿದ್ದ ಮನವಿಯನ್ನು ತ್ರಿಸದಸ್ಯ ಪೀಠ ಪುರಸ್ಕರಿಸಲಿಲ್ಲ.

ಎನ್ರಾನ್ ಕಂಪನಿಯ 35 ಸಾವಿರ ಮಿಲಿಯನ್ ಡಾಲರ್‌ಗಳ ವಿದ್ಯುತ್ ಯೋಜನೆ ಕುರಿತಂತೆ ರಾಜ್ಯ ಸರಕಾರವು ಪದೇ ಪದೇ ನಿರ್ಧಾರವನ್ನು ಬದಲಿಸಿದ್ದನ್ನು ಪ್ರಶ್ನಿಸಿ ಮಹಾರಾಷ್ಟ್ರ ಸರಕಾರಕ್ಕೆ ನೋಟಿಸ್ ನೀಡಿದ ನ್ಯಾಯಾಲಯ, ಯೋಜನೆಯ ನಿರ್ವಾಹಕ ವ್ಯಕ್ತಿಗಳ ಉತ್ತರದಾಯಿತ್ವದ ಬಗ್ಗೆ ಸಮಾಧಾನ ವ್ಯಕ್ತಪಡಿಸಿದೆಯಾದರೂ ರಾಜ್ಯ ಸರಕಾರದ ಬದಲಾದ ನಿಲುವಿನ ಬಗ್ಗೆ ವಿಚಾರಣೆ ಕೈಗೊಂಡಿದೆ.

ಆರಂಭದಲ್ಲಿ ಎನ್ರಾನ್ ಕಂಪನಿಯ ವಿದ್ಯುತ್ ಯೋಜನೆಯನ್ನು ಅಂದು ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರಕಾರವು ಒಪ್ಪಿಕೊಂಡಿತ್ತು. ನಂತರ ಅಧಿಕಾರಕ್ಕೆ ಬಂದ ಬಿಜೆಪಿ-ಶಿವಸೇನೆ ಸರಕಾರವು ಇಡೀ ಯೋಜನೆಯನ್ನು ರದ್ದುಗೊಳಿಸಿತಾದರೂ ಕೆಲ ದಿನಗಳ ನಂತರ ಯೋಜನೆಯಲ್ಲಿ ನೆಪ ಮಾತ್ರಕ್ಕೆ ಕೆಲ ಬದಲಾವಣೆ ಮಾಡಿ ಮತ್ತೆ ಪುರಸ್ಕರಿಸಿತು. ಈ ಬದಲಾದ ನಿಲುವಿನ ಬಗ್ಗೆ ಅರ್ಜಿದಾರ ಸಂಘಟನೆ ಬಲವಾದ ಅನುಮಾನ ವ್ಯಕ್ತಪಡಿಸಿದೆ.

ಸರಕಾರದ ಈ ಬದಲಾದ ನಿಲುವಿನಲ್ಲಿ ಜನರಿಗೆ ಅಪನಂಬಿಕೆ ಬಂದಿದ್ದು, ಕೆಲ ಅಧಿಕಾರಿಗಳು ಹಾಗೂ ರಾಜಕೀಯ ನಾಯಕರು ಲಂಚದ ಆಮಿಷಕ್ಕೆ ಒಳಗಾಗಿದ್ದಾರೆಂದು ಅರ್ಜಿದಾರರು ಆರೋಪಿಸಿದ್ದಾರೆ.

# ಸಿಐಟಿಯು ನಾಯಕಿಯ ಬರ್ಬರ ಹತ್ಯೆ



*ಮಹಿಳೆಯಾದರೇನಂತೆ ಈಕೆಯ ದಿಟ್ಟ ಹೋರಾಟಗಳು ಹೆಂಡದ ದೊರೆಗಳು ಹಾಗೂ ಕಾರ್ಮಿಕರನ್ನು ಸುಲಿಯುವ ಕೈಗಾರಿಕೆಗಳ ಮಾಲಿಕರ ಎದೆಯಲ್ಲಿ ನಡುಕವನ್ನೇ ಹುಟ್ಟಿಸಿದ್ದವು. ಆ ಧೀಮಂತ ಹೋರಾಟದಿಂದ ಈಕೆ ಈಗ ಹುತಾತ್ಮರಾಗಿದ್ದಾರೆ.*

*ಹೌದು, ಈ ಸಮರಧೀರ ಮಹಿಳೆಯ ಹೆಸರು ಕೆ.ಲೀಲಾವತಿ. ತಮಿಳುನಾಡಿನ ಮಧುರೆ ಮುನ್ಸಿಪಾಲಿಟಿಯ ಸಿಪಿಐ(ಎಂ) ಸದಸ್ಯೆ. ತಮಿಳುನಾಡು ಕೈಮಗ್ಗ ಕಾರ್ಮಿಕರ ಒಕ್ಕೂಟದ ಉಪಾಧ್ಯಕ್ಷೆ. ಮಧುರೆಯಲ್ಲಿ ಸಿಪಿಐ(ಎಂ) ಮತ್ತು ಸಿಐಟಿಯುನ ಜನಪ್ರಿಯ ನಾಯಕಿಯಾಗಿದ್ದ ಕಾಂ॥ ಲೀಲಾವತಿಯರನ್ನು ಏಪ್ರಿಲ್ 23 ರಂದು ಹಾಡು ಹಗಲಿನಲ್ಲೇ ಬರ್ಬರವಾಗಿ ಹತ್ಯೆ ಮಾಡಲಾಗಿದೆ.*

*ಕೈಮಗ್ಗ ಕಾರ್ಮಿಕರ ನಡುವೆ ಚಟುವಟಿಕೆಗಳನ್ನು ಆರಂಭಿಸುವ ಮುನ್ನ ಕಾಂ॥ ಲೀಲಾವತಿ ಡಿವೈಎಫ್ಐ ಸಕ್ರಿಯ ಕಾರ್ಯಕರ್ತೆ ಆಗಿದ್ದರು.*

*ಈ ಪ್ರದೇಶದಲ್ಲಿ ಹೆಂಡದ ಮಾಫಿಯಾ ವಿರುದ್ಧ ನಡೆದ ಸಂಗ್ರಾಮದಲ್ಲಿ ಆಕೆ ಮಹತ್ವದ ಪಾತ್ರವನ್ನು ವಹಿಸಿದ್ದರು. ಆಕೆಯ ಹತ್ಯೆಯ ಹಿಂದೆ ಈ ಧೂರ್ತರ ಕೈವಾಡ ಇದೆ ಎಂಬುದು ಖಚಿತವಾಗಿದೆ.*

*ಕೊಚ್ಚಿಯಲ್ಲಿ ನಡೆಯಲಿದ್ದ ಸಿಐಟಿಯುನ ಒಂಭತ್ತನೇ ಅಖಿಲ ಭಾರತ ಸಮ್ಮೇಳನದಲ್ಲಿ ಕಾಂ॥ ಲೀಲಾವತಿಯರ ಅಮಾನುಷ ಹತ್ಯೆಯ ವಿಚಾರಗಳನ್ನು ಪ್ರಕಟಿಸಿದ್ದಾಗ ಸಮ್ಮೇಳನ ಸ್ತಂಭೀಭೂತವಾಯಿತು. ಬರ್ಬರ ಕೊಲೆಯನ್ನು ಖಂಡಿಸಿದ ಸಮ್ಮೇಳನ, ಹಂತಕರನ್ನು ತಕ್ಷಣವೇ ಬಂಧಿಸುವಂತೆ ತಮಿಳುನಾಡು ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಕೈಗೊಂಡಿತು. ಪ್ರತಿನಿಧಿಗಳು ಹುತಾತ್ಮ ಸಂಗಾತಿಯ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಿದರು.*

***ಮಧುರೆ ಬಂದ್***

*ಕಾ॥ ಲೀಲಾವತಿಯವರ ಹತ್ಯೆಯನ್ನು ಪ್ರತಿಭಟಿಸಲು ನಿಗದಿಯಾದ ದಿನ ಮಧುರೆಯಲ್ಲಿ ಸ್ವಯಂ ಸ್ಫೂರ್ತಿಯಿಂದ ಬಂದ್ ಆಚರಿಸಲಾಯಿತು. ಬಹುತೇಕ ಅಂಗಡಿಗಳು ಮುಚ್ಚಿದ್ದವು. ಸರಕಾರದ ವ್ಯವಸ್ಥೆ ಸ್ತಬ್ಧಗೊಂಡಿತು. ರಾಜ್ಯಾದ್ಯಂತ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಲು ಸಿಪಿಐ(ಎಂ) ತಮಿಳುನಾಡು ರಾಜ್ಯ ಸಮಿತಿ ಕರೆ ಕೊಟ್ಟಿತ್ತು.*

*ಕಾ॥ ಲೀಲಾವತಿ ಹತ್ಯೆ ಪ್ರಕರಣವನ್ನು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ (ಎಐಡಿಡಬ್ಲ್ಯೂಎ) ಕಟುವಾಗಿ ಖಂಡಿಸಿದೆ. ಹಂತಕರು ಹಾಗೂ ಅವರ ಹಿಂದಿರುವವರನ್ನು ಬಂಧಿಸುವಂತೆ ನಿರ್ದಿಷ್ಟ ಸಮಯ ದೊಳಗೆ ತನಿಖೆಯನ್ನು ಪೂರ್ಣಗೊಳಿಸುವಂತೆ ಅದು ಒತ್ತಾಯಿಸಿದೆ.*

# ಅಕಾಲಿ ದಳ-ಬಿಜೆಪಿ ಕೂಟಕ್ಕೆ ಮುಖಭಂಗ

ಪಂಜಾಬಿನಲ್ಲಿ ಆಡಳಿತ ನಡೆಸುತ್ತಿರುವ ಅಕಾಲಿದಳ-ಬಿಜೆಪಿ ಮೈತ್ರಿ ಕೂಟ ಅಧಿಕಾರಕ್ಕೆ ಬಂದ ಕೆಲವೇ ತಿಂಗಳಲ್ಲಿ ಭಾರೀ ಮುಖಭಂಗಕ್ಕೆ ಒಳಗಾಗಿದೆ.

ಏಪ್ರಿಲ್ 27 ರಂದು ನಡೆದ ರಾಜ್ಯದ ಮೂರು ಮಹಾನಗರಪಾಲಿಕೆಗಳ ಪೈಕಿ ಒಂದರಲ್ಲಿ ಮಾತ್ರ ಸರಳ ಬಹುಮತವನ್ನು ಪಡೆದಿರುವ ಕೂಟ ಎರಡರಲ್ಲಿ ಸೋಲುಂಡಿದೆ.

ಫೆಬ್ರವರಿಯಲ್ಲಿ ವಿಧಾನ ಸಭೆ ಚುನಾವಣೆಗಳಲ್ಲಿ ಅಧಿಕಾರಕ್ಕೆ ಬಂದ ಈ ಅಪವಿತ್ರ ಮೈತ್ರಿಕೂಟದ ಬಗ್ಗೆ ರಾಜ್ಯದ ಜನರಲ್ಲಿ ಹುಟ್ಟಿರುವ ಅಸಹನೆ, ಅಸಂತೃಪ್ತಿಗೆ ಸ್ಥಳೀಯ ಸಂಸ್ಥೆ ಚುನಾವಣೆಗಳ ಫಲಿತಾಂಶ ಕನ್ನಡಿ ಹಿಡಿದಿದೆ.

ಲೂಧಿಯಾನ ಪಾಲಿಕೆಯ 70 ಸ್ಥಾನಗಳಲ್ಲಿ ಕೂಟ 38ರಲ್ಲಿ ಗೆದ್ದು ಸರಳ ಬಹುಮಾನ ಪಡೆದಿದೆ. ಜಲಂಧರ್ ಮತ್ತು ಅಮೃತಸರ ಪಾಲಿಕೆಯಲ್ಲಿ ಅಧಿಕಾರಕ್ಕೆ ಬರಲು ಅದು ಪಕ್ಷೇತರರ ಬೆಂಬಲವನ್ನು ಕೋರುವ ಹಾದಿಯಲ್ಲಿದೆ.

ಲೂಧಿಯಾನ ಪಾಲಿಕೆಯಲ್ಲಿ ಅಕಾಲಿದಳ 20, ಬಿಜೆಪಿ 18, ಜಲಂಧರ್‌ನಲ್ಲಿ ಅಕಾಲಿ 10, ಬಿಜೆಪಿ 10 ಮತ್ತು ಅಮೃತಸರದಲ್ಲಿ ಅಕಾಲಿ ಹಾಗೂ ಬಿಜೆಪಿ 22 ಸ್ಥಾನಗಳಲ್ಲಿ ಗೆದ್ದಿದೆ.

**ಎಡಪಕ್ಷಗಳ ಸಾಧನೆ**

ಅಮೃತಸರ ಮಹಾನಗರ ಪಾಲಿಕೆಗೆ ಸ್ಪರ್ಧಿಸಿದ ಸಿಪಿಐ(ಎಂ) ನ ಏಕೈಕ ಅಭ್ಯರ್ಥಿ ಜಯಶಾಲಿಯಾಗಿದ್ದಾರೆ. ಇದೇ ಪಾಲಿಕೆಯಲ್ಲಿ ಸಿಪಿಐ ನಾಲ್ಕು ಸ್ಥಾನಗಳಲ್ಲಿ ಗೆದ್ದಿದೆ. ಅದು 10 ರಲ್ಲಿ ಸ್ಪರ್ಧಿಸಿತ್ತು.

ಸಿಖ್ ಧರ್ಮಿಯರ ಪವಿತ್ರ ನಗರವಾಗಿರುವ ಅಮೃತಸರ ಪಾಲಿಕೆಯಲ್ಲಿ 60 ಸ್ಥಾನಗಳಿವೆ. ಆ ಪೈಕಿ ಐದು ಸ್ಥಾನಗಳನ್ನು ಎಡ ಪಕ್ಷಗಳು ಪ್ರತಿನಿಧಿಸುವುದು ಮಹತ್ವದ ಸಾಧನೆಯೇ ಹೌದು.

**ಅಧಿಕಾರ ದುರುಪಯೋಗ**

ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಮೇಲುಗೈ ಸಾಧಿಸಲು ಅಕಾಲಿದಳ-ಬಿಜೆಪಿ ಕೂಟ ಅಧಿಕಾರದ ಯಂತ್ರವನ್ನು ದುರುಪಯೋಗ ಪಡಿಸಿಕೊಂಡಿತು, ತೋಳ್ಬಲವನ್ನು ಪ್ರದರ್ಶಿಸಿದ್ದಲ್ಲದೇ ಹೆಂಡದ ಹೊಳೆಯನ್ನೂ ಹರಿಸಿತ್ತು. ಖೋಟಾ ಮತದಾನಕ್ಕೂ ಅದು ವಹಿಸಿತ್ತು. ಆದರೆ ಇವು ಯಾವುದೂ ಮತದಾರರನ್ನು ಮರುಳುಗೊಳಿಸಲು ಯಶಸ್ವಿಯಾಗಲಿಲ್ಲ.

ಚುನಾವಣೆಯ ಫಲಿತಾಂಶ ಸ್ಪಷ್ಟವಾಗಿ ಮೈತ್ರಿಕೂಟದ ಪರವಾಗಿದ್ದ ಎಂದು ಮುಖ್ಯಮಂತ್ರಿ ಹಾಗೂ ಅಕಾಲಿದಳದ ನಾಯಕ ಪ್ರಕಾಶಸಿಂಗ ಬಾದಲ್ ಹೇಳಿಕೊಂಡಿದ್ದಾರೆ. ಆದರೆ ವಾಸ್ತವವಾಗಿ ಫಲಿತಾಂಶ ಮೈತ್ರಿಕೂಟದ ಆಡಳಿತಕ್ಕೆ ವಿರುದ್ಧವಾಗಿರುವುದು ಸ್ಪಷ್ಟವಾಗಿದೆ.

ಕಾಂಗ್ರೆಸ್ ತನ್ನ ಸ್ಥಿತಿಯನ್ನು ಸುಧಾರಿಸಿಕೊಂಡಿರುವುದು ಹಾಗೂ ಬಹುಜನ ಸಮಾಜ ಪಕ್ಷ(ಬಿಎಸ್‌ಪಿ) ಕಳಪೆ ಪ್ರದರ್ಶನ ನೀಡಿರುವುದು ಈ ಚುನಾವಣೆಗಳ ಇನ್ನಿತರ ಗಮನಾರ್ಹ ಅಂಶಗಳು.

# ಮಹಾರಾಷ್ಟ್ರದ ಮಂತ್ರಿಯ ಭ್ರಷ್ಟಾಚಾರ ಸಾಬೀತು

ಮಹಾರಾಷ್ಟ್ರದ ಶಿವಸೇನೆ-ಬಿಜೆಪಿ ಕೂಟದ ಸರಕಾರದ ಭ್ರಷ್ಟ ವ್ಯವಹಾರಗಳಿಗೆ ಕನ್ನಡಿ ಹಿಡಿಯುವಂಥ ವರದಿಯೊಂದು ಸ್ವತಃ ಆ ಸರಕಾರ ರಚಿಸಿದ ಸಮಿತಿಯಿಂದಲೇ ಹೊರಬಿದ್ದಿದೆ.

ಇಬ್ಬರು ಸಚಿವರ ವಿರುದ್ಧದ ಭ್ರಷ್ಟಾಚಾರದ ಆರೋಪಗಳಿಗೆ ಸಂಬಂಧಿಸಿ ರಚಿಸಲಾಗಿದ್ದ ನ್ಯಾಯಮೂರ್ತಿ ಪುರಾಣಿಕ್ ನೇತೃತ್ವದ ಏಕಸದಸ್ಯ ಸಮಿತಿ ಇಬ್ಬರ ಪೈಕಿ ಒಬ್ಬ ಮಂತ್ರಿಯ ಮೇಲಿನ ಆಪಾದನೆ ಮೇಲ್ನೋಟಕ್ಕೆ ಸಾಬೀತಾಗಿದೆ ಎಂದು ಹೇಳಿದೆ.

ಕೃಷಿ ಮಂತ್ರಿ ಶಶಿಕಾಂತ ಸುತಾರ್ ಮತ್ತು ನೀರಾವರಿ ಸಚಿವ ಮಹದೇವರಾವ್ ಶಿವಶಂಕರ್ ಅಕ್ರಮವಾಗಿ ಹಣ ಗಳಿಸಿದ್ದಾರೆ ಎಂದು ಖ್ಯಾತ ಸಮಾಜ ಸೇವಕ ಅಣ್ಣಾ ಹಜಾರೆ ಆಪಾದಿಸಿದ್ದರು. ಈ ಹಿನ್ನೆಲೆಯಲ್ಲಿ ಈ ಇಬ್ಬರೂ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದರು.

ಆದರೆ ಮುಖ್ಯಮಂತ್ರಿ ಮನೋಹರ ಜೋಷಿ ರಾಜೀನಾಮೆಯನ್ನು ಅಂಗೀಕರಿಸದೆ ಇಬ್ಬರ ಮಂತ್ರಿ ಹುದ್ದೆಗಳನ್ನು ಮಾತ್ರ ಕಿತ್ತುಕೊಂಡಿದ್ದರು. ತನಿಖೆಗಾಗಿ ಪುರಾಣಿಕ್ ಸಮಿತಿಯನ್ನು ರಚಿಸಿದ್ದರು.

ವಯೋವೃದ್ಧ ಅಣ್ಣಾ ಹಜಾರೆ ಭ್ರಷ್ಟಾಚಾರದ ಆರೋಪ ಹೇರಿಸಿ ಅಷ್ಟಕ್ಕೇ ಸುಮ್ಮನಾಗಿರಲಿಲ್ಲ. ಈ ಇಬ್ಬರುಸಚಿವರು ಮಾತ್ರವಲ್ಲದೆ ಇಡೀ ಶಿವಸೇನೆ-ಬಿಜೆಪಿಸರಕಾರದ ಭ್ರಷ್ಟ ಮುಖವನ್ನು ಅನಾವರಣಗೊಳಿಸಲು ಅವರು ವ್ಯಾಪಕ ಆಂದೋಲನದ ಹಾದಿಯನ್ನು ಹಿಡಿದಿದ್ದರು. ದೀರ್ಘ ಕಾಲದ ಉಪವಾಸ ಸತ್ಯಾಗ್ರಹವನ್ನು ಕೈಗೊಂಡಿದ್ದರು.

ಭ್ರಷ್ಟಾಚಾರರಹಿತ-ಸ್ವಚ್ಛ ಆಡಳಿತ ನೀಡುವುದಾಗಿ ಬೊಂಬ್ಡಾ ಹೊಡೆಯುವ ಶಿವಸೇನೆ-ಬಿಜೆಪಿ ಸರಕಾರ ಅಣ್ಣಾ ಹಜಾರೆಯವರ ಆರೋಪಗಳನ್ನು ಆಧಾರರಹಿತ, ರಾಜಕೀಯ ಪ್ರೇರಿತ ಎಂದೆಲ್ಲಾ ಹೇಳಿ ಅವುಗಳನ್ನು ತಳ್ಳಿ ಹಾಕಲು ಹೊರಟಿತ್ತು. ಆದರೆ ವ್ಯಾಪಕ ಪ್ರತಿಭಟನೆಗೆ ಅದು ಮಣಿಯಲೇ ಬೇಕಾಯಿತು. ಶಶಿಕಾಂತ್ ಸುತಾರ್ ವಿರುದ್ಧದ ಆರೋಪಿಗಳು ಮೇಲ್ನೋಟಕ್ಕೆ ಸಾಬೀತಾಗಿವೆ ಎಂದು ಪುರಾಣಿಕ್ ಸಮಿತಿ ಹೇಳಿದೆ. ಶಿವಶಂಕರ್ ವಿರುದ್ಧದ ಆರೋಪಗಳನ್ನು ಸಾಬೀತು ಪಡಿಸಲು ಸಾಕಷ್ಟು ಸಾಕ್ಷ್ಯಾಧಾರಗಳಿಲ್ಲ ಎಂದು ಹೇಳಿದೆ.

ಪುರಾಣಿಕ್ ಸಮಿತಿ ವರದಿ ಹಾಸ್ಯಾಸ್ಪದವಾದುದೆಂದು ಮಹಾರಾಷ್ಟ್ರದ ಪ್ರತಿಪಕ್ಷ ವಲಯಗಳು ಅಭಿಪ್ರಾಯ ಪಟ್ಟಿವೆ. ಇದೇ ವಿಚಾರದಲ್ಲಿ ವಿಧಾನ ಪರಿಷತ್ತಿನಲ್ಲಿ ಇಡೀ ಪ್ರತಿಪಕ್ಷ ಸಭಾತ್ಯಾಗ ಮಾಡಿದೆ.ಅಣ್ಣಾಹಜಾರೆ ಕೂಡ ತಾವು ಈ ವರದಿಯನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಘೋಷಿಸಿದ್ದಾರೆ. ತನಿಖೆಸರಿಯಾಗಿ ನಡೆದಿಲ್ಲ ಎಂದು ಅವರುಹೇಳಿದ್ದಾರೆ.

# ಹಿಮಾಚಲ ಪ್ರದೇಶ: ಭ್ರಷ್ಟ ಆಡಳಿತ ವಿರುದ್ಧ ಪ್ರದರ್ಶನ

ಕೊರೆಯುವ ಚಳಿ, ಹಿಮಪಾತವನ್ನೂ ಲೆಕ್ಕಿಸದೆ ಹಿಮಾಚಲ ಪ್ರದೇಶದ ಎಲ್ಲಾ ಕಡೆಗಳಿಂದ ಬಂದಿದ್ದ ಸಾವಿರಾರು ಜನರು ಏಪ್ರಿಲ್ 3ರಂದು ರಾಜ್ಯ ವಿಧಾನ ಸಭೆ ಕಾರ್ಯಾಲಯದ ಮುಂದೆ ಪ್ರದರ್ಶನ ನಡೆಸಿದರು. ಪ್ರದರ್ಶನಕಾರರಲ್ಲಿ ಕಾರ್ಮಿಕರು, ರೈತರು, ವಿದ್ಯಾರ್ಥಿಗಳು, ಯುವ ಜನರು ಮತ್ತು ಮಹಿಳೆಯರು ಇದ್ದರು.

ಸಿಪಿಐ(ಎಂ) ಮತ್ತು ಇತರ ಕೆಲವು ಪಕ್ಷಗಳು ಶಿಮ್ಲಾ ಚಲೋ ಕಾರ್ಯಕ್ರಮಕ್ಕೆ ಕರೆ ಕೊಟ್ಟಿದ್ದವು. ರಾಜ್ಯದಲ್ಲಿ ಹೆಚ್ಚುತ್ತಿರುವ ಭ್ರಷ್ಟಾಚಾರಕ್ಕೆ ಪ್ರತಿಭಟನೆ ದಾಖಲಿಸುವುದು ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುವಂತೆ ಆಗ್ರಹಿಸುವುದು ರ್‍ಯಾಲಿಯ ಉದ್ದೇಶವಾಗಿತ್ತು.

ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗಳಿಗೆ ಪರ್ಯಾಯವಾಗಿ ಮೂರನೇ ರಂಗ ರಚಿಸುವ ಅಗತ್ಯವನ್ನು ಮನಗಂಡ ಸಿಪಿಐ(ಎಂ) ರಾಜ್ಯ ಸಮಿತಿ ಈ ಬೃಹತ್ ಪ್ರತಿಭಟನೆ ಕಾರ್ಯಕ್ರಮವನ್ನು ರೂಪಿಸುವಲ್ಲಿ ಉಪಕ್ರಮವನ್ನು ಕೈಗೊಂಡಿತ್ತು.

ತನ್ನ ಎಲ್ಲಾ ಘಟಕಗಳು ಹಾಗೂ ಸಾಮೂಹಿಕ ಸಂಘಟನೆಗಳನ್ನು ಕ್ರಿಯಾಶೀಲಗೊಳಿಸುವುದಕ್ಕೆ ಜ್ವಲಂತ ಸಮಸ್ಯೆಗಳ ಆಧಾರದಲ್ಲಿ ಜನರನ್ನು ಸಂಘಟಿಸಿ ಚಳುವಳಿಯನ್ನು ರೂಪಿಸುವುದಲ್ಲದೆ ಈ ಪ್ರಕ್ರಿಯೆಯಲ್ಲಿ ಇತರ ಎಡ ಹಾಗೂ ಜಾತ್ಯಾತೀತ ಪಕ್ಷಗಳನ್ನು ಒಳಗೊಳಿಸಲು ರಾಜ್ಯ ಸಮಿತಿ ಸಭೆ ನಿರ್ಧರಿಸಿತ್ತು. ಏಪ್ರಿಲ್ ಮೂರರ ಪ್ರತಿಭಟನಾ ಪ್ರದರ್ಶನ ಈ ನಿಟ್ಟಿನಲ್ಲಿ ಪ್ರಥಮ ಹೆಜ್ಜೆಯಾಗಿದೆ.

ಚಳುವಳಿಗೆ ಸಿಪಿಐ(ಎಂ) ಮುಖ್ಯವಾಗಿ ಕೆಲಸ ಮಾಡಿತ್ತು. ರ್‍ಯಾಲಿಯಲ್ಲಿ ಭಾಗವಹಿಸಿದ್ದವರಲ್ಲಿ ಅದರ ಕಾರ್ಯಕರ್ತರೇ ಹೆಚ್ಚಾಗಿದ್ದರು. ಸಿಪಿಐ, ಸಮಾಜವಾದಿ ಪಕ್ಷ ಮತ್ತು ಜನತಾದಳ ಕಾರ್ಯಕರ್ತರು ಕೂಡಾ ಗಮನಾರ್ಹ ಸಂಖ್ಯೆಯಲ್ಲಿ ಹಾಜರಿದ್ದರು.

ಪ್ರದರ್ಶನಕಾರರು ಪಂಚಾಯತ್ ಭವನದ ಬಳಿಯಿಂದ ವಿಧಾನ ಸಭೆ ಕಾರ್ಯಾಲಯದ ವರೆಗೆ ಭಾರಿ ಮಳೆಯನ್ನು ಲೆಕ್ಕಿಸದೆ ಮೆರವಣಿಗೆಯಲ್ಲಿ ತೆರಳಿದರು.

ಕಾಂಗ್ರೆಸ್ ಸರಕಾರದ ಜನವಿರೋಧಿ ನೀತಿಗಳು ಮತ್ತು ಭ್ರಷ್ಟಾಚಾರಗಳನ್ನು ಪ್ರದರ್ಶನಕಾರರು ಕಟುವಾಗಿ ಖಂಡಿಸಿದರು.

# ಪೆರು ಒತ್ತೆಯಾಳು ಪ್ರಕರಣ: ಸುಖಾಂತವೋ ದುಃಖಾಂತವೋ?

ಪೆರುವಿನ 126 ದಿನಗಳ ಒತ್ತೆಯಾಳುಗಳ ಬಿಕ್ಕಟ್ಟು ಪರಿಹಾರವಾಗಿದೆ. ಆದರೆ ತೀವ್ರ ದುಃಖಾಂತವಾಗಿ. ಪೆರು ಸರಕಾರದ ಗೆರಿಲ್ಲಾ - ವಿರೋಧಿ ಕಮಾಂಡೋಗಳು ಹಗಲಲ್ಲೇ ನಡೆಸಿದ ಕಮಾಂಡೋ ಕಾರ್ಯಾಚರಣೆಯಲ್ಲಿ ಎಲ್ಲಾ 72 ಒತ್ತೆಯಾಳುಗಳನ್ನು ಬಿಡುಗಡೆ ಮಾಡಿದ್ದಾರೆ. ಆದರೆ ಎಲ್ಲಾ 14 ಗೆರಿಲ್ಲಾಗಳನ್ನು ಕೊಲೆ ಮಾಡಲಾಗಿದೆ. ಪೆರುವಿನ ಅಧ್ಯಕ್ಷ ಅಲ್ಬರ್ಟೋ ಫುಜಿಮೋರಿ ಈ 'ಭಾರಿ ವಿಜಯ'ದಲ್ಲಿ ಬೀಗುತ್ತಿದ್ದರೂ ಈ ಕಾರ್ಯಾಚರಣೆಗಳ ವಿವರಗಳು ಹೊರಗೆ ಬರುತ್ತಿದ್ದಂತೆ 'ಮಾನವ ಹಕ್ಕು' ಹಾಗೂ 'ಅಂತರ್ರಾಷ್ಟ್ರೀಯ ಕಾನೂನು' ಗಳನ್ನು ಈ ಕಾರ್ಯಾಚರಣೆಯ ಮೂಲಕ ಪೆರು ಸರಕಾರ ಸಹ ಉಲ್ಲಂಘಿಸಿದೆ ಎಂಬ ತೀವ್ರ ಟೀಕೆ ಪೆರು ಅಧ್ಯಕ್ಷರ ಉತ್ಸಾಹ ಪೂರ್ವಕ ನವ-ಲಿಬರಲ್, ಸಾಮ್ರಾಜ್ಯಶಾಹಿ ಬೆಂಬಲಿಗರಲ್ಲೂ ಕೇಳಿಬರುತ್ತಿದೆ.

ಒತ್ತೆಯಾಳುಗಳನ್ನು ಹಿಡಿದಿಟ್ಟಿದ್ದು ಪೆರುವಿನ ರಾಜಧಾನಿ ಲಿಮಾದ ರಾಯಭಾರಿ ಕಚೇರಿಯಲ್ಲಿ. ಜಪಾನಿ ರಾಯಭಾರಿ ಕಚೇರಿ ಸಾರ್ವಭೌಮತ್ವಕ್ಕೆ ಸೇರಿದ್ದು. ಯಾವುದೇ ಮಿಲಿಟರಿ ಕಾರ್ಯಾಚರಣೆ ಮಾಡಬೇಕಾದರೆ ಜಪಾನಿ ಸರಕಾರದ ಅನುಮತಿ ತೆಗೆದುಕೊಳ್ಳಬೇಕಿತ್ತು. ಜಪಾನಿ ಸರಕಾರ ಗೆರಿಲ್ಲಾಗಳ ಜತೆ ಮಾತುಕತೆ ಒಪ್ಪಂದದ ಮೂಲಕ ಸಮಸ್ಯೆ ಬಗೆಹರಿಯಬೇಕು ಎಂದು ಬಯಸಿತ್ತು. ಒತ್ತೆಯಾಳುಗಳ ಮೇಲೆ ಗೆರಿಲ್ಲಾಗಳು ಆಕ್ರಮಣ ಮಾಡುವ ಸಂದರ್ಭದಲ್ಲಿ ಬಿಟ್ಟರೆ, ಕಮಾಂಡೋ ಕಾರ್ಯಾಚರಣೆ ಮಾಡಬಾರದು ಎಂದು ಜಪಾನಿ ಸರಕಾರದ ಅಭಿಪ್ರಾಯವಾಗಿತ್ತು. ಈ ಕಮಾಂಡೋ ಕಾರ್ಯಾಚರಣೆಗೆ ಜಪಾನಿ ಸರಕಾರದ ಅನುಮತಿ ತೆಗೆದುಕೊಂಡಿರಲಿಲ್ಲ. ಆದ್ದರಿಂದ ಪೆರು ಸರಕಾರ ಅಂತರಾಷ್ಟ್ರೀಯ ಕಾನೂನು ಪ್ರಕಾರ ಆಕ್ರಮಣ ಮಾಡಿದ ಅಪರಾಧಿ ಎಂದು ಜಪಾನಿ ವಕ್ತಾರರು ಖಾಸಗಿಯಾಗಿ ಅಭಿಪ್ರಾಯ ಪಟ್ಟಿದ್ದಾರೆ. ಆದರೂ ಕಮಾಂಡೋ ಕಾರ್ಯಾಚರಣೆ ಪೂರ್ಣ ಸಫಲವಾದ್ದರಿಂದ ಜಪಾನ್ ಸರಕಾರ ಅದನ್ನು ದೊಡ್ಡ ವಿವಾದ ಮಾಡಲಿಕ್ಕಿಲ್ಲ. ಇದಲ್ಲದೆ ಬಿಡುಗಡೆಯಾದ ಒತ್ತೆಯಾಳುಗಳ ಹೇಳಿಕೆ ಪ್ರಕಾರವೇ ಗೆರಿಲ್ಲಾಗಳನ್ನು ಅನಗತ್ಯವಾಗಿ ಕೊಲೆ ಮಾಡಲಾಯಿತು. ಹೆಚ್ಚಿನ ಗೆರಿಲ್ಲಾಗಳನ್ನು ಜೀವಂತವಾಗಿ ಸೆರೆ ಹಿಡಿಯುವ ಅವಕಾಶ ಇದ್ದರೂ, ಉದ್ದೇಶಪೂರ್ವಕವಾಗಿ ಕೊಲೆ ಮಾಡಲಾಗಿದೆ. ಇದೂ ದೇಶದ ಅಂತರ್ರಾಷ್ಟ್ರೀಯ ಕಾನೂನು, ಮಾನವ ಹಕ್ಕುಗಳಿಗೆ ವಿರುದ್ಧವಾದ ಸಂಗತಿ. ಗೆರಿಲ್ಲಾಗಳು ಒತ್ತೆಯಾಳುಗಳಿಗೆ ಯಾವುದೇ ಹಾನಿ ಮಾಡದ ಹಿನ್ನೆಲೆಯಲ್ಲಿ ಇದು ಹಾಡು ಹಗಲಲ್ಲಿ ಸರಕಾರ ಯೋಜಿಸಿದ ಕಗ್ಗೊಲೆ ಅಲ್ಲದೆ ಬೇರೇನಲ್ಲ. ಅಲ್ಲದೆ ಈ ಕಾರ್ಯಾಚರಣೆ ಅಮೆರಿಕನ್ ಬೇಹುಗಾರಿಕೆ ಸಂಘಟನೆಗಳ ಸಕ್ರಿಯ ಬೆಂಬಲ, ತರಬೇತಿ, ಕೈವಾಡ ಇದೆ ಎಂದು ಹೇಳಲಾಗಿದೆ.

ಗೆರಿಲ್ಲಾಗಳು ಅಪರಾಧಿಗಳೇ? ಎಂಬುದು ಕಾನೂನಿಗಿಂತ ದೊಡ್ಡದಾದ ಪ್ರಶ್ನೆ. ಗೆರಿಲ್ಲಾಗಳು ಒತ್ತೆಯಾಳುಗಳನ್ನು ಬಿಡಲು ಹೇಳುತ್ತಿದ್ದುದಾದರೂ ಏನು? ತುಪಾಕ್ ಅಮಾರು ಕ್ರಾಂತಿಕಾರಿ ಚಳುವಳಿಗೆ (ಎಂಆರ್‌ಟಿಎ) ಸೇರಿದ್ದ ಬಂಧಿತ ನಾಯಕರು, ಹಾಗೂ ಕಾರ್ಯಕರ್ತರ ಬಿಡುಗಡೆ. ಎಂಆರ್‌ಟಿಎ ಸರಕಾರದ ಸಾಮ್ರಾಜ್ಯಶಾಹಿ ಪರ ನವ-ಲಿಬರಲ್ ಧೋರಣೆಯಿರುವ ಬಡತನದ ಬೇಗೆಯಿಂದ, ಸರಕಾರದ ದಮನದಿಂದ ನರಳುತ್ತಿರುವ ರೈತರ ಹಿತಾಸಕ್ತಿಗಾಗಿ ಹೋರಾಡುವ ಸಂಘಟನೆ. ರೈತರ ಅಪಾರ ಬೆಂಬಲವಿರುವ ಸಂಘಟನೆ. ಪೆರುವಿನಲ್ಲಿ ನಿಜವಾದ ಜನಪರ ಚಳುವಳಿಗಾರರ 'ಭಯೋತ್ಪಾದಕ'ರೆಂದು ಕರೆದು ಅವರನ್ನು ಎಲ್ಲಾ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನಗೊಳಿಸಲಾಗುತ್ತದೆ. ಜೈಲಿನಲ್ಲಿರುವ ಎಂಆರ್‌ಟಿಎ ನಾಯಕರು, ಕಾರ್ಯಕರ್ತರುಗಳಿಗೆ ಕನಿಷ್ಟ ಮಾನವ ಹಕ್ಕುಗಳಿಲ್ಲ. ಪೆರುವಿನ ಜೈಲುಗಳೆಂದರೆ ಯಾತನಾ ಶಿಬಿರಗಳು. ಈ ಹಿನ್ನೆಲೆಯಲ್ಲಿ ಎಂಆರ್‌ಟಿಎ ಗೆರಿಲ್ಲಾಗಳು ಇಡೀ ಜಗತ್ತಿನ ಗಮನ ಎಂಆರ್‌ಟಿಎ ಹಾಗೂ ರೈತರ ಹೋರಾಟದತ್ತ ಸೆಳೆಯಲು ಈ ಕಾರ್ಯಾಚರಣೆಗೆ ಇಳಿದಿದ್ದು- ಸರಕಾರದ 'ಭಯೋತ್ಪಾದನೆ' ಎದುರು ಅದೇ ಅಸ್ತ್ರ ಬಳಸಿದೆ ಬೇರೆ ದಾರಿ ಇಲ್ಲದೆ.

ಅಧ್ಯಕ್ಷ ಫುಜಿಮೋರಿ ಗೆರಿಲ್ಲಾಗಳನ್ನು ಕೊಂದು ಎಂಆರ್‌ಟಿಎಯನ್ನು ನಿರ್ನಾಮ ಮಾಡಿದೆ ಎಂದು ಬೀಗುತ್ತಿರಬಹುದು. ಆದರೆ ಪೆರುವಿನ ಬಹುಸಂಖ್ಯಾತ ಜನತೆಯ ಸಮಸ್ಯೆಗಳನ್ನು ಪರಿಹರಿಸದೆ, ನಿರ್ಲಕ್ಷಿಸಿ ಬರಿಯ ಅವರಿಗಾಗಿ ಹೋರಾಡುವ ಗೆರಿಲ್ಲಾಗಳನ್ನು ನಿರ್ನಾಮ ಮಾಡುವುದರಿಂದ ಹೋರಾಟ ನಿಲ್ಲುವುದಿಲ್ಲ. ಫುಜಿಮೋರಿ ಹಿಂದೆ ಸೆಂಡರೋ ಲೂಮಿನೋಸೋ ಎಂಬ ಮಾವೋವಾದಿ ಗೆರಿಲ್ಲಾ ಸಂಘಟನೆಯನ್ನು ನಿರ್ನಾಮ ಮಾಡಿ ಬೀಗುತ್ತಿದ್ದರು. ಆ ಎಂಆರ್‌ಟಿಎ ಗೆರಿಲ್ಲಾ ಸಂಘಟನೆ ಬೆಳೆದು ಬೆಳಕಿಗೆ ಬಂತು. 14 ಗೆರಿಲ್ಲಾಗಳನ್ನು ಕೊಂದ ಕೂಡಲೇ ಜನತೆಯ ಹೋರಾಟ ನಿಲ್ಲುವುದಿಲ್ಲ ಎನ್ನುವುದು ಫುಜಿಮೋರಿ ಹಾಗೂ ಅವರ ಸಾಮ್ರಾಜ್ಯಶಾಹಿ ಬೆಂಬಲಿಗರು ಕಲಿಯಬೇಕಾದ ಪಾಠ.

## ಜನತೆಯ ಕೋಪ ತಪ್ಪಿಸಲು ಫ್ರೆಂಚ್ ಅಧ್ಯಕ್ಷರಿಂದ ಶೀಘ್ರ ಚುನಾವಣೆಗೆ ಆಜ್ಞೆ

ಫ್ರೆಂಚ್ ಅಧ್ಯಕ್ಷ ಚಿರಾಕ್, ಫ್ರೆಂಚ್ ಪಾರ್ಲಿಮೆಂಟನ್ನು ಅವರ ಅವಧಿಯ ಒಂದು ವರ್ಷ ಮೊದಲೇ ವಿಸರ್ಜಿಸಿ ಪಾರ್ಲಿಮೆಂಟಿನ ಚುನಾವಣೆಗೆ ಆಜ್ಞಾಪಿಸಿದ್ದಾರೆ. ಜೂನ್-ಜುಲೈನಲ್ಲಿ ಚುನಾವಣೆ ನಡೆಯಲಿದೆ. ಕೆಲವು ವಾರಗಳಿಂದ ಈ ಬಗ್ಗೆ ದಟ್ಟ ವದಂತಿ ಹಬ್ಬಿದ್ದರೂ ಫ್ರೆಂಚ್ ಅಧ್ಯಕ್ಷರ ಈ ಹತಾಶ ನಿರ್ಧಾರ ಎಲ್ಲೆಡೆ ಆಶ್ಚರ್ಯ ತಂದಿದೆ. ಅಧ್ಯಕ್ಷ ಚಿರಾಕ್ ಅವರ ಗಾಲಿಸ್ಟ್ ಪಕ್ಷದ ನಾಯಕತ್ವದ ಬಲಪಂಥೀಯ ಒಕ್ಕೂಟಕ್ಕೆ ಪಾರ್ಲಿಮೆಂಟಿನಲ್ಲಿ ಭಾರಿ ಬಹುಮತ ಇದೆ. 577 ಸದಸ್ಯರ ಫ್ರೆಂಚ್ ನ್ಯಾಶನಲ್ ಅಸೆಂಬ್ಲಿಯಲ್ಲಿ 473 ಸದಸ್ಯರನ್ನು ಹೊಂದಿರುವ ಆಳುವ ಕೂಟಕ್ಕೆ ಒಂದು ವರ್ಷದ ಮೊದಲು ಚುನಾವಣೆ ನಡೆಸುವ ಅಗತ್ಯವೇನಿದೆ? ತೀವ್ರ ರಾಷ್ಟ್ರೀಯ, ರಾಜಕೀಯ ಬಿಕ್ಕಟ್ಟು ಇಲ್ಲದೆ, ಅಧ್ಯಕ್ಷ ಚಿರಾಕ್ ಯಾಕೆ ಈ ನಿರ್ಧಾರಕ್ಕೆ ಬಂದರು ಎಂದು ಎಲ್ಲರೂ ಕೇಳುತ್ತಿರುವ ಪ್ರಶ್ನೆ.

ಉತ್ತರ ಸರಳ ಎನ್ನುತ್ತದೆ ಫ್ರೆಂಚ್ ಎಡಪಂಥೀಯ 'ಲಿಬರೇಶನ್'. ಈ ವರ್ಷದ ಕೊನೆಯ ಹೊತ್ತಿಗೆ ಯುರೋಪಿಯನ್ ಸಾಮಾನ್ಯ ನಾಣ್ಯ 'ಯುರೋ' ಅಂಗೀಕರಿಸಬೇಕಾದರೆ, ಯುರೋಪಿಯನ್ ಒಕ್ಕೂಟ ಕಠಿಣವಾದ ಜನ-ವಿರೋಧಿ ಕಾರ್ಯಕ್ರಮಗಳನ್ನು ಜಾರಿಮಾಡಬೇಕು ಎಂದು ವಿಧಿಸಿದೆ. ಸಾಮಾಜಿಕ ಕಲ್ಯಾಣ ವೆಚ್ಚಗಳಲ್ಲಿ ಕಡಿತ, ಪೂರ್ಣ ಮುಕ್ತ ಮಾರುಕಟ್ಟೆ ಧೋರಣೆ, ಸಾರ್ವಜನಿಕ ಸೇವಾ ಉದ್ಯೋಗಗಳ ಸಂಖ್ಯೆಯ ಕಡಿತ, ಸಾರ್ವಜನಿಕ ಒಡೆತನದಲ್ಲಿರುವ ಹಲವಾರು ಉದ್ಯಮಗಳ ಖಾಸಗೀಕರಣ ಇತ್ಯಾದಿ ಜನ-ವಿರೋಧಿ ಕ್ರಮ ಕೈಗೊಳ್ಳದೆ ಹಣಕಾಸಿನ ಕೊರತೆಯನ್ನು ಒಟ್ಟು ರಾಷ್ಟ್ರೀಯ ಉತ್ಪನ್ನದ ಶೇಕಡಾ 3 ರ ಒಳಗೆ ತರುವುದು ಸಾಧ್ಯವಿಲ್ಲ. ಸದ್ಯಕ್ಕೆ ಅದು ಶೇಕಡಾ 4.1 ರ ಹಂತದಲ್ಲಿದೆ. ಇವೆಲ್ಲ ಕ್ರಮಗಳನ್ನು ವರ್ಷದ ಕೊನೆಯೊಳಗೆ ಕೈಗೊಂಡರೆ ಸರಕಾರ ವಿಪರೀತ ಜನತೆಯ ಕೋಪಕ್ಕೆ ತುತ್ತಾಗುತ್ತದೆ. ಮುಂದಿನ ವರ್ಷದ ಚುನಾವಣೆಯಲ್ಲಿ ಜನ ಈ ಸರಕಾರವನ್ನು ಖಂಡಿತ ಕೆಳಗಿಳಿಸುತ್ತಾರೆ. ಆದ್ದರಿಂದ ಈ ಕ್ರಮ. ಸೋಶಲಿಸ್ಟ್ ಪಕ್ಷದ ನಾಯಕ ಸಹ ಅಧ್ಯಕ್ಷನ ಆಜ್ಞೆಯನ್ನು ರಾಜಕೀಯ ಸೋಲು ಒಪ್ಪುವ ಕ್ರಮ ಎಂದು ಬಣ್ಣಿಸಿದ್ದಾರೆ.

ಫ್ರೆಂಚ್ ಅಧ್ಯಕ್ಷ ಚಿರಾಕ್‌ರವರ ಈ ಕ್ರಮ ಜೂಜು ಎಂದೂ ಹಲವಾರು ಅವರ ಬೆಂಬಲಿಗರೇ ಬಣ್ಣಿಸಿದ್ದಾರೆ. ಈ ಸರಕಾರದ ಜನವಿರೋಧಿ ಮುಖ ಆಗಲೇ ಸಾಕಷ್ಟು ಬಯಲಾಗಿದ್ದು, ಫ್ರೆಂಚ್ ಕಾರ್ಮಿಕರು, ರೈತರು, ವಿದ್ಯಾರ್ಥಿಗಳು ಚಾರಿತ್ರಿಕ ಮುಷ್ಕರಗಳ ಮೂಲಕ ಅವನ್ನು ಪ್ರತಿಭಟಿಸಿದ್ದಾರೆ. ಫ್ರೆಂಚ್ ಜನತೆಯ ರಾಜಕೀಯ ಪ್ರಜ್ಞೆ ವಿಶ್ವಪ್ರಸಿದ್ಧ ಫ್ರೆಂಚ್ ಅಧ್ಯಕ್ಷರ ಕ್ರಮ ಹತಾಶೆಯ ಕ್ರಮವೆಂದು ಕೆಲವರು ಬಣ್ಣಿಸಿದ್ದಾರೆ.

ಯುರೋಪಿಯನ್ ಒಕ್ಕೂಟ ಆರ್ಥಿಕವಾಗಿ, ರಾಜಕೀಯವಾಗಿ ಒಂದಾದರೆ ಹೆಚ್ಚಿನ ಆಧಿಪತ್ಯ ಹೊಂದುವವರು ಜಪಾನ್ ಹಾಗೂ ಫ್ರೆಂಚ್ ದೈತ್ಯ ಕಂಪೆನಿಗಳು. ಯುರೋಪಿಯನ್ ಸೂಪರ್-ರಾಜ್ಯ ಸ್ಥಾಪಿಸಲು ತರಾತುರಿಯಲ್ಲಿರುವ ಈ ಶಕ್ತಿಗಳನ್ನು ಪ್ರತಿನಿಧಿಸುವ ಈಗಿನ ಆಳುವ ಕೂಟ ಜನತೆಯನ್ನು ಮರುಳು ಮಾಡುವ ಕ್ರಮ ಇದು. ಇನ್ನು ತೀವ್ರ ಜನ-ವಿರೋಧಿ ಧೋರಣೆಗಳು ಜಾರಿಯಾಗದಿರುವಾಗ, ಜನತೆಯನ್ನು ಮರುಳು ಮಾಡಬಹುದು ಎಂಬುದು ಅವರ ಲೆಕ್ಕಾಚಾರ.

ಯುರೋಪಿಯನ್ ಐಕ್ಯತೆಯ ಹೆಸರಲ್ಲಿ ಸಾಮಾಜಿಕ ಕಲ್ಯಾಣ, ಪ್ರಗತಿಪರ ಕ್ರಮ, ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಪ್ರಹಾರ ಮಾಡುತ್ತಿರುವುದರ ವಿರುದ್ಧ ಪ್ರತಿಭಟನೆ ಎಲ್ಲಾ ಯುರೋಪಿಯನ್ ದೇಶಗಳಲ್ಲಿ ಪ್ರಧಾನ ರಾಜಕೀಯ ವಿವಾದವಾಗಿದೆ. ಮೇ 2ರಂದು ನಡೆದ ಬ್ರಿಟನ್ ಚುನಾವಣೆಗಳಲ್ಲಿ ಇದು ದೊಡ್ಡ ವಿವಾದಾತ್ಮಕ ವಿಷಯವಾಗಿತ್ತು.

## ಇಸ್ರೇಲಿಗೆ ವಿಶ್ವ ಸಂಸ್ಥೆ ಸಾಮಾನ್ಯ ಸಭೆ ಛೀಮಾರಿ

ವಿಶ್ವಸಂಸ್ಥೆಯ ಸಾಮಾನ್ಯ ಸಭೆ 130-3ರ ಭಾರೀ ಬಹುಮತದಿಂದ ಇಸ್ರೇಲಿಗೆ ಛೀಮಾರಿ ಹಾಕಿದೆ. ಸಾಮಾನ್ಯ ಸಭೆ ಅಂಗೀಕರಿಸಿದ ನಿರ್ಣಯದಲ್ಲಿ ಜೆರೂಸಲಂನ ವಿವಾದಿತ ಪ್ರದೇಶದಲ್ಲಿ ಹರ್‌ಘೋಮಾ ಎಂಬ ಜ್ಯೂ ಕಾಲೋನಿ ಕಟ್ಟುವುದನ್ನು ತಕ್ಷಣ ಬಿಟ್ಟುಕೊಡಬೇಕು ಎಂದು ಕರೆ ಕೊಟ್ಟಿದೆ. ಇಸ್ರೇಲಿನ ಈ ಕಾರ್ಯಚಟುವಟಿಕೆಗೆ ಯಾರೂ ಯಾವುದೇ ರೀತಿಯ ಬೆಂಬಲ ಕೊಡಕೂಡದೆಂದು ವಿಧಿಸಿದೆ. ಇದು ಇಸ್ರೇಲು ಹಾಗೂ ಅಮೆರಿಕನ್ ನೀತಿಗಳಿಗೆ ದೊಡ್ಡ ಮುಖಭಂಗ. ಅದೇ ಸಮಯದಲ್ಲಿ ಅವು ಅಂತರ್ರಾಷ್ಟ್ರೀಯವಾಗಿ ಎಷ್ಟು ಒಂಟಿಯಾಗಿವೆ ಎಂಬುದರ ಪ್ರತೀಕವಾಗಿತ್ತು.

ಈ ನಿರ್ಣಯ ಅಂಗೀಕರಿಸಿದ ಸಾಮಾನ್ಯ ಸಭೆಯನ್ನು ಅರಬ್ ದೇಶಗಳ ಬೇಡಿಕೆ ಮೇಲೆ ತುರ್ತು ಅಧಿವೇಶನ ಕ್ರಮಗಳ ಅಂಗವಾಗಿ ಕರೆಯಲಾಗಿತ್ತು. 1982ರ ನಂತರ ಈ ರೀತಿ ಸಾಮಾನ್ಯ ಸಭೆಯ ತುರ್ತು ಅಧಿವೇಶನ ಕರೆಯುವುದು ಇದೇ ಮೊದಲು ಎನ್ನುವುದು ತೀರಾ ಮಹತ್ವದ ಸಂಗತಿ. ಬರಿ ಇಸ್ರೇಲ್, ಅಮೆರಿಕ ಮತ್ತು ಮೆಕ್ರೋನೆಶಿಯಾ ಎಂಬ 'ಮೈಕ್ರೋ' ದೇಶ ಮಾತ್ರ ಈ ನಿರ್ಣಯವನ್ನು ವಿರೋಧಿಸಿತ್ತು. ಆದರೆ 4 ಪ್ರಮುಖ ಅಭಿವೃದ್ಧಿ ಬಂಡವಾಳ ಶಾಹಿ ದೇಶಗಳಾದ ಜರ್ಮನಿ, ನಾರ್ವೆ, ಕೆನಡಾ, ಆಸ್ಟ್ರೇಲಿಯಾ ಸೇರಿದಂತೆ 11 ದೇಶಗಳು ಮತದಾನದಲ್ಲಿ ಭಾಗವಹಿಸಲಿಲ್ಲ.

ಈ ರೀತಿಯ ನಿರ್ಣಯ ಪಾಸು ಮಾಡುವುದು ಇಸ್ರೇಲಿ-ಅದು ಶಾಂತಿ ಮಾತುಕತೆ ಪುನರಾರಂಭಿಸಲು ತೊಂದರೆ ಆಗುತ್ತದೆ. - ಅಂತರ್ರಾಷ್ಟ್ರೀಯ ಮಧ್ಯಪ್ರವೇಶ ಈ ವಿಷಯದಲ್ಲಿ ಬೇಡ ಎಂಬ ಅಮೆರಿಕನ್ ನೀತಿಯನ್ನು 130 ದೇಶಗಳು ತಿರಸ್ಕರಿಸಿದ್ದು ಅತಿ ಮಹತ್ವದ ಸಂಗತಿ.

## ಲೋಕಸಂಚಾರ



ಶರತ್‌ಚಂದ್ರ

ಅಂತರ್ರಾಷ್ಟ್ರೀಯ ಸಂಬಂಧಗಳಲ್ಲಿ ಹೊಸ ಮಾದರಿ

### ರಶ್ಯಾ-ಚೀನಾ ಸೈನ್ಯ ರಹಿತ-ಗಡಿ ಒಪ್ಪಂದ

ಚೀನಾ, ರಶ್ಯಾ, ಕಝಖಿಸ್ತಾನ, ರೆಘುಕಿಸ್ತಾನ, ತಜಾಕಿಸ್ತಾನಗಳ ಐತಿಹಾಸಿಕ ಸೈನ್ಯ ರಹಿತ ಗಡಿ ಒಪ್ಪಂದ ಅಂತರ್ರಾಷ್ಟ್ರೀಯ ಸಂಬಂಧಗಳಲ್ಲಿ ಇಡೀ ಜಗತ್ತಿನ ಮುಂದೆ ಹೊಸ ಮಾದರಿಯಾಗಲಿವೆ. ಮಾಸ್ಕೋದಲ್ಲಿ ಚೀನಾದ ಅಧ್ಯಕ್ಷ ಜಿಯಾಂಗ್ ಝುಮಿನ್‌ರ ಭೇಟಿ ಸಮಯದಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಒಪ್ಪಂದದ ಪ್ರಕಾರ ಸುಮಾರು ಏಳು ಸಾವಿರ ಕಿ.ಮಿ. ಉದ್ದದ ಚೀನಾ ಮತ್ತು ಮಾಜಿ ಸೋವಿಯತ್ ಒಕ್ಕೂಟದ ಗಣರಾಜ್ಯಗಳ ನಡುವಿನ ಗಡಿಯ ನೂರು ಕಿ.ಮಿ.ವರೆಗೆ ಸೈನ್ಯ ಹಾಗೂ ಶಸ್ತ್ರಾಸ್ತ್ರಗಳನ್ನು ಗಣನೀಯವಾಗಿ ಹಿಂತೆಗೆದುಕೊಳ್ಳಲಾಗುವುದು. ಈ ಒಪ್ಪಂದದ ಪ್ರಕಾರ ಸೈನ್ಯ ಹಾಗೂ ಶಸ್ತ್ರಾಸ್ತ್ರಗಳನ್ನು ಹಿಂತೆಗೆದುಕೊಂಡ ನಂತರ ಈ ಏಳು ಸಾವಿರ ಕಿ.ಮಿ. ಗಳ ಗಡಿ ಹೆಚ್ಚು ಕಡಿಮೆ ಸೈನ್ಯ ರಹಿತವಾಗುವುದು.

ಚೀನಾ, ರಶ್ಯಾ, ಕಝಖಾಕಿಸ್ತಾನ, ರೆಘುಕಿಸ್ತಾನ, ತಜಾಕಿಸ್ತಾನ - ಈ ದೇಶಗಳ ಅಧ್ಯಕ್ಷರುಗಳು ಮಾಸ್ಕೋದಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಿದರು. ಚೀನಿ ಅಧ್ಯಕ್ಷ ಜಿಯಾಂಗ್ ಝುಮಿನ್ ಈ ಒಪ್ಪಂದ 'ಶೀತ ಸಮರದಿಂದ ಬೇರೆಯಾದ ಭದ್ರತೆಯ ಮಾದರಿ' ಎಂದು ಬಣ್ಣಿಸಿದ್ದಾರೆ. ಇದರ ಜತೆಗೆ ರಶ್ಯ ಹಾಗೂ ಚೀನಾದ ಅಧ್ಯಕ್ಷರುಗಳು ಬಹು-ಧ್ರುವೀಯ ಜಗತ್ತಿಗೆ ಹೊಸ ಅಂತರ್ರಾಷ್ಟ್ರೀಯ ಸಂಬಂಧಗಳ ಮಾದರಿ ಹಾಕುವ ಹೇಳಿಕೆಯನ್ನೂ ಹೊರಡಿಸಿದ್ದಾರೆ. ವಾರ್ಸಾ ಒಪ್ಪಂದ ಕಳಚಿ ಹಾಕಿ ವರ್ಷಗಳೇ ಕಳೆದರೂ, ನಾಟೋ ಮಿಲಿಟರಿ ಕೂಟವನ್ನು ಕಳಚಿ ಹಾಕುವ ಬದಲು ಅದನ್ನು ವಿಸ್ತರಿಸುವ, ಗಟ್ಟಿಗೊಳಿಸುವ ಅಮೆರಿಕನ್ ಹಾಗೂ ಇತರ ಅಭಿವೃದ್ಧಿ ಬಂಡವಾಳ ಶಾಹಿ ದೇಶಗಳ ಆಕ್ರಮಿತ ಶಾಂತಿ-ವಿರೋಧಿ ನೀತಿ ಹಾಗೂ ಈ ಹೊಸ ಮಾದರಿ ನಡುವಣ ವ್ಯತ್ಯಾಸ ಈಗ ಜಗತ್ತಿನ ಎಲ್ಲಾ ದೇಶಗಳ ಮುಂದೆ ಸ್ಪಷ್ಟವಾಗಿದೆ. ಇದು ಬಹು-ಧ್ರುವೀಯ ಹೊಸ ವಿಶ್ವ ವ್ಯವಸ್ಥೆಗೆ ನಾಂದಿ ಹಾಡುವುದು ಎಂದು ಹೇಳಲಾಗಿದೆ.

## ಮಂಗಳೂರು ಮಹಾಪಾಲಿಕೆ ಚುನಾವಣೆ-ಕಲಿಯತಕ್ಕದ್ದೇನು?

ಪುಟ 10ರಿಂದ

ಸ್ವಾತಂತ್ರ್ಯಹೋರಾಟದ ಕಾಲದಿಂದಲೂ ದ.ಕ. ಜಿಲ್ಲೆಯಲ್ಲಿ ಕಮ್ಯುನಿಸ್ಟ್ ಪಕ್ಷ ಹಾಗೆಯೇ ರೈತ-ಕಾರ್ಮಿಕ ಸಂಘಟನೆಗಳು ನೆಲೆಯೂರಿ ನಿಂತಿವೆ. ಕಮ್ಯುನಿಸ್ಟ್ ಪಾರ್ಟಿ ಮತ್ತು ಅದರ ನೇತೃತ್ವದ ಕಾರ್ಮಿಕ, ರೈತ ಸಂಘಟನೆಗಳು ಇಬ್ಭಾಗವಾದರೂ ಕೂಡಾ ಎಡಪಕ್ಷಗಳ ಪ್ರಭಾವವೇನೂ ಕುಂದಿಲ್ಲ. ಕುಂದಾಪುರ ನಗರ ಸಭೆಯಲ್ಲಿ ಸಿಪಿಐ(ಎಂ) ಪಕ್ಷ ಬಹುಮತ ಪಡೆದಿದೆ. ಪಾರ್ಲಿಮೆಂಟ್, ವಿಧಾನಸಭೆ, ನಗರಸಭೆ, ಪಂಚಾಯತಿಗಳಿಗೆ ನಡೆದ ಚುನಾವಣೆಗಳಲ್ಲಿಯೂ ಸಿಪಿಐ(ಎಂ) ಮತ್ತು ಸಿಪಿಐ ಸಾಕಷ್ಟು ಮತಗಳಿಸುವಲ್ಲಿ ಹಿಂದೆ ಬಿದ್ದಿಲ್ಲ. ಸಿಪಿಐ(ಎಂ) ಜಿಲ್ಲೆಯಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳುತ್ತಿವೆ. ದ.ಕ. ಜಿಲ್ಲೆಯಲ್ಲಿ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ನೆಲೆ ಭದ್ರವಾಗಿಯೇ ಇದೆ. ಜನತಾದಳ, ಸಿಪಿಐ (ಎಂ), ಸಿಪಿಐ ಮತ್ತು ಇತರ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳೆಲ್ಲ ಕಳೆದ ಹತ್ತು ತಿಂಗಳಲ್ಲಿ ಕೇಂದ್ರದಲ್ಲಿಯ ಅನುಭವ ಗಳನ್ನು ಕ್ರೋಢೀಕರಿಸಿಕೊಂಡಿದ್ದಾದರೆ ದ.ಕ. ಜಿಲ್ಲೆ ಹಾಗೆಯೇ ಕರ್ನಾಟಕದಲ್ಲಿಯ ರಾಜಕೀಯ ಸ್ಥಿತ್ಯಂತರದಲ್ಲಿ ಬದಲಾವಣೆ ತರಲು ಸಾಧ್ಯವಾದೀತು. ನಿಸ್ಪೃಹ ದೃಷ್ಟಿಯಿಂದ ಜನತಾದಳ ಹೋದ ಸಲ ಚುನಾವಣಾ ಹೊಂದಾಣಿಕೆಗೆ ಬಂದಿದ್ದರೆ ವಿಧಾನಸಭೆಯಲ್ಲಿ ಸಿಪಿಐ(ಎಂ) ಮತ್ತು ಜನತಾ ದಳದ ಸ್ಥಾನ ಹೆಚ್ಚಾಗುತ್ತಿತ್ತು. ದ.ಕ. ಜಿಲ್ಲೆ ಯಲ್ಲಿ ಸಿಪಿಐ(ಎಂ) ಉಳ್ಳಾಲದಲ್ಲೂ, ಜನತಾದಳ ಕುಂದಾಪುರದಲ್ಲೂ ಗೆಲ್ಲಬಹುದಿತ್ತು. ಅನಂತರ ನಡೆದ ಜಿಲ್ಲಾ, ತಾಲೂಕು, ಪಂಚಾಯತ್ ಚುನಾವಣೆಗಳಲ್ಲೂ ನಗರಸಭೆ ಚುನಾವಣೆಗಳಲ್ಲೂ ಹೆಚ್ಚುಸ್ಥಾನ ಪಡೆಯಬಹುದಿತ್ತು. ಇತ್ತೀಚೆಗಿನ ದಿವಸಗಳಲ್ಲಿ ರಾಮಕೃಷ್ಣ ಹೆಗಡೆಯವರ ಲೋಕಶಕ್ತಿ, ಜನತಾದಳವನ್ನು ಸೋಲಿಸುವಂಥ ಏಕೈಕ ಧೋರಣೆಯಿಂದ ಬಿಜೆಪಿ-ಕಾಂಗ್ರೆಸ್‌ಗಳಿಗೆ ಬೆಂಬಲ ನೀಡುತ್ತಿರುವ ಹಿನ್ನೆಲೆಯಲ್ಲಿ ಜನತಾದಳ, ಎಡ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಜೊತೆಯಲ್ಲಿ ನಿಕಟ ಸಂಪರ್ಕ ಇಟ್ಟುಕೊಂಡು ಹೊಂದಾಣಿಕೆಯ ದೃಢ ನಿಲುಮೆ ತಾಳುವ ಅವಶ್ಯಕತೆಯಿತ್ತು. ಮಂಗಳೂರು ಮಹಾನಗರಪಾಲಿಕೆ ಚುನಾವಣೆಯಲ್ಲಿ ಜನತಾದಳ ಚುನಾವಣಾ ಹೊಂದಾಣಿಕೆಗೆ ಮುಂದಾಗಿದ್ದರೆ ಬಿಜೆಪಿ 24 ಸ್ಥಾನಗಳನ್ನು ಗೆಲ್ಲುತ್ತಿರಲಿಲ್ಲ. ಜನತಾದಳ ಮುಖಂಡತ್ವ ಚರಿತ್ರೆಯಿಂದ ಸರಿಯಾದ ಪಾಠ ಕಲಿತರೆ ಮಾತ್ರ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಾಧ್ಯವಾದೀತು.

ಸಿಪಿಐ(ಎಂ) ಪಕ್ಷ ಹಿಂದಿನ ವರ್ಷಗಳಲ್ಲಿ ಸತತವಾಗಿ ಕೆಲವು ಸ್ಥಾನಗಳಲ್ಲಿ ಗೆಲ್ಲುತ್ತಿತ್ತು. ಹೋದ ಸಲ ಒಂದು ಸ್ಥಾನ ಗೆದ್ದಿತ್ತು. ಈಸಲ ಗೆಲ್ಲಲು ಸಾಧ್ಯವಾಗಿಲ್ಲ. ಮೀಸಲಾತಿ ಪ್ರಶ್ನೆ ಸಣ್ಣ ಪಕ್ಷಗಳಿಗೆ ತೊಂದರೆ ಉಂಟು ಮಾಡುತ್ತಿದೆಂಬ ಅಂಶ ಒಂದು ಕಡೆ. ಆದರೆ ವರ್ಗ ಸಂಘಟನೆ ಉಳಿಸಿಕೊಂಡಿರುವ ಜನಪರ ಹೋರಾಟಗಳ ಮೂಲಕ ಜನಪ್ರಿಯತೆ ಗಳಿಸಿರುವ ಕ್ಷೇತ್ರಗಳನ್ನು ಬಲಿಷ್ಟಗೊಳಿಸಬೇಕೆಂದೂ ಆ ಕ್ಷೇತ್ರಗಳಲ್ಲಿ ನಿರಂತರವಾದ ಚಟುವಟಿಕೆಗಳ ಮೂಲಕ ಜನಪ್ರಿಯತೆ ಗಳಿಸಬೇಕೆಂದೂ ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿ ಹೇಳುತ್ತಿರುವುದರಲ್ಲಿ ಅರ್ಥವಿದೆ ಯೆಂಬುದನ್ನು ಮಂಗಳೂರು ಮಹಾ ನಗರಪಾಲಿಕೆಯ ಚುನಾವಣಾ ಫಲಿತಾಂಶ ತೋರಿಸಿಕೊಟ್ಟಂತೆ ಕಂಡು ಬರುತ್ತದೆ. ನಮ್ಮ ಹೋರಾಟದಲ್ಲಿ ಚುನಾವಣೆಯು ಒಂದು ಮುಖ್ಯ ಅಂಶವಾಗಿರುವುದರಿಂದ ನಮ್ಮ ತಪ್ಪುಗಳನ್ನು ತಿದ್ದುಕೊಂಡು ಮುಂದೆ ಸಾಗುವುದು ಅಗತ್ಯ.

—ಎನ್.ಕೆ.ಉಪಾಧ್ಯಾಯ

## ಕಾಂ॥ ಪೆಂಗ್ ಝೆನ್‌ಗೆ ಪೊಲಿಟ್‌ಬ್ಯೂರೋ ಶ್ರದ್ಧಾಂಜಲಿ

ಏಪ್ರಿಲ್ 28 ರಂದು ಚೀನಾ ಕಮ್ಯುನಿಸ್ಟ್ ಪಕ್ಷದ ಹಿರಿಯ ಮುಖಂಡ ಕಾಂ॥ ಪೆಂಗ್ ಝೆನ್ ನಿಧನರಾದರು. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್‌ರವರು ಚೀನಾ ಕಮ್ಯುನಿಸ್ಟ್ ಪಕ್ಷದ ಅಂತರ್ರಾಷ್ಟ್ರೀಯ ಸಂಪರ್ಕ ಇಲಾಖೆಗೆ ಸಿಪಿಐ(ಎಂ) ಕೇಂದ್ರ ಸಮಿತಿಯ ಹಾರ್ದಿಕ ಸಂತಾಪವನ್ನು ವ್ಯಕ್ತಪಡಿಸುತ್ತಾ ಈ ಕೆಳಗಿನ ಸಂತಾಪ ಸಂದೇಶವನ್ನು ಕಳಿಸಿದ್ದಾರೆ.

"ಸುಮಾರು ಏಳು ದಶಕಗಳ ಕ್ರಾಂತಿಕಾರಿ ಚಟುವಟಿಕೆಗಳ ದೀರ್ಘ ಅವಧಿಯಲ್ಲಿ ಕಾಂ॥ ಪೆಂಗ್ ಆಧುನಿಕ ಚೀನಾದ ವಿಕಾಸ ಹಾಗೂ ರಚನೆಯಲ್ಲಿ ಒಂದು ಪ್ರಮುಖ ಪಾತ್ರ ವಹಿಸಿದರು. ಅವರು ಸಮಾಜವಾದಿ ಕ್ರಾಂತಿ ಹಾಗೂ ನಂತರದ ಏರಿಳಿತ-ತೊಡರುಗಳ ಮೂಲಕ ಚೀನಾವನ್ನು ಮುನ್ನಡೆಸಿದ ಹಿಂದಿನ ತಲೆಮಾರಿನ ಹಿರಿಯ ಶ್ರಮಜೀವಿ ಕ್ರಾಂತಿಕಾರಿಗಳಲ್ಲಿ ಒಬ್ಬರು. ಕಾಂ॥ ಪೆಂಗ್ ಮಾರ್ಕ್ಸ್‌ವಾದಿ - ಲೆನಿನ್ ವಾದಿ ಕ್ರಾಂತಿಕಾರಿ ತತ್ವಗಳನ್ನು ಎತ್ತಿ ಹಿಡಿದವರು. ಸಾಂಸ್ಕೃತಿಕ ಕ್ರಾಂತಿಯ ವೇಳೆಯಲ್ಲಿ ಮರೆಗೆ ದೂಡಲ್ಪಟ್ಟು 12 ವರ್ಷಗಳ ಕಾಲ ಗ್ರಾಮೀಣ ಗಡೀಪಾರಿನಲ್ಲಿದ್ದ ಕಾಂ॥ ಪೆಂಗ್ 1979 ರಲ್ಲಿ ನಾಯಕತ್ವಕ್ಕೆ ಮರಳಿ ಅಧಿಕಾರ ಸ್ವೇಚ್ಛಾಚಾರದ ಬಳಕೆಯನ್ನು ತಡೆಯುವ ಸಮಾಜವಾದಿ ಕಾನೂನು ವ್ಯವಸ್ಥೆಯನ್ನು ಚೀನಾದಲ್ಲಿ ಸ್ಥಾಪಿಸಿದರು. 1987 ರಲ್ಲಿ ಅಧಿಕೃತ ಸ್ಥಾನಮಾನಗಳನ್ನು ತ್ಯಜಿಸಿದರೂ ಅವರು ಆಧುನಿಕ ಚೀನಾದ ಧೋರಣಾ ದಿಕ್ಕಿನ ಮೇಲೆ ಪ್ರಭಾವ ಬೀರಿದ್ದರು. ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನ ಒಬ್ಬ ಗಟ್ಟಿ ಸಮಾಜವಾದಿ ರಕ್ಷಕನನ್ನು ಕಳೆದುಕೊಂಡಿದೆ."

# ಲಾಲೂ ಯಾದವ್ ಮುಖ್ಯಮಂತ್ರಿ ಪದವಿ ಬಿಡಬೇಕು

## - ಎಡಪಕ್ಷಗಳ ಅಭಿಪ್ರಾಯ

ಬಿಹಾರದ ಪಶುಸಂಗೋಪನ ಇಲಾಖೆಯಲ್ಲಿ 1000 ಕೋಟಿ ರೂಗಳಷ್ಟು ಹಣ ನುಂಗಿ ಹಾಕಿದ ಬೃಹತ್ ಹಗರಣ ಬಿಹಾರದ ಮತ್ತು ದೇಶದ ಜನತೆಗೆ ಬಹಳ ಆತಂಕದ ವಿಷಯ. ಸಾರ್ವಜನಿಕ ಹಣವನ್ನು ಈ ರೀತಿ ದುರುಪಯೋಗ ಮಾಡಿದವರನ್ನು ಕಂಡುಹಿಡಿದು ಶಿಕ್ಷಿಸಬೇಕು ಎಂದು ಎಡ ಪಕ್ಷಗಳು ನಿರಂತರವಾಗಿ ಹೇಳುತ್ತಾ ಬಂದಿವೆ. ಇದನ್ನು ಒತ್ತಾಯಿಸಿ ನವಂಬರ್ 7, 1996 ರಂದು ಎಡಪಕ್ಷಗಳು ರಾಜಧಾನಿ ಪಾಟ್ನಾದಲ್ಲಿ ಒಂದು ದೊಡ್ಡ ರ್‍ಯಾಲಿಯನ್ನು ಸಂಘಟಿಸಿದ್ದವು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಈಗ ಸಿಬಿಐ 56 ಮಂದಿಯ ಮೇಲೆ ಆರೋಪ ಪಟ್ಟಿ ಸಲ್ಲಿಸಿ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಲು ನಿರ್ಧರಿಸಿದೆ. ಈ ಪಟ್ಟಿಯಲ್ಲಿ ಬಿಹಾರದ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್, ಮಾಜಿ ಕಾಂಗ್ರೆಸ್ ಮುಖ್ಯಮಂತ್ರಿ ಜಗನ್ನಾಥ್ ಮಿಶ್ರ, ಒಬ್ಬ ಕೇಂದ್ರ ಮಂತ್ರಿ ಇತರ ಕೆಲವು ರಾಜ್ಯ ಸಚಿವ ಸಂಪುಟದ ಮಂತ್ರಿಗಳು, ಬಿಜೆಪಿ ಯ ಒಬ್ಬ ಎಂಎಲ್‌ಎಯೂ ಸೇರಿದಂತೆ ಹಲವು ಎಂಎಲ್‌ಎಗಳ ಹಾಗೂ ಹಲವಾರು ಅಧಿಕಾರಿಗಳ ಹೆಸರುಗಳಿವೆ.

ಸಿಬಿಐನ ಈ ನಿರ್ಣಯದ ನಂತರ ಲಾಲೂಪ್ರಸಾದ್ ಯಾದವ್ ಮುಖ್ಯ ಮಂತ್ರಿ ಪದವಿಯಿಂದ ಕೆಳಗಿಳಿದು ನ್ಯಾಯಾಂಗ ವಿಚಾರಣೆಗಳನ್ನು ಎದುರಿಸಬೇಕು ಎಂದು ಎಡಪಕ್ಷಗಳು ಅಭಿಪ್ರಾಯಪಟ್ಟಿವೆ. ಆರೋಪ ಪಟ್ಟಿ ಸಲ್ಲಿಸಲ್ಪಟ್ಟ ಇತರ ಮಂತ್ರಿಗಳೂ ಕೆಳಗಿಳಿಯಬೇಕು, ಸಾರ್ವಜನಿಕ ವಿಚಾರಣೆಯ ನೀತಿ-ನಿಯಮಗಳಿಗೆ ಅನುಸಾರವಾಗಿ ಅವರೆಲ್ಲಾ ಈ ರೀತಿ ಅಧಿಕಾರದಿಂದ ಕೆಳಗಿಳಿಯುವುದು ಸೂಕ್ತ ಎಂದು ಎಡ ಪಕ್ಷಗಳ ಮುಖಂಡರು ಏಪ್ರಿಲ್ 28 ರಂದು ಸಭೆ ಸೇರಿ ಚರ್ಚಿಸಿದ ನಂತರ ಹೊರಡಿಸಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ಸಭೆಯಲ್ಲಿ ಸಿಪಿಐ(ಎಂ), ಸಿಪಿಐ, ಆರ್‌ಎಸ್‌ಪಿ ಹಾಗೂ ಫಾರ್ವರ್ಡ್‌ಬ್ಲಾಕ್‌ನ ಮುಖಂಡರು ಭಾಗ ವಹಿಸಿದ್ದರು. ಈ ಸಭೆಯಲ್ಲಿ ಚೀನಾ ಕಮ್ಯುನಿಸ್ಟ್ ಪಕ್ಷದ ಹಾಗೂ ಚೀನಾ ಕ್ರಾಂತಿಯ ಮುಖಂಡ ಪೆಂಗ್ ಝುನ್, ಸಿಪಿಐ ಮತ್ತು ಕೃಷಿ ಕೂಲಿಕಾರರ ಮುಖಂಡ ಯೆಲ್ಲ ಮಂದ ರೆಡ್ಡಿ ಹಾಗೂ ಹಿರಿಯ ಆರ್.ಎಸ್.ಪಿ. ಮುಖಂಡ ಸೌರೇನ್ ಭಟ್ಟಾ ಚಾರ್ಯರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಲಾಯಿತು.

ಎಡ ಪಕ್ಷಗಳ ಮುಖಂಡರ ಈ ಸಭೆಯಲ್ಲಿ ಕೇಂದ್ರ ಬಜೆಟ್ ಮತ್ತು ಹಣಕಾಸು ಮಸೂದೆಯ ಬಗ್ಗೆಯೂ ಚರ್ಚಿಸಿ ಕೆಲವು ಬದಲಾವಣೆಗಳನ್ನು ಸೂಚಿಸಿ ಇದನ್ನು ಪ್ರಧಾನ ಮಂತ್ರಿಗಳು ಹಾಗೂ ಸಂಯುಕ್ತ ರಂಗ ಸರಕಾರ ದೊಡನೆ ಚರ್ಚಿಸಲು ನಿರ್ಧರಿಸ ಲಾಯಿತು. ಪ್ರಧಾನ ಮಂತ್ರಿಗಳಿಗೆ ನೀಡಿದ ಮನವಿ ಪತ್ರದ ಬಗ್ಗೆ ಈ ಸಂಚಿಕೆಯಲ್ಲಿ ಬೇರೆಡೆ ಪ್ರಕಟವಾಗಿರುವ ಸುದ್ದಿಯನ್ನು ಓದಿ.

(ಐಎನ್‌ಎನ್)

# ...................ಐಕ್ಯತೆ ಬರುವುದು ಹೋರಾಟದ ಮೂಲಕವೇ"

ಪುಟ 4ರಿಂದ

ಅಗತ್ಯ ಸ್ಥಳೀಯವಾಗಿಯಷ್ಟೇ ಅಲ್ಲ, ದೇಶದಲ್ಲಿ ಮಾತ್ರವೇ ಅಲ್ಲ, ಅಂತರ್‍ರಾಷ್ಟ್ರೀಯ ಮಟ್ಟ ದಲ್ಲೂ ಅನುಭವಕ್ಕೆ ಬರುತ್ತಿದೆ. ಬಂಡವಾಳ ಅಂತರ್‍ರಾಷ್ಟ್ರೀಯವಾಗಿ ಬಿಟ್ಟಿರುವಾಗ ಕಾರ್ಮಿಕ ಸಂಘಗಳೂ ಅದೇ ರೀತಿ ಸ್ಪಂದಿಸ ಬೇಕು. ಏಕೈಕ ಕೇಂದ್ರ ಕಾರ್ಮಿಕ ಸಂಘದ ವಿಚಾರದ ಹಿಂದಿರುವ ಭಾವನೆಯನ್ನು ಮೆಚ್ಚಿದರೂ ಇದು ಸದ್ಯ ಭವಿಷ್ಯತ್ತಿನಲ್ಲಿ ಅಸಾಧ್ಯವಾಗಿ ಕಾಣುತ್ತದೆ ಎಂದರು. 'ಕುರುಡು ಸೈದ್ಧಾಂತಿಕತೆಗಿಂತ ಕಾರ್ಯವಾಸಿ ಯಾಗಿರುವುದೇ ಒಳ್ಳೆಯದು" ಎಂದ ಅವರು ಯಾವ ಪ್ರಶ್ನೆಗಳ ಬಗ್ಗೆ ಐಕ್ಯತೆ ಯಿದೆಯೋ ಅವುಗಳನ್ನು ಕುರಿತಂತೆ ಹೇಗೆ ನಿಕಟವಾಗಿ ಕೆಲಸ ಮಾಡಬಹುದು ಎಂಬ ಬಗ್ಗೆ ಕಾರ್ಮಿಕ ಸಂಘಗಳು ಚರ್ಚಿಸಲು ಸಾಧ್ಯವಾಗುವಂತಹ ಒಂದು ವೇದಿಕೆ ರಚಿಸಬೇಕೆಂದು ಸೂಚಿಸಿದರು.

ಎಂ.ಕೆ.ಪಂಧೆಯವರು ಮಾತನಾಡುತ್ತಾ ಎಲ್ಲೆಡೆ ಐಕ್ಯತೆಯ ಅಗತ್ಯ ಇದ್ದರೂ ಸಂಘಗಳು ನಿಕಟ ಬರದಂತೆ ತಡೆದಿರುವ 'ಕಟುವಾಸ್ತವ' ಏನು ಎಂಬುದನ್ನು ಗಮನಕ್ಕೆ ತಗೊಳ್ಳಬೇಕು ಎಂದರು. ಐಕ್ಯತೆ ಬರುವುದು ಜಂಟಿ ಹೋರಾಟಗಳು ಹಾಗೂ ಕಾರ್ಯಾಚರಣೆ ಗಳ ಮೂಲಕ ಮಾತ್ರ ಎಂದು ಅವರು ಸ್ಪಷ್ಟ ವಾಗಿ ಹೇಳಿದರು. ಇಂತ ಜಂಟಿ ಹೋರಾಟಗಳ ಅಗತ್ಯ ಬಹಳ ಮಹತ್ವದ್ದು. ಏಕೆಂದರೆ ಉದಾರೀಕರಣದ ವಿರುದ್ಧ ಯಾವುದೇ ಕಾರ್ಮಿಕ ಸಂಘ ಏಕಾಂಗಿಯಾಗಿ ಹೋರಾ ಡಲು ಸಾಧ್ಯವಿಲ್ಲ. ಐಕ್ಯತೆ ಬೇಕಾಗುವುದು ಕೇವಲ ಐಕ್ಯತೆಗಾಗಿ ಮಾತ್ರವಲ್ಲ, ಅಮೆರಿಕಾ, ಬ್ರಿಟನ್‌ಗಳಲ್ಲಿ ಏಕೈಕ ಕೇಂದ್ರ ಕಾರ್ಮಿಕ ಸಂಘಟನೆಯಿವೆ. ಆದರೆ ಅವೆರಡೂ ತಮ್ಮ ದೇಶಗಳ ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ಕಾಪಾಡಲಿಲ್ಲ. ನಮಗೆ ಬೇಕಾಗಿರುವುದು ಕಾರ್ಮಿಕ ವರ್ಗಕ್ಕಾಗಿ ಹೋರಾಡುವ ಒಂದು ಐಕ್ಯತೆ, ಈ ಸರ್ವ ಸಾಮಾನ್ಯ ಹೋರಾಟಗಳು, ಕಾರ್ಯಾಚರಣೆಗಳ ಮೂಲಕ ಕಾರ್ಮಿಕ ಸಂಘಗಳ ಏಕೀಕರಣ ಒಂದು ಕಾರ್ಯಸಾಧ್ಯ ಸಂಗತಿಯಾಗಿ ಮೂಡಿಬರಬಹುದು ಎಂದ ಪಂಧೆಯವರು ಈ ಕಾರಣದಿಂದ ಆರ್ಥಿಕ ಧಾಳಿಗಳ ವಿರುದ್ಧ ಒಂದು ಐಕ್ಯ ಹೋರಾಟವನ್ನು ವ್ಯಾಪಕಗೊಳಿಸುವುದು, ತೀವ್ರಗೊಳಿಸುವುದು ಹೇಗೆ ಎಂಬುದಕ್ಕೆ ಒಂದು ಕಾರ್ಯಕ್ರಮವನ್ನು ರೂಪಿಸಲು ಕೆಲವು ಕೇಂದ್ರ ಕಾರ್ಮಿಕ ಸಂಘಟನೆಗಳ ಮುಖಂಡರು ಒಂದು ಸಮಾಲೋಚನೆ ನಡೆಸಬೇಕು ಎಂದು ಸೂಚಿಸಿದರು. (ಐಎನ್‌ಎನ್)

## ಇನ್ನೊಂದು ವಿಚಾರ ಸಂಕಿರಣ ಕಾರ್ಮಿಕ ಆಂದೋಲನದಲ್ಲಿ

# ವಿದೇಶಿ ಹಣ ಪಡೆವ ಸಂಸ್ಥೆಗಳಿಗೇನು ಕೆಲಸ?

ಕಾರ್ಮಿಕ ಆಂದೋಲನದೊಳಗೆ ವಿದೇಶಿ ಹಣ ಪಡೆವ ಸರಕಾರೇತರ ಸಂಘ-ಸಂಸ್ಥೆಗಳು ತೂರಿಕೊಳ್ಳುತ್ತಿರುವ ಬಗ್ಗೆ ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಂ.ಕೆ.ಪಂಧೆಯವರು ಆತಂಕ ವ್ಯಕ್ತಪಡಿಸಿದರು. ಸಿಐಟಿಯು 9ನೇ ಸಮ್ಮೇಳನದ ಪ್ಲೀನಂ ಅಧಿವೇಶನದಲ್ಲಿ ಪ್ರತಿನಿಧಿಗಳು ಈ ಪ್ರಶ್ನೆಯ ಬಗ್ಗೆ ಮಾತನಾಡಿದರು. ಈ ಪ್ರವೃತ್ತಿಯ ಬಗ್ಗೆ ಏನು ನಿಲುವು ತಳೆಯಬೇಕು ಎಂಬುದನ್ನು ಕುರಿತು ಇತರ ಸಂಘಗಳೊಡನೆ ಮಾತನಾಡಲು ಸಿಐಟಿಯು ಯೋಚಿಸುತ್ತಿದೆ ಎಂದು ಪಂಧೆ ತಿಳಿಸಿದರು.

ಈ ಸರಕಾರಿಯೇತರ ಸಂಸ್ಥೆಗಳು ದೊಡ್ಡ ಪ್ರಮಾಣದಲ್ಲಿ ಕಾರ್ಮಿಕ ಆಂದೋಲನವನ್ನು ಪ್ರವೇಶಿಸುತ್ತಿವೆ. ಹೆಚ್ಚಿನ ಇಂತಹ ಸಂಸ್ಥೆಗಳು ನೊಂದಾಯಿತವಾಗಿರುವುದಿಲ್ಲ. ಆದ್ದರಿಂದ ಸರಿಯಾದ ಸಂಖ್ಯೆ ತಿಳಿಯುವುದಿಲ್ಲ. ಆದರೆ ಮೂರು ಲಕ್ಷಕ್ಕೂ ಹೆಚ್ಚು ಇಂತಹ ಸಂಸ್ಥೆಗಳು ದೇಶದಲ್ಲಿ ಕೆಲಸ ಮಾಡುತ್ತಿರಬಹುದು ಎಂದು ಅಂದಾಜು ಮಾಡಲಾಗಿದೆ. ಸಂಸತ್ತಿನಲ್ಲಿ ಸರಕಾರದ ಉತ್ತರಗಳ ಪ್ರಕಾರ ಈ ಸಂಸ್ಥೆಗಳಿಗೆ ವಿದೇಶಗಳಿಂದ ಪ್ರತಿವರ್ಷ 2500 ಕೋಟಿ ರೂಪಾಯಿಗಳಷ್ಟು ಹಣ ಬರುತ್ತಿದೆ ಎಂದು ಪಂಧೆ ತಿಳಿಸಿದರು.

ಈಗ ಇಂತಹ ಸಂಘ-ಸಂಸ್ಥೆಗಳು ಅಸಂಘಟಿತ ಕಾರ್ಮಿಕರ ನಡುವೆ ಕೆಲಸ ಮಾಡುವ ಹೆಸರಲ್ಲಿ ಕಾರ್ಮಿಕ ಆಂದೋಲನವನ್ನು ಪ್ರವೇಶಿಸುತ್ತಿರುವುದು ಒಂದು ಆತಂಕಕಾರಿ ಪ್ರವೃತ್ತಿ ಎಂದು ಪಂಧೆ ವರ್ಣಿಸಿದರು. ದೇಶದ ಸಂಘಟಿತ ಕಾರ್ಮಿಕ ಆಂದೋಲನ ಈ ವಿಭಾಗವನ್ನು ಕಡೆಗಣಿಸಿದ್ದರಿಂದ ತಾವು ಕಾಲಿಡುತ್ತಿರುವುದಾಗಿ ಇವು ಹೇಳಿಕೊಳ್ಳುತ್ತಿವೆ. ಈಗ ಒಂದು ಅಖಿಲ ಭಾರತ ಕೇಂದ್ರವನ್ನು ರಚಿಸಲು ಪ್ರಯತ್ನಿಸುತ್ತಿರುವ ಸರಕಾರಿಯೇತರ ಸಂಘ-ಸಂಸ್ಥೆಗಳು ತಮ್ಮ ಸದಸ್ಯ ಸಂಖ್ಯೆ ಏಳು ಲಕ್ಷದಷ್ಟು ಎಂದು ಹೇಳಿಕೊಳ್ಳುತ್ತಿವೆ. ಆದರೆ ಸಿಐಟಿಯು ಒಂದರಲ್ಲೇ ಅಸಂಘಟಿತ ವಲಯದ 15 ಲಕ್ಷ ಸದಸ್ಯರಿದ್ದಾರೆ. ಅಸಂಘಟಿತ ವಲಯವಲ್ಲದೆ ಈ ಮಂದಿ ಬಾಲ ಕಾರ್ಮಿಕರು, ಮಹಿಳಾ ಕಾರ್ಮಿಕರು ಮತ್ತಿತರ ವಿಭಾಗಗಳ ನಡುವೆ ಕೆಲಸ ಮಾಡಲು ವಿದೇಶಿ ಹಣ ಪಡೆಯುತ್ತಾರೆ. ಇಂತಹ ಸಂಘ-ಸಂಸ್ಥೆಗಳ ಕೆಲಸಗಳ ಮೇಲೆ ನಿಗಾ ಇಡಲು ಕಾನೂನುಗಳಿಲ್ಲ, ಇವುಗಳ ಲೆಕ್ಕ ಪತ್ರಗಳ ಪರಿಶೋಧನೆ ಯಾಗುವುದಿಲ್ಲ, 'ಸಂಘಟಿತ ಕಾರ್ಮಿಕ ಆಂದೋಲನವನ್ನು ಅಸ್ಥಿರಗೊಳಿಸಲು ವಿದೇಶಿ ಸಂಸ್ಥೆಗಳು ಇವರಿಗೆ ನೆರವು ನೀಡುತ್ತವೆ ಎಂದು ನಮ್ಮ ಭಾವನೆ" ಎಂದರು ಪಂಧೆಯವರು.

ಸಿಐಟಿಯು ಸಾರಾಸಗಟಾಗಿ ಎಲ್ಲಾ ಸರಕಾರಿಯೇತರ ಸಂಘ-ಸಂಸ್ಥೆಗಳನ್ನು ವಿರೋಧಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ ಪಂಧೆಯವರು "ಪ್ರತಿಯೊಂದು ಇಂತಹ ಸಂಘಟನೆ ಮೋಸಗಾರರು ಎಂದೇನೂ ನಾನು ಹೇಳುತ್ತಿಲ್ಲ. ಕೆಲವು ಬುಡಮಟ್ಟದಲ್ಲಿ ಕೆಲಸ ಮಾಡುವ ಸಂಸ್ಥೆಗಳ ಬಗ್ಗೆ ನನಗೆ ಅತ್ಯುನ್ನತ ಗೌರವವಿದೆ. ಆದರೆ ಕಾರ್ಮಿಕ ಸಂಘದ ಕೆಲಸಗಳಿಗೆ ಹಣ ನೀಡುವ ವಿದೇಶಿ ಸಂಸ್ಥೆಗಳ ಉದ್ದೇಶಗಳಲ್ಲಿ ಮೋಸವಿದೆ. ದೇಶದ ಕಾರ್ಮಿಕ ವರ್ಗ ಮತ್ತು ಶ್ರಮಜೀವಿಗಳನ್ನು ಅಸ್ಥಿರಗೊಳಿಸಿ ಮುರಿಯುವುದು ಅವರ ಗುರಿಯಿದ್ದಂತಿದೆ" ಎಂದ ಪಂಧೆಯವರು "ನಾವು ನಮ್ಮದೇ ಶಕ್ತಿಯ ಮೂಲಕ ಕಾರ್ಮಿಕ ಆಂದೋಲನವನ್ನು ಬಲಪಡಿಸಬೇಕು. ಈ ಉದ್ದೇಶಕ್ಕೆ ವಿದೇಶೀ ಹಣವನ್ನು ಬಳಸಿದರೆ ಅದು ಬಹಳ ಅಪಾಯಕಾರಿ" ಎಂದರು.

ಕಾರ್ಮಿಕ ಆಂದೋಲನದ ದೌರ್ಬಲ್ಯದಿಂದಾಗಿ ಇಂತಹ ಸಂಘ-ಸಂಸ್ಥೆಗಳು ಬೆಳೆಯುತ್ತಿವೆ ಎಂಬ ಪ್ರಶ್ನೆಗೆ ಉತ್ತರಿಸುತ್ತಾ "ನಮ್ಮ ದೌರ್ಬಲ್ಯವಿಲ್ಲ ಎಂದು ನಾನು ಹೇಳುತ್ತಿಲ್ಲ. ಆದರೆ ಈ ಸಂಘ-ಸಂಸ್ಥೆಗಳು ಬರುತ್ತಿರುವುದು ನಮ್ಮ ದೌರ್ಬಲ್ಯದಿಂದಾಗಿ ಅಲ್ಲ, ಕಾರ್ಮಿಕ ಆಂದೋಲನದಲ್ಲಿ ಕೆಲಸ ಮಾಡಲು ಅವರಿಗೆ ಹಣ ಒದಗಿಸುತ್ತಿರುವುದರಿಂದ ಅವು ಬರುತ್ತಿವೆ" ಎಂದರು ಡಾ|| ಪಂಧೆ.

(ಐಎನ್‌ಎನ್)




## ಅಣಕ

- ಶರತ್ ಚಂದ್ರ

# ನೀನ್ಯಾರಿಗಾದೆಯೋ ಎಲೆ ಮಾನವಾ....?

ನಮ್ಮದು ಜನಗಳ ಪತ್ರಿಕೆ, ಪ್ರಸಕ್ತ ಘಟನೆಗಳಿಗೆ ಜನಗಳ ಪ್ರತಿಕ್ರಿಯೆ ಏನು ಅಂತ ಇರ್ಬೇಕು ಎಂದು ಜೋರು ಮಾಡಿ ವರದಿಗಾರ ನಕ್ಷತ್ರಿಕನನ್ನು ಕಳುಹಿಸಿದರೆ, ಈ ವರದಿ ಅರ್ಧ ದಿನದೊಳಗೆ ತಂದುಕೊಟ್ಟ! ಜನಗಳ ಪ್ರತಿಕ್ರಿಯೆ ವರದಿ ಮಾಡು ಅಂದ್ರ ಹಿಂಗಾ ಮಾಡೋದು? ನೀವೇ ನೋಡಿ ಹೇಗಿದೆ?

ನಾನು ಜನಗಳ ಪ್ರತಿಕ್ರಿಯೆ ಹೆಂಗಪ್ಪ ತಿಳ್ಕೊಳ್ಳೋದು ಅಂತ ಓಡಾಡಿ ಓಡಾಡಿ ಸುಸ್ತಾಗಿ ಒಂದು ಕಡೆ ರಸ್ತೆಯ ಪಕ್ಕದಲ್ಲಿ ಸುಸ್ತು ಪರಿಹಾರ ಮಾಡಿಕೊಳ್ಳುತ್ತಿರಲಾಗಿ ಪಕ್ಕದ ಕಸದ ತೊಟ್ಟಿಯ ಕಡೆಯಿಂದ ಪಿಚಿ ಪಿಚಿ ಮಾತು ಕೇಳಿತು. ತಿರುಗಿ ಮುರುಗಿ ನೋಡಿದರೆ ಯಾರೂ ಕಾಣಲಿಲ್ಲ. ಎರಡು ಹಸುಗಳನ್ನು ಬಿಟ್ಟರೆ - ಒಂದು ಕಪ್ಪ ಹಸು, ಒಂದು ಬಿಳಿ ಹಸು; ಇನ್ನೊಂದು ಬಾರಿ ನೋಡಿದೆ. ನಂಬಿದರೆ ನಂಬಿ ಬಿಟ್ಟರೆ ಬಿಡಿ, ಹಸುಗಳೇ ಮಾತನಾಡ್ತಿದ್ದದ್ದು!

.......

**ಕಪ್ಪು ಹಸು:** ಏನು ಗುರೂ, ಈ ಕಾಲೋನಿ ಜನಕ್ಕೆ ಏನಾಗ್ತಿದೆ ಅಂತ, ಮೊದಲೆಲ್ಲಾ ಹಳಸಿದ ಅನ್ನ, ಅರ್ಧಂಬರ್ಧ ತಿಂದ ತಿಂಡಿ ಎಲ್ಲಾ ತೊಟ್ಟಿಯಲ್ಲಿ ಹಾಕೋರು. ಈಗೀಗ ಬರಿ ಕಾಗದ -ಅದೂ ಕಡಿಮೆ. ಬರಿ ಪ್ಲಾಸ್ಟಿಕ್ ಪೊಟ್ಟಣ, ಬಾಟಲಿ ಅಷ್ಟೆ. ಹಸುಗಳು ಬರಿ ಇದೇ ತಿನ್ಬೇಕು ಅಂತಾರಾ ಹೇಗೆ?

**ಬಿಳಿ ಹಸು:** ಸರಿಯಾಗಿ ಹೇಳಿದೆ ಗುರು, ಈ ಕಾಲೋನಿ ಜನ ಪರವಾಗಿಲ್ಲ ಅಂತ ಈ ತೊಟ್ಟಿಗೆ ಬರ್ತಿದ್ದೆ. ಸ್ವಲ್ಪ ಅನುಕೂಲಸ್ತರ ಕಾಲೋನಿ ಅಂತ. ಹಿಂದೆ ಬಡ ಕಾಲೋನಿಯಲ್ಲಿ ಹೋಗ್ತಿದ್ದೆ. ಅಲ್ಲಿ ಕಸದ ತೊಟ್ಟಿಯಲ್ಲಿ ಏನೂ ಇರ್ತಿದ್ದಿಲ್ಲ. ಬರೀ ಸಾರಾಯಿ ಬಾಟ್ಲಿ ಇರೋದು. ಹಳಸಿದ ಅನ್ನ, ತಿನ್ನುವಂಥದು ಏನೂ ಧಾನ್ಸೆ ಇಲ್ಲ.

**ಕ.ಹಸು:** ಇನ್ನು ಮೇಲೆ ಅದೂ ಇರಲ್ಲ. ಅಲ್ಲೂ ಬರೀ ಪ್ಲಾಸ್ಟಿಕ್ ಪೊಟ್ಟಣ ಇರುತ್ತಷ್ಟೆ. ಗುರೂ!

ಪಟೇಲರ ಸರಕಾರ ಪಾನ ನಿಷೇಧಕ್ಕೆ ಬದಲಾಗಿ ಸಾರಾಯಿಯನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ಹಾಕಿ ಸರಕಾರವೇ ಮಾರುತ್ತೆ ಅಂತಾರೆ ಜನ ಆರೋಗ್ಯಕರವಾದ್ದು ಕುಡಿಲಿ ಅಂತ.

**ಬಿ.ಹಸು:** ಅದಿರಲಿ,ಈ ಕಾಲೋನಿಯಲ್ಲಿ ಹಿಂಗಾದ್ರೆ ಇಡೀ ದೇಶದ ಎಲ್ಲಾ ಜನಗಳ ಗತಿ ಏನು ಅಂತಿಯಾ?

**ಕ.ಹಸು:** ಜನಗಳ ಗತಿ ಅವರೇ ನೋಡಿಕೊಳ್ಳಿ, ದನಗಳ ಗತಿ ಏನು ಅಂತಿಯಾ ನಮ್ಮ ಅಮ್ಮ ಹೇಳ್ತಾ ಇದ್ಲು ಪಟ್ಟಣದ ಕಡೆಗೆ ಬಂದು ಭಾರೀ ತಾಪತ್ರಯ ಆಯ್ತು, ಹಳ್ಳಿ ಕಡೆ ಚೆನ್ನಾಗಿ ಸರಕಾರ ಸರಬರಾಜು ಮಾಡ್ತಾರಲ್ಲ, ಆ ಮೇವು ಸಿಗೋದು. ಹಳ್ಳಿಕಡೆ ಹೋಗೋದೇ ವಾಸಿ ಅಂತ.

**ಬಿ.ಹಸು:** ಹೆ! ಹೆ! ಹೆ!

**ಕ.ಹಸು:** ಯಾಕೋ ನಗ್ತೀಯ?

**ಬಿ.ಹಸು:** ಯಾವ ಲೋಕದಲ್ಲಿದ್ದೀಯಾ ನೀನು. ದನಗಳ ಮೇವು ಜನಗಳೆಲ್ಲಾ ಗುಳುಂ ಮಾಡಿ ನೀರು ಕುಡಿದಿದ್ದಾರಂತೆ.

**ಕ.ಹಸು:** ದನಗಳ ಮೇವು ಜನ ತಿಂದು ಬದುಕ್ತಾರಾ?

**ಬಿ.ಹಸು:** ಅದಕ್ಕೆ ನಿನ್ನನ್ನು ಹಳ್ಳಿ ಹೈದ ಅಂತ ಕರೆಯೋದು ನಾನು. ಏನೂ ಗೊತ್ತಾಗಾಕಿಲ್ಲ. ಮೇವು ತಿಂದದ್ದು ಅಂದ್ರೆ ಮೇವು ತಿಂದದ್ದಲ್ಲ. ಆಂ..... ಅನ್ಬೇಡ, ಮೇವಿಗೆ ಸರಕಾರ ಹಣ ಕೊಡ್ತಾರಲ್ಲ. ಅದನ್ನು ತಿಂದು ಹಾಕಿದ್ದು. ತಿರ್‍ಗಾ ಆಂ... ಅಂತಿಯಲ್ಲ. ಹಣ ತಿಂದದ್ದು ಅಂದ್ರೆ ನೋಟು ತಿಂದು ಹಾಕಿದ್ದಲ್ಲ, ಹಣ ಜೇಬಿಗಿಳಿಸಿ, ದನಗಳಿಗೆ ಮೇವು ಹಾಕಿದ್ವಿ ಅಂತ ಲೆಕ್ಕ ಬರೆದಿಟ್ಟದ್ದು.

**ಕ.ಹಸು:** ಇಂಗೂ ಐತಾ? ಯಾರಪ್ಪಾ ಮಾಡಿದ್ದು ಹಂಗೆ?

**ಬಿ.ಹಸು:** ಮಿನಿಸ್ಟರುಗಳು, ಚೀಫ್ ಮಿನಿಸ್ಟರುಗಳು ದನಗಳ ಡಿಪಾರ್ಟ್‌ಮೆಂಟ್ ಸಾಹೇಬರುಗಳು ಎಲ್ಲಾ ಸೇರಿ.

**ಕ.ಹಸು:** ಅದಕ್ಕೆ ಈಗ ಎಲ್ಲೂ ಮೇವು ಸಿಗಲ್ಲ ಅಂತಿಯಾ?

**ಬಿ.ಹಸು:** ಪಟ್ಟಣದಲ್ಲಿ ಇರ್‍ಲಿ ಹಳ್ಳೀಲಿ ಇರ್‍ಲಿ ಕಾಗದ, ಪ್ಲಾಸ್ಟಿಕ್ ಪೊಟ್ಣ ತಿನ್ಬೇಕು ಅಂತಿಯಾ!

**ಕ.ಹಸು:** ದೇಶ ಪೂರಾ ಹಾಳಾಗೋಯ್ತು ಅಂತಿಯಾ. ಆದ್ರ ಯಾರೋ ಹೇಳ್ತಿದ್ರು ದೇಶದಲ್ಲಿ ಒಳ್ಳೆದೂ ಆಗ್ತಾ ಇದೆ. ಯಾರೋ ಭಾರಿ ಇಸ್ಟಿಕ್ಟ್ ಆಸಾಮಿ ಅಂತೆ. ಪ್ರೆಸಿಡೆಂಟ್ ಆಗ್ಬೇಕು ಅಂತ ಇದ್ದಾರಂತೆ. ಯಾರೋ ಬೊಂಬಾಟ್ ಬಜೆಟ್ ಇಟ್ಟಿದ್ರಂತಲ್ಲಾ. ಅವ್ರ ವಾಪಾಸು ಬಂದಿದ್ದಾರಂತಲ್ಲ.

**ಬಿ.ಹಸು:** ಇಬ್ಬರೂ ಭಾರಿ ಇಸ್ಟಿಕ್ಟ್ ಏನೋ ಸರಿ. ಮೇವು ತಿನ್ನುವವರು ಅಂತೂ ಅಲ್ಲ. ಆದರೆ ಅವ್ರ ನೆಂಟ್ರು ಯಾರೋ ಬ್ಯಾಂಕಲ್ಲಿ ಭಾರೀ ನೋಟೇ ತಿಂದಿದ್ದಾರಂತೆ. ಇವ್ರಿಬ್ರು ಬಂದ್ರೆ ಮೇವು ತಿನ್ನುವ ಪ್ರಶ್ನೆ ಇರಲ್ಲ. ದನುಗಳ ಮೇವು ಜನ ತಿಂತಾರೆ, ಜನಗಳೂ ಭಾರಿ ರೇಶನ್ ಅಕ್ಕಿ, ಗೋಧಿ ತಿಂದಾಕ್ತಾ ಇದ್ದಾರೆ ಅಂತ ಅದಕ್ಕೆ ದುಡ್ಡೇ ಮಡಗಲ್ಲ, ಸರಕಾರ ಮೇವು, ಅಕ್ಕಿ ಕೊಡಕ್ಕಲ್ಲ ಇರೋದು. ಇವೆಲ್ಲ ಮಾಡಕ್ಕೋದ್ರೆ ಭಾರಿ ಟ್ಯಾಕ್ಸ್ ಬೀಳತ್ತೆ. ಟ್ಯಾಕ್ಸ್ ಕಡಿಮೆ ಮಾಡ್ಬೇಕಾದ್ರೆ ಮೇವು, ರೇಶನ್ ಎಲ್ಲಾ ನಿಲ್ಲಿಸ್ಬೇಕು ಅಂತಾರೆ.

**ಕ.ಹಸು:** ಹಂಗಂತಿಯಾ ನಮ್ಮನ್ನ ಯಾರೋ ಕನ್ನಡದ ಕವಿ ಹಂಗಿಸಿದ್ರಲ್ಲಾ ಹಂಗೆ ಇವರೂ ಹಂಗಿಸ್ತಾರೆ ಅಂತಿಯಾ?

.. ಮುಂಗಾಲಲ್ಲಿ ನಡೆಯುತ್ತೀರಿ,ಹಿಂಗಾಲಲ್ಲಿ ಒದೆಯುತ್ತೀರಿ
ಎರಡೆರಡು ನಾಲ್ಕರಿಂದ ಒದ್ದು, ನಡೆದು ಕುಣಿಯುತ್ತೀರಿ

...........

ವೇದ ಮಂತ್ರ ವಿದ್ಯಾ ಬುದ್ಧಿ,ನಿಮಗೆ ಕೊಳೆತು ನಾರೋ ಕಡ್ಡಿ
ಎಲ್ಲಾ ತಿಂದು ತೇಗಿ ತೇಗಿ ಹಾಕುತ್ತೀರಿ ಬರಿ ಲದ್ದಿ

............

**ಬಿ.ಹಸು:** ಪರವಾಗಿಲ್ವೆ ಕವಿವಾಣಿ ಎಲ್ಲಾ ತಿಳ್ಕೊಂಡಿದ್ದೀಯಾ

**ಕ.ಹಸು:** ನಮ್ಮ ದನಗಳು ಅದಕ್ಕೆ ಏನು ಬಿಟ್ಟಿಲ್ಲ. ಜನಗಳ ಮೇಲೆ ಕವನ ಕಟ್ಟಿದ್ದಾರೆ. ತಟ್ಟಿದರೆ ಬೆರಣಿಯಾದೆ, ಕರೆದರೆ ಹಾಲಾದೆ ಇತ್ಯಾದಿ ಇತ್ಯಾದಿ.

ನಮ್ಮ ಮೇವು ಕದ್ದರೆ ನಿಮ್ಮ ನೋಟಾದೆ

............

ನೀನ್ಯಾರಿಗಾದೆಯೋ ಎಲೆ ಮಾನವ?
ಅಂತ!

**ಬಿ.ಹಸು:** ವ್ಹಾ! ವ್ಹಾ! ಸಖತ್ತಾಗಿದೆ! ನನಗೆ ಗೊತ್ತೇ ಇರ್‍ಲಿಲ್ಲಪ್ಪ ಈ ಹಾಡು.

**ಕ.ಹಸು:** ನಿನಗೆಂಗೆ ಗೊತ್ತಿರುತ್ತೆ ಕನ್ನಡದ ಮೇವಿನ ರುಚಿ. ನೀನು ಪಟ್ಟಣದಲ್ಲಿ ಇಂಗ್ಲೀಷ್ ಕಾನ್ವೆಂಟಿನಲ್ಲಿ ಓದಿದೋನಲ್ವ.

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು